ಕನ್ನಡ ಕಟ್ಟಿದವರು ಮಾಲೆ

# ತಾಳಕೇರಿ ಬಸವರಾಜ

---

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

## ತಾಳಕೇರಿ ಬಸವರಾಜ

ಡಾ. ದಸ್ತಗೀರಸಾಬ್ ದಿನ್ನಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

TAALAIKERE BASAVARAJA A Monograph on Taalaikere Bavaraja in kannada Written by Dr. Dastagirsaab Dinni, Published By B.H Mallikarjun, Administrative Officer, Kannada Pustaka Pradhikara, Kannada Bhavana, J.C.Road, Bengaluru -560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012

Pages : Xvi + 64

Copies:1000

Price :50.00

ಮೊದಲ ಮುದ್ರಣ : ೨೦೧೨

ಪುಟಗಳು : Xvi + ೬೪

ಪ್ರತಿಗಳು : ೧೦೦೦

ಬೆಲೆ : ೫೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:

**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್**.

ಆಡಳಿತಾಧಿಕಾರಿಗಳು

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು-೫೬೦ ೦೦೨

ಮುದ್ರಕರು:

ಮೆ|| ಪ್ರಿಂಟ್ ಪಾರ್ಕ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

**ಸಂಪಾದಕ ಮಂಡಳಿ**

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ

ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

**(ಡಾ. ಸಿದ್ಧಲಿಂಗಯ್ಯ)**

ಅಧ್ಯಕ್ಷರು

## ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಈ ನಿಟ್ಟಿನಲ್ಲಿ "ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ, ಕೌಟುಂಬಿಕ ಹಿನ್ನೆಲೆ - ವಿವರಗಳನ್ನು ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿ- ಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೧. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಭಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೨. ಎಲ್ಲಾ ಬರೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರ ತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡ ಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯಗಳಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯು ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಳಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ದಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ, ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ

ಪ್ರಾಧಿಕಾರದ ಗೌರವಾನ್ವಿತ ಸದಸ್ಯರು - ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ - ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗೂ ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ

---

## ಲೇಖಕರ ನುಡಿ

ಕವಿ, ನಾಟಕಕಾರ, ಸಂಗೀತ ನಿರ್ದೇಶಕ, ರಂಗಭೂಮಿ ಕಲಾವಿದರಾಗಿದ್ದ ತಾಳಕೇರಿ ಬಸವರಾಜರವರದು ಬಹುಮುಖ ಪ್ರತಿಭೆ. ಹೈದ್ರಾಬಾದ್- ಕರ್ನಾಟಕದಲ್ಲಿ ಮನೆಮಾತಾಗಿದ್ದ ಇವರು ಕನ್ನಡ ನಾಡು ನುಡಿಗಾಗಿ ತುಂಬಾ ಶ್ರಮಿಸಿದವರು. ಸಾರಸ್ವತ ಲೋಕಕ್ಕೆ ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ನೀಡುವುದರ ಮೂಲಕ ತಮ್ಮ ಅನನ್ಯ ಪ್ರತಿಭೆಯನ್ನು ಮೆರೆದವರು. ಕೇವಲ ಎರಡನೆಯ ತರಗತಿಯವರೆಗೆ ಮಾತ್ರ ಓದಿದ್ದ ಈ ಕವಿ ಇಷ್ಟೊಂದು ಅದ್ಭುತವಾಗಿ ಬರೆದಿರುವುದನ್ನು ನೋಡಿದರೆ ಸೋಜಿಗ ಎನಿಸುತ್ತದೆ.

ತಾಳಕೇರಿಯಂತಹ ಅಪರೂಪದ ಪ್ರತಿಭೆಯನ್ನು ಹೊಂದಿದ್ದ ಅನೇಕ ಪ್ರತಿಭೆಗಳು ಈ ನಾಡಿನಲ್ಲಿ ಸದ್ದಿಲ್ಲದೆ ಆಗಿ ಹೋಗಿವೆ. ಇಂತಹ ಮಹಾನುಭಾವರಂತಹವರನ್ನು ನಾಡಿಗೆ ಪರಿಚಯಿಸುವ ಉದ್ದೇಶದಿಂದ "ಕನ್ನಡ ಕಟ್ಟಿದವರು" ಎನ್ನುವ ಮಾಲಿಕೆಯ ವಿಶಿಷ್ಟ ಯೋಜನೆಯನ್ನು ನಮ್ಮಿಕೊಂಡ ಕನ್ನಡ ಪುಸ್ತಕ ಪ್ರಾಧಿಕಾರದ ಕ್ರಮ ಶ್ಲಾಘನೀಯವಾದುದು.

ತಾಳಕೇರಿ ಬಸವರಾಜರವರ ಬಗೆಗೆ ಪುಸ್ತಕವನ್ನು ಬರೆಯಲು ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿದ್ದಲಿಂಗಯ್ಯನವರಿಗೂ, ಆಡಳಿತಾಧಿಕಾರಿಗಳಾದ ಬಿ.ಹೆಚ್. ಮಲ್ಲಿಕಾರ್ಜುನ್‌ಅವರಿಗೂ ಪ್ರೀತಿಯ ವಂದನೆಗಳು. ಅದೇ ರೀತಿ ಕೃತಿಯನ್ನು ಬರೆಯುವ ಸಂದರ್ಭದಲ್ಲಿ ನೆರವಾದ ಗುರುಗಳಾದ ಡಾ.ಎಚ್.ಟಿ. ಪೋತೆಯವರಿಗೂ, ಮಾಹಿತಿಯನ್ನು ಒದಗಿಸಿದ ಸಹೋದರಿ ಭಾರತಿ ಬಸವರಾಜರವರಿಗೂ, ಕವಿಯ ಕುಟುಂಬದವರಿಗೂ ವಂದನೆಗಳು.

**ದಸ್ತಗೀರಸಾಬ್ ದಿನ್ನಿ**

**ಪರಿವಿಡಿ**


೧. ಪೀಠಿಕೆ

೨. ಜೀವನ ಮತ್ತು ಸಾಧನೆ

೩. ಸಾಹಿತ್ಯ: ಸಾಮಾಜಿಕತೆ ಮತ್ತು ಕನ್ನಡ ಪ್ರಜ್ಞೆ

೪. ತತ್ತ್ವಪದ ಸಾಹಿತ್ಯ

೫. ಸಮಾರೋಪ



ತಾಳಕೇರಿ ಬಸವರಾಜ

## ೧. ಪೀಠಿಕೆ

ಹೈದ್ರಾಬಾದ್ ಕರ್ನಾಟಕವನ್ನು ಬೇರೆ ಭಾಗಕ್ಕೆ ಹೋಲಿಕೆ ಮಾಡಿದರೆ ಇದು ವಿಶಿಷ್ಟವಾಗಿ ನಿಲ್ಲುತ್ತದೆ. ಇದಕ್ಕೆ ಕಾರಣ ಇಡೀ ದೇಶ ಸ್ವಾತಂತ್ರ್ಯ ಪಡೆದು ಸಂಭ್ರಮದಲ್ಲಿ ನಲಿಯುತ್ತಿದ್ದರೆ ಈ ಭಾಗಕ್ಕೆ ಆ ಭಾಗ್ಯ

ಲಭಿಸಿರಲಿಲ್ಲ. ಏಕೆಂದರೆ ಈ ಪ್ರದೇಶವನ್ನು ನಿಜಾಮರು ಆಳುತ್ತಿದ್ದರು. ಅವರ ಕಪಿಮುಷ್ಟಿಯಿಂದ ಪಾರಾಗಿ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಈ ಭಾಗಕ್ಕೆ ವರ್ಷಗಳೇ ಉರುಳಬೇಕಾಯಿತು. ಹೀಗಾಗಿ ಈ ಭಾಗ ಒಂದು ರೀತಿಯಲ್ಲಿ ಭಾಷಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ತುಂಬಾ ನಲುಗಿದ ಪ್ರದೇಶವಾಗಿದೆ.

ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಗುಲ್ಬರ್ಗಾ, ಬೀದರ್, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳು ಬರುತ್ತವೆ. ನಿಜಾಮರ ಆಡಳಿತಕ್ಕೆ ಒಳಪಟ್ಟ ಪ್ರದೇಶ ಇದಾಗಿದ್ದರಿಂದ ಇಲ್ಲಿನ ಹಿರಿಯರೆಲ್ಲ ಉರ್ದುವಿನಲ್ಲೇ ವಿದ್ಯಾಭ್ಯಾಸವನ್ನು ಮಾಡಬೇಕಾದ ಅನಿವಾರ್ಯತೆಯಿತ್ತು. ಹೀಗಾಗಿ ಇಲ್ಲಿನ ಹಿರಿಯ ಕವಿಗಳಾದ ಸಿದ್ದಯ್ಯ ಪುರಾಣಿಕ, ಜಯತೀರ್ಥ ರಾಜಪುರೋಹಿತ, ಶಾಂತರಸ, ದೇವೇಂದ್ರಕುಮಾರ ಹಕಾರಿ, ಮುಂತಾದವರು ಉರ್ದುವಿನ ಜೊತೆಗೆ ಕನ್ನಡವನ್ನು ಕಲಿಯಬೇಕಾಯಿತು.

ಈ ಭಾಗದಲ್ಲಿ ಕನ್ನಡದ ವಾತಾವರಣವನ್ನು ಮೂಡಿಸಲಿಕ್ಕೆ ಪಂಡಿತ ತಾರನಾಥ, ಜಯತೀರ್ಥ ರಾಜಪುರೋಹಿತ, ಮಾನ್ವಿ ನರಸಿಂಗರಾಯ, ಡಿ.ಕೆ. ಭೀಮಸೇನರಾವ್, ತವಗ ಭೀಮಸೇನರಾವ್, ಕಪಟರಾಳ ಕೃಷ್ಣರಾವ್, ಪಾಂಡುರಂಗರಾವ್ ದೇಸಾಯಿ ಮುಂತಾದವರ ಜೊತೆಗೆ ಸಿದ್ದಯ್ಯ ಪುರಾಣಿಕ, ಶಾಂತರಸರು ತುಂಬಾ ಶ್ರಮವಹಿಸಿದ್ದಾರೆ. ಇವರೆಲ್ಲ ಕನ್ನಡ ಕಟ್ಟಿದವರು. ಇವರೊಂದಿಗೆ ಕನ್ನಡದ ಕೈಂಕರ್ಯವನ್ನು ಕೈಗೊಂಡವರು ಅನೇಕರು.

ಹೈದ್ರಾಬಾದ್-ಕರ್ನಾಟಕ ಪ್ರದೇಶ ವಚನಕಾರರಿಗೆ, ದಾಸರಿಗೆ, ತತ್ವ ಪದಕಾರರಿಗೆ ನೆಲೆಬೀಡು. ನವೋದಯದಿಂದ ಹಿಡಿದು ಈ ಹೊತ್ತಿನ ದಲಿತ - ಬಂಡಾಯದವರೆಗೂ ಹಲವಾರು ಬರಹಗಾರರು ತಮ್ಮ ಸೃಜನಶೀಲ ಸಾಹಿತ್ಯದ ಮೂಲಕ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಈ ಭಾಗವನ್ನು ಯಾವುದೇ ಭಾಗಕ್ಕೂ ಹೋಲಿಕೆ ಮಾಡಿದರೂ ಕಮ್ಮಿಯಿಲ್ಲ ಎಂದೆನಿಸುತ್ತದೆ.

ಬೌದ್ಧ ಮತ್ತು ಜೈನಧರ್ಮಕ್ಕೆ ತನ್ನದೇ ಆದ ಇತಿಹಾಸವನ್ನು ಹೊಂದಿರುವ 'ಕೊಪಣ ನಗರ' ಎಂದೇ ಕರೆಯಲ್ಪಡುವ 'ಕೊಪ್ಪಳ ಜಿಲ್ಲೆ ಸಾಂಸ್ಕೃತಿಕವಾಗಿ ಇಂದಿಗೂ ತನ್ನ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ. ಇಂತಹ ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ಬರುವ 'ತಾಳಕೇರಿ' ಎನ್ನುವ ಪುಟ್ಟ ಹಳ್ಳಿಯೇ ಬಸವರಾಜರವರದು.

## ೧. ಜೀವನ ಮತ್ತು ಸಾಧನೆ

ತಾಳಕೇರಿ ಬಸವರಾಜ ಹುಟ್ಟಿದ್ದು ೧೯೩೦ರಲ್ಲಿ. ಈಗಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಪುಟ್ಟ ಊರಾದ ತಾಳಕೇರಿಯಲ್ಲಿ. ಹೂಗಾರ ಕುಟುಂಬದ ಸುಸಂಸ್ಕೃತ ಮನೆತನದ ಬಾಳಪ್ಪ ಹೂಗಾರ ಮತ್ತು ಸಾವಿತ್ರಮ್ಮನವರೇ ಇವರ ತಂದೆ ತಾಯಿಗಳು. ಹೂಮಾಲೆ ಕಟ್ಟುವುದು; ಬಿಡಿ ಹೂಗಳನ್ನು ಮಾರುವುದು ಇವರ

ಮನೆತನದ ಉದ್ಯೋಗ. ಹಾಗೆ ನೋಡಿದರೆ ಇವರ ಬದುಕು ಕಷ್ಟದ ಬದುಕು. ಇಂತಹ ಕಷ್ಟದ ಬದುಕಿನಲ್ಲೇ ಮಗ ಬಸವರಾಜರನ್ನು ಪ್ರೀತಿ ಮಮತೆಯಿಂದ ಬೆಳೆಯಿಸಿದರು. ಇವರ ಮನೆಯಲ್ಲಿ ಹೂವಿನ ಪರಿಮಳದೊಂದಿಗೆ ಸಂಗೀತ - ಸಾಂಸ್ಕೃತಿಕ ಪರಿಮಳವು ಇತ್ತು. ಇದಕ್ಕೆ ಸಾಕ್ಷಿಯೆಂಬಂತೆ ಬಸವರಾಜರ ಅಜ್ಜ, ಮುತ್ತಜ್ಜರು ಬಯಲಾಟ - ದಪ್ಪಿನಾಟ ಮುಂತಾದ ಜನಪದ ಕಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೆಣ್ಣು ಪಾತ್ರಗಳನ್ನು ಮಾಡುವುದು. ನೃತ್ಯ ಮಾಡುವುದಲ್ಲದೆ ಹಿನ್ನೆಲೆಯಲ್ಲಿ ರಂಗಗೀತೆಗಳನ್ನು ಕೂಡ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಬಸವರಾಜರವರ ತಂದೆಯು ಕೂಡ ರಂಗಗೀತೆಗಳನ್ನು ಹಾಡುತ್ತ, ಬಯಲಾಟಗಳಲ್ಲಿ ಪಾತ್ರ ಮಾಡುತ್ತಿದ್ದರು. ಕಣಿ, ಮೃದಂಗ, ತಬಲಾಗಳನ್ನು ಸ್ವತಃ ನುಡಿಸುತ್ತಿದ್ದರು. ಹೀಗಾಗಿಯೇ ಸಹಜವಾಗಿ ಈ ಸಾಂಸ್ಕೃತಿಕ ವಾತಾವರಣ ಬಸವರಾಜರವರ ವ್ಯಕ್ತಿತ್ವದ ಮೇಲೆ ಇಡಿಯಾದ ಪ್ರಭಾವ ಬೀರಿತು. ಬಸವರಾಜರವರು ಸಾಹಿತ್ಯ, ಜನಪದ, ಕಲೆ-ಸಂಗೀತಗಳಲ್ಲಿ ಆಸಕ್ತಿ ವಹಿಸಲು ಅವರಲ್ಲಿನ ಸುಪ್ತ ಪ್ರತಿಭೆ ಅರಳಿ ಪಲ್ಲವಿಸಲು ಸಾಧ್ಯವಾಯಿತು.

ಬಸವರಾಜರವರು ಸಾಹಿತ್ಯ, ಸಂಗೀತ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಹಂತ ಹಂತವಾಗಿ ಬೆಳೆದು ಬಂದಿರುವುದನ್ನು ನೋಡಿದರೆ ಒಂದು ರೀತಿಯಲ್ಲಿ ಆಶ್ಚರ್ಯ ಕೂಡ ಆಗುತ್ತದೆ. ಏಕೆಂದರೆ ಅವರು ಓದಿದ್ದು ಕೇವಲ ಎರಡನೆಯ ತರಗತಿಯವರೆಗೆ ಮಾತ್ರ ಹುಟ್ಟೂರಿನಲ್ಲಿಯೇ ಶಾಲೆಗೆ ಹೋಗಿ ಮನೆಯ ಆರ್ಥಿಕ ಪರಿಸ್ಥಿತಿಯಿಂದ ಓದನ್ನು ಅರ್ಧಕ್ಕೆ ಬಿಟ್ಟು ಗೋವುಗಳನ್ನು ಕಾಯುವ ಕೆಲಸ, ಹೊಲದಲ್ಲಿ ದುಡಿಯುವುದು ಮಾಡುತ್ತಿದ್ದರು. ಸಣ್ಣ ವಯೋಮಾನದಲ್ಲೇ ಅನಿವಾರ್ಯವಾಗಿ ಬದುಕಿನ ನೊಗಕ್ಕೆ ಹೆಗಲು ಕೊಟ್ಟ ಸ್ಥಿತಿ ಇವರದಾಗಿತ್ತು. ನಮ್ಮಲ್ಲಿ ಸಾಧನೆಯನ್ನು ಮಾಡಿದ ಅನೇಕ ಮಹಾನುಭಾವರಾದ ಮಲ್ಲಿಕಾರ್ಜುನ ಮನ್ಸೂರು, ಸಿದ್ಧರಾಮ ಜಂಬಲದಿನ್ನಿ, ಮುಂತಾದವರು ಶಾಲೆಯನ್ನು ಕಲಿತದ್ದು ಅತ್ಯಂತ ಕಡಿಮೆ. ಆದರೆ ಅವರೆಲ್ಲರು ಕಲಿತದ್ದು ಪ್ರಪಂಚ ಎನ್ನುವ ವಿಶ್ವವಿದ್ಯಾಲಯದಲ್ಲಿ. ಈ ವಿಶ್ವವಿದ್ಯಾಲಯದಲ್ಲಿ ಕಲಿತೇ ಅವರು ಸುಸಂಸ್ಕೃತರಾದದ್ದು, ಇಡೀ ನಾಡಿನ ಗಮನ ಸೆಳೆದು ಅಜರಾಮರರಾಗಿದ್ದು. ಹೀಗಾಗಿ ತಾಳಕೇರಿ ಬಸವರಾಜರವರು ಕೂಡ ತಮ್ಮದೇ ಆದ ಕ್ಷೇತ್ರಗಳಲ್ಲಿ ಒಳ್ಳೆಯ ಸಾಧನೆಯನ್ನು ಮಾಡಿ ಕನ್ನಡ ನಾಡು - ನುಡಿ, ಕನ್ನಡ ಸಂಸ್ಕೃತಿಗೆ ಶ್ರಮಿಸಿದ್ದಾರೆ.

ಬಸವರಾಜರವರ ಬದುಕು ಕಷ್ಟದ ಕುಲುಮೆಯಲ್ಲಿ ಎಳೆಯ ವಯಸ್ಸಿನಲ್ಲೇ ಬೇಯುತಿರುವಾಗ ಅದೃಷ್ಟ ಎನ್ನುವಂತೆ ಇವರಿಗೆ ಪರಿಚಯವಾದದ್ದು ಪಂಡಿತ ಪುಟ್ಟರಾಜ ಗವಾಯಿಗಳು. ಇವರ ದರ್ಶನವಾದದ್ದು ಕೂಡ ಅನಿರೀಕ್ಷಿತ. ಇವರ ದರ್ಶನ-ಪರಿಚಯದಿಂದ ತಾಳಕೇರಿ ಬಸವರಾಜರವರ ಬದುಕಿನ ದಿಕ್ಕೇ ಬದಲಾಯಿತು. ಬಸವರಾಜರವರಿಗೆ ಎಳೆಯ ವಯಸ್ಸಿನಿಂದಲೇ ಸಂಗೀತ - ಕಲೆಯ ಬಗೆಗೆ ಪ್ರೀತಿ ಮತ್ತು ಆಸಕ್ತಿಗಳಿದ್ದವು. ಅವುಗಳಿಗೆ ಆಗ ನೀರೆರೆದಂತಾಯಿತು. ಹಾಗೆ ನೋಡಿದರೆ ಪುಟ್ಟರಾಜ ಗವಾಯಿಗಳಿಗಿಂತ ಮುಂಚೆ ಸಂತ ಗಿರಿಯಪ್ಪ ಎಂಬುವವರಲ್ಲಿ ಸಂಗೀತವನ್ನು ಅಭ್ಯಾಸ ಮಾಡಿದ್ದರಾದರೂ ಅದು ಅಲ್ಪಸ್ವಲ್ಪವಾಗಿತ್ತು.

ಬಾಲ್ಯದಲ್ಲಿರುವಾಗಲೇ ತಾಳಕೇರಿ ಬಸವರಾಜರವರು 'ಅಕ್ಷಯಾಂಬರ' ಎನ್ನುವ ನಾಟಕದಲ್ಲಿ ಮುಖಕ್ಕೆ ಬಣ್ಣ ಹಚ್ಚುವುದರ ಮೂಲಕ ಬಣ್ಣದ ಬದುಕಿಗೆ ಪಾದಾರ್ಪಣೆ ಮಾಡಿದರು. ಅದರಲ್ಲಿ ಅವರು 'ದ್ರೌಪದಿ' ಪಾತ್ರವನ್ನು ಅಚ್ಚುಕಟ್ಟಾಗಿ ಅಭಿನಯಿಸುವುದರ ಮೂಲಕ ಸಾವಿರಾರು ಪ್ರೇಕ್ಷಕರ ಮನವನ್ನು ಗೆದ್ದು ಸೈ ಎನಿಸಿಕೊಂಡರು. ಆಗ ಬಸವರಾಜರವರ ವಯಸ್ಸು ಹನ್ನೊಂದು. ಮಂಗಳೂರಿನ ಶಾಖಾ ಮಠಕ್ಕೆ ಬಂದು ಶ್ರೀ ಚನ್ನಮಲ್ಲ ಮಹಾಸ್ವಾಮಿಗಳನ್ನು ಕಂಡಾಗ ಅವರು ಕರೆದುಕೊಂಡು ಬಂದದ್ದು ಪರಮ ಪೂಜ್ಯ ಗುರುವರ್ಯ ಗಾನಯೋಗಿ ಪಂಚಾಕ್ಷರ ಗವಾಯಿಗಳ ಸನ್ನಿಧಿಗೆ. ಆಗ ಪರಿಚಯವಾಗಿ ಶಿಷ್ಯತ್ವವನ್ನು ದಯಪಾಲಿಸಿದವರೆ ಪಂಡಿತ ಪುಟ್ಟರಾಜ ಗವಾಯಿಗಳು.

ಮೊದಲು ಪಂಡಿತ ಪುಟ್ಟರಾಜ ಗವಾಯಿಗಳ ನಾಟಕ ಕಂಪನಿಯಲ್ಲಿ ಸೇವೆ ಮಾಡುತ್ತ ಹತ್ತಾರು ಹಳ್ಳಿಗಳಲ್ಲಿ ಕ್ಯಾಂಪ್ ಮಾಡಿದರು. ಕೊನೆಗೆ ಗುರುಗಳ ಆಶೀರ್ವಾದದೊಂದಿಗೆ ಗೆಳೆಯರ ಸಹಕಾರ-ಪ್ರೀತಿಯನ್ನು ಬಳಸಿಕೊಂಡು ೧೯೬೦ರ ಸಂದರ್ಭದಲ್ಲಿ 'ವಿಜಯಕುಮಾರ ನಾಟ್ಯ ಸಂಘ' ಎಂಬ ಹೆಸರಿನಲ್ಲಿ ನಾಟಕ ಕಂಪನಿಯೊಂದನ್ನು ಸ್ವತಃ ಹುಟ್ಟು ಹಾಕಿದರು. ಈ ಕಂಪನಿಯ ಕಲಾವಿದರಾಗಿ; ಸಂಗೀತ ನಿರ್ದೇಶಕರಾಗಿ; ಮಾಲೀಕರಾಗಿ ಕಾರ್ಯ ನಿರ್ವಹಿಸಿದರು. ಅವರ ದುರ್ದೈವವೋ ಏನೋ ಕಂಪನಿಯು ನಿರೀಕ್ಷಿಸಿದ ಪ್ರಮಾಣದಲ್ಲಿ ಬೆಳೆಯಲಿಲ್ಲ. ನಾಟಕ ಕಂಪನಿಯ ಬಗೆಗೆ ಬಣ್ಣಬಣ್ಣದ ನೂರಾರು ಕನಸುಗಳನ್ನು ತಾಳಕೇರಿಯವರು ಕಟ್ಟಿಕೊಂಡಿದ್ದರು. ನಾಟಕಗಳ ಮುಖಾಂತರ ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸಬೇಕು, ಉತ್ತಮ ಸಂಸ್ಕೃತಿಯನ್ನು ಬಿತ್ತಬೇಕು. ಒಳ್ಳೆಯ ನಾಟಕಗಳನ್ನು ನೋಡುವ ಪ್ರೇಕ್ಷಕರನ್ನು ತಯಾರಿಸಬೇಕೆಂದು ಅಂದುಕೊಂಡಿದ್ದರು. ಆದರೆ ಕಂಪನಿ ಈ ಸ್ಥಿತಿಗೆ ಬಂದಿದ್ದರಿಂದ ಅನಿವಾರ್ಯವಾಗಿ ಮುಚ್ಚಬೇಕಾಯಿತು. ನಾಟಕ ಕಂಪನಿ ಮುಚ್ಚಲು ಬೇರೆ ಬೇರೆ ಕಾರಣಗಳಿದ್ದವು. ಇದಾವುದರ ಬಗೆಗೂ ತಲೆಕೆಡಿಸಿಕೊಳ್ಳದೆ; ನಿರಾಶರಾಗದೆ ಬಸವರಾಜರವರು ಪುನಃ ಪುಟ್ಟರಾಜ ಗವಾಯಿಗಳ ನಾಟಕ ಕಂಪನಿಗೆ ಬಂದು ಸೇರಿದರು.

ಆಗ ಬಸವರಾಜರವರು ತಮ್ಮನ್ನು ಮತ್ತೊಮ್ಮೆ ಈ ಕಂಪನಿಯಲ್ಲಿ ತೊಡಗಿಸಿಕೊಂಡರು. ಈ ಕಂಪನಿಯ ಮುಖಾಂತರ ನಾಡು ಸುತ್ತಿದ ಅವರು ಅತ್ಯಂತ ಜನಪ್ರಿಯ ಕಲಾವಿದರಾಗಿ ತಮ್ಮ ಪ್ರತಿಭೆಯನ್ನು ಮೆರೆದರು. ಸತತ ಇಪ್ಪತ್ತು ವರ್ಷಗಳ ಕಾಲ ಇದೇ ಕಂಪನಿಯಲ್ಲಿ ಸೇವೆ ಸಲ್ಲಿಸಿದರು. ಅವರ ಕಲಾ ಪ್ರತಿಭೆಯನ್ನು ಗುರುತಿಸಿ ಅವರನ್ನು ಅರಸಿ ಬಂದ ಪ್ರಶಸ್ತಿಯೆಂದರೆ 'ನಾಟ್ಯಕಲಾ ರತ್ನ'.

ಅವರು ಮೊದಲು ನಾಟಕಗಳಲ್ಲಿ ಪಾತ್ರ ಮಾಡುವ ಕಾಲ ಹೇಗಿತ್ತೆಂದರೆ ಕಲಾವಿದ ಯಾವುದೇ ಪಾತ್ರ ಮಾಡುವುದಕ್ಕೂ ಸಿದ್ಧರಾಗಿ; ಪುರುಷರೇ ಮಹಿಳೆಯರ ಪಾತ್ರವನ್ನು ಮಾಡಬೇಕಾಗಿತ್ತು. ಅದು ಒಂದು ಸವಾಲಿನ ಕೆಲಸವೇ ಸರಿ. ಆದರೆ ತಾಳಕೇರಿ ಬಸವರಾಜರವರದು ಎಂತಹ ಮನಸ್ಸೆಂದರೆ ಅವರು ಯಾವ ಪಾತ್ರವನ್ನು ಕೊಟ್ಟರೂ ನಿರಾಕರಿಸುತ್ತಿರಲಿಲ್ಲ. ಕೊಟ್ಟ ಪಾತ್ರವನ್ನು ಪ್ರೀತಿಯಿಂದ ಸ್ವೀಕರಿಸಿ ಆ ಪಾತ್ರಕ್ಕೆ ಜೀವ ತುಂಬಲು ; ಆ ಪಾತ್ರವೇ ತಾನಾಗಲು ಯತ್ನಿಸಿ ಯಶಸ್ವಿಯಾಗುತ್ತಿದ್ದರು. ನೃತ್ಯವನ್ನು ಮಾಡುವುದರ ಮೂಲಕ ತಮ್ಮ ನಿಜವಾದ

ಪ್ರತಿಭೆಯನ್ನು ಮೆರೆದು ಪ್ರೇಕ್ಷಕರ ಮೆಚ್ಚುಗೆ ಗಳಿಸುತ್ತಿದ್ದರು. ಜೊತೆಗೆ ಸೊಗಸಾಗಿ ರಂಗಭೂಮಿಯ ಹಿನ್ನೆಲೆಯಲ್ಲಿದ್ದುಕೊಂಡು ಹಾಡುತ್ತಿದ್ದರು. ಅವರು ಎಂತಹ ಕಂಠವನ್ನು ಪಡೆದುಕೊಂಡಿದ್ದರೆಂದರೆ ಹೆಣ್ಣು ಗಂಡಿನ ಧ್ವನಿಯಲ್ಲಿ ಹಾಡುವುದರ ಮೂಲಕ ಸಾವಿರಾರು ಕಲಾಭಿಮಾನಿಗಳನ್ನು ಮೋಡಿ ಮಾಡುತ್ತಿದ್ದರು. ಪ್ರೇಕ್ಷಕರು ಮತ್ತೊಮ್ಮೆ ಅವರ ಹಾಡುಗಳನ್ನು ಹಾಡುವಂತೆ ಪ್ರೀತಿಯಿಂದ ಒತ್ತಾಯಿಸುತ್ತಿದ್ದರು.

ತಾಳಕೇರಿ ಬಸವರಾಜರವರು 'ಸತಿ ಸುಕನ್ಯಾ'ದ 'ಸಖಿ' ಪಾತ್ರ, ಹೇಮರೆಡ್ಡಿ ಮಲ್ಲಮ್ಮ, ನೆಗೆವೆಣ್ಣೆ ನಾಗಮ್ಮ ಮುಂತಾದ ಪಾತ್ರಗಳ ಮುಖಾಂತರ ಆ ಹೊತ್ತಿನ ಪ್ರೇಕ್ಷಕರ ಮನೆ ಮಾತಾಗಿದ್ದರು. ಅವರು ಮಾಡಿದ ಇಪ್ಪತ್ತೈದು ನಾಟಕಗಳಲ್ಲೂ ಸ್ತ್ರೀ ಪಾತ್ರಗಳೇ ಅವರಿಗೆ ಅತಿ ಹೆಚ್ಚು ಕೀರ್ತಿಯನ್ನು ತಂದುಕೊಟ್ಟ ಪಾತ್ರಗಳಾಗಿವೆ. ಸ್ತ್ರೀ ಪಾತ್ರಗಳ ಮುಖಾಂತರ ಅವರು ಜೀವನ ಮೌಲ್ಯ, ಕನ್ನಡ ಸಂಸ್ಕೃತಿ, ಆದರ್ಶಗಳನ್ನು ಪ್ರೇಕ್ಷಕರಿಗೆ ಕಟ್ಟಿಕೊಡುತ್ತಿದ್ದರು ಎನ್ನುವುದು ಗಮನಿಸಬೇಕಾದ ಅಂಶ.

ನಾಟಕಗಳಲ್ಲಿ ಅಭಿನಯಿಸುವುದರೊಂದಿಗೆ ಅವರು ಸಂಗೀತಕ್ಕೂ ಬಹಳ ಮಹತ್ವ ಕೊಟ್ಟಿದ್ದರು. ಬಿಡುವಿನ ವೇಳೆಯಲ್ಲಿ ಗುರುಗಳ ಹತ್ತಿರ ಬಂದು ಸಂಗೀತ ಪಾಠವನ್ನು ಹೇಳಿಸಿಕೊಳ್ಳುತ್ತಿದ್ದರು. ನಂತರ ನಿರಂತರವಾಗಿ ಅಭ್ಯಾಸ ಮಾಡುತ್ತಿದ್ದರು. ಅವರಲ್ಲಿ ಶ್ರದ್ಧೆ, ಸೇವಾ ಮನೋಭಾವ, ಹಿಡಿದ ಗುರಿಯನ್ನು ಸಾಧಿಸುವ ಛಲ, ಕನ್ನಡ ಭಾಷೆ, ಕನ್ನಡ ಸಂಸ್ಕೃತಿಯ ಬಗೆಗೆ ಅಭಿಮಾನ -ಪ್ರೀತಿಯಿದ್ದವು. ಹೀಗಾಗಿ ಸಂಗೀತದಲ್ಲಿ ಅವರು ಹಂತ ಹಂತವಾಗಿ ಮೇಲೆ ಬಂದರು. ಅನೇಕ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟರು. ಕರ್ನಾಟಕವಲ್ಲದೆ ತಮಿಳುನಾಡು, ಆಂಧ್ರ ಪ್ರದೇಶ, ಅಸ್ಸಾಂ, ಕೇರಳ, ಉತ್ತರ ಪ್ರದೇಶ, ಕಾಶ್ಮೀರ ಹೀಗೆ ಭಾರತದ ಅನೇಕ ಕಡೆ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಕರ್ನಾಟಕವನ್ನು ಪ್ರತಿನಿಧಿಸಿ ಕನ್ನಡದ ಕಂಪನ್ನು ಹರಡಿಸಿದವರು.

ಅವರ ಪ್ರತಿಭೆ, ಸರಳತೆ, ಸೌಜನ್ಯ, ಅಪರೂಪದ ವ್ಯಕ್ತಿತ್ವ ಗುರುಗಳಿಗೆ ಮೆಚ್ಚುಗೆಯಾಗಿದ್ದವು. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪ್ರಭಾವ ಅವರ ಮೇಲೆ ಸಾಕಷ್ಟು ಆಗಿದೆ. ಗುರುಗಳು ವಿದ್ಯಾರ್ಥಿಗಳನ್ನು ನೋಡುವ ರೀತಿ, ಪುಣ್ಯಾಶ್ರಮದಲ್ಲಿನ ಸುಸಂಸ್ಕೃತ ವಾತಾವರಣ, ಅಲ್ಲಿ ನಡೆಯುವ ಕ್ರಿಯಾಶೀಲ ಚಟುವಟಿಕೆಗಳು, ಕನ್ನಡ ಪರವಾದಂತಹ ಸಾಂಸ್ಕೃತಿಕ ವಾತಾವರಣ ತಾಳಕೇರಿ ಬಸವರಾಜರವರ ಮೇಲೆ ಸಾಕಷ್ಟು ಪ್ರಭಾವವನ್ನುಂಟು ಮಾಡಿದೆ. ಸಂಗೀತ - ಸಾಹಿತ್ಯ, ಕಲೆಗಳ ಕಡೆ ಪ್ರಾರಂಭದಲ್ಲೇ ಮುಖ ಮಾಡಲು ಒಂದು ರೀತಿಯಲ್ಲಿ ಕೌಟುಂಬಿಕ ವಾತಾವರಣ ಪ್ರೇರಣೆಯನ್ನು ಒದಗಿಸಿದರೆ ಅದು ಅರಳಿ ಘಮ ಘಮಿಸಿ ನಾಡಿನ ತುಂಬೆಲ್ಲ ಪಸರಿಸಲು ಇಂತಹ ಪುಣ್ಯಾಶ್ರಮ ಕಾರಣವಾಗಿದೆ. ಶ್ರೀ ಪಂಚಾಕ್ಷರಗವಾಯಿ, ಡಾ. ಪಂಡಿತ ಪುಟ್ಟರಾಜ ಗವಾಯಿ, ಶ್ರೀ ಚನ್ನವೀರ ಶಾಸ್ತ್ರಿಗಳ ಆಶೀರ್ವಾದ ಅವರ ಪ್ರತಿಯೊಂದು ಕೆಲಸಕ್ಕೂ ಪ್ರೇರಕವಾಗಿರುವುದರಲ್ಲಿ ಅನುಮಾನವಿಲ್ಲ.

ತಾಳಕೇರಿ ಬಸವರಾಜರವರು ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ನಾಗಮ್ಮನ ಪಾತ್ರ ಮಾಡುತ್ತಿದ್ದರು. ಈ ನಾಟಕ ಅಂದಿನ ಕಾಲದಲ್ಲಿ ಆರು ನೂರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡಿತ್ತು. ನಾಟಕದಲ್ಲಿನ ಅವರ ಪಾತ್ರ ಮಲ್ಲಮ್ಮಳಿಗೆ ಹಿಂಸೆಯನ್ನು ಕೊಡುವಂತಹದ್ದು. ಒಮ್ಮೆ ನಾಟಕದಲ್ಲಿ ಜೀವ ತುಂಬಿ ಕಲಾತ್ಮಕವಾಗಿ ಪಾತ್ರ

ಮಾಡುತ್ತಿದ್ದಾಗ ಪ್ರೇಕ್ಷಕಿ ಒಬ್ಬರು ಇದ್ದಕ್ಕಿದ್ದ ಹಾಗೆ ರಂಗದ ಮೇಲೆ ಏರಿ ಬಂದು ಅವರ ಕೆನ್ನೆಗೆ ಪಟ ಪಟನೆ ಬಾರಿಸಿದಳು. ಆಗ ಅವರು ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು. ಅಂದೇ ತಮ್ಮ ಕಲೆ ಸಾರ್ಥಕ ಎಂದು ಭಾವಿಸಿದರು ಎಂಬ ಅಂಶವನ್ನು ತಮ್ಮ ತಂದೆ ಹೇಳಿದ್ದ ಪ್ರಸಂಗವನ್ನು ಅವರ ಮಗ ಸಿದ್ಧಲಿಂಗೇಶ್ವರ ನೆನಪಿಸಿಕೊಳ್ಳುತ್ತಾರೆ.

ತಾಳಕೇರಿ ಬಸವರಾಜರು ಇಬ್ಬರು ಪತ್ನಿಯರನ್ನು ಹೊಂದಿದ್ದರು. ಅವರಿಗೆ ಶರಣುಪ್ರಸಾದ, ರಾಜಶೇಖರ, ಸಿದ್ದಲಿಂಗೇಶ್ವರ ಎಂಬ ಮೂರು ಜನ ಗಂಡು - ಮಕ್ಕಳು ಹಾಗೂ ಮಹಾನಂದಳೆಂಬ ಒಬ್ಬ ಮಗಳು ಇದ್ದಾರೆ. ಮನೆ ಮನೆಗೆ ಹೂ ಕೊಟ್ಟು ಬರುವ ಕೆಲಸ ಅವರದು. ಮೊದಲೇ ವಿವರಿಸಿದಂತೆ ಅತ್ಯಂತ ಬಡತನದ ಬದುಕು. ಯಾರಾದರೂ ಕವಿಗಳನ್ನು ನಿಮ್ಮ ಆಸ್ತಿ ಏನು? ಎಂದು ಕೇಳಿದರೆ "ಒಂದು ಎಕರೆ ಹೊಲ, ಒಂದು ಚಿಕ್ಕ ಮನೆ. ದೊಡ್ಡ ಸಂಸಾರ. ಮಕ್ಕಳೇ ನನ್ನ ಆಸ್ತಿ" ಎಂದು ಬಾಯಿ ತುಂಬಾ ನಗುತ್ತ ಹೇಳುತ್ತಿದ್ದರಂತೆ. ಅವರು ಸಾಹಿತ್ಯ ಲೋಕಕ್ಕೆ ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಕೊಟ್ಟು ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

ತಾಳಕೇರಿ ಬಸವರಾಜರವರು ಆಶುಕವಿಗಳಾಗಿದ್ದರು. ಅವರು `ಮುದ್ದುಬಸವ' ಎಂಬ ಅಂಕಿತವನ್ನಿಟ್ಟುಕೊಂಡು ಕಾವ್ಯ ರಚನೆ ಮಾಡಿದ್ದಾರೆ. ಸಾಹಿತ್ಯ, ಸಂಗೀತ, ರಂಗಭೂಮಿಗೆ ಅವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಅನೇಕ ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಅಂತಹ ಪ್ರಶಸ್ತಿಗಳಲ್ಲಿ ೧೯೮೩ರಲ್ಲಿ ನೀಡಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ನಾಟ್ಯಕಲಾರತ್ನ, ನಾಟ್ಯಭೂಷಣ, 'ರಂಗಭೂಮಿಯ ಚತುರ' ಎಂಬ ಪ್ರಶಸ್ತಿಗಳು ಪ್ರಮುಖವಾದವುಗಳು. ತಾಳಕೇರಿ ಬಸವರಾಜರದು ಸೀದಾ ಸಾದಾ ವ್ಯಕ್ತಿತ್ವವಾಗಿತ್ತು. ಅಪ್ಪಟ ಸ್ವಾಭಿಮಾನಿ ಬದುಕನ್ನು ಅವರು ನಡೆಸಿದ್ದರು. ಇಂತಹ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದ ತಾಳಕೇರಿ ಬಸವರಾಜ ಹೂಗಾರರು ಮರಳಿ ಬಾರದ ನಾಡಿಗೆ ಹೋದದ್ದು ೧೬.೧.೨೦೦೩ ರಂದು. ಅಂದು ಇಡೀ ಹೈದ್ರಾಬಾದ್ ಕರ್ನಾಟಕ ಶೋಕ ಸಾಗರದಲ್ಲಿ ಮುಳುಗಿತ್ತು.

## ೩. ಸಾಹಿತ್ಯ : ಸಾಮಾಜಿಕತೆ ಮತ್ತು ಕನ್ನಡ ಪ್ರಜ್ಞೆ

ತಾಳಕೇರಿ ಬಸವರಾಜರವರು ರಂಗಕಲಾವಿದರಾಗಿ, ಸಂಗೀತಗಾರರಾಗಿ, ಕಂಪನಿಯ ಮಾಲೀಕರಾಗಿ ಸೇವೆ ಸಲ್ಲಿಸುತ್ತಲೇ ಸಾಹಿತ್ಯ ರಚನೆಗೂ ಕೈ ಹಾಕಿದವರು. ಅವರು ಜಾನಪದ, ತತ್ತ್ವಪದ ಸಾಹಿತ್ಯಕ್ಕೆ ಸಂಬಂಧಿಸಿದ ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಪ್ರಕಟವಾಗಿರುವ ಕೃತಿಗಳೆಂದರೆ ಸುಮಾರು ಮೂವತ್ತೊಂದು, ತಮ್ಮ ಬಹುಪಾಲು ಕೃತಿಗಳ ರಚನೆಯ ಹಿಂದೆ ಗುರುಗಳ ಪ್ರೀತಿ, ಆಶೀರ್ವಾದ ಇದೆಯೆಂದು ಆಗಾಗ ಹೇಳುವುದರ ಮೂಲಕ ತಮ್ಮ ಸೌಜನ್ಯವನ್ನು ವ್ಯಕ್ತಪಡಿಸುತ್ತಿದ್ದರು.

ಭಕ್ತಿ, ನಾಡು-ನುಡಿ, ಪ್ರೇಮ, ಜೀವನ ಮೌಲ್ಯ, ಸಂದೇಶ, ಸಾಮಾಜಿಕ ಪ್ರಜ್ಞೆ ಮುಂತಾದ ವಿಚಾರಗಳನ್ನು ಒಳಗೊಂಡು ರಚನೆಯಾದ ಅವರ ಕೃತಿಗಳ ವಿವರ ಇಂತಿದೆ.

೧. ಶ್ರೀ ಯಡೆಯೂರ ಸಿದ್ಧಲಿಂಗೇಶ್ವರ ಪ್ರಾರ್ಥನೆ.

೨. ಶ್ರೀ ಕೊಪ್ಪಳ ಗವಿಸಿದ್ದೇಶ್ವರ ನೂರೆಂಟು ನಾಮಾವಳಿ

೩. ಶ್ರೀ ಗುರು ಸ್ಮರಣೆ.

೪, ೬೩ ಮಂದಿ ಶಿವಶರಣೆಯರ ಪುಣ್ಯ ಸ್ಮರಣೆ.

೫. ಶ್ರೀ ರೇಣುಕಾದೇವಿಯ ನಾಮಾವಳಿ

೬ ಅಕ್ಕಮಹಾದೇವಿ ಲಾವಣಿ.

೭ ಶ್ರೀ ಹೇಮರೆಡ್ಡಿ ಮಲ್ಲಮ್ಮ

೮. ಶ್ರೀ ಗುರುಸಿದ್ದೇಶ್ವರ.

೯. ಶ್ರೀ ಗುರುಸಿದ್ದೇಶ್ವರ ಲಾವಣಿ.

೧೦. ಶ್ರೀ ಗುರು ಸಿದ್ದೇಶ್ವರ ಉದಯಗೀತೆ.

೧೧. ಗರತಿ ಗಂಗಮ್ಮ ಚರಿತ್ರಗೀತ.

೧೨. ಬಸವಬಾನು ಭಾವಗೀತ.

೧೩. ಸತಿಸಾಧ್ವಿ ಶಾಂತಮ್ಮ ಚರಿತ್ರ ಗೀತ

೧೪. ಕಿತ್ತೂರ ಚನ್ನಮ್ಮ

೧೫. ಸಂಗೊಳ್ಳಿ ರಾಯಣ್ಣ

೧೬. ತಾಯಿಯ ಹಾಡು

೧೭. ಗೀತಗಂಗಾ

೧೮. ಹಾಡೋಣ ಬಾ ತಂಗಿ

೧೯. ಗೀತ ಭಾರತಿ

೨೦.ಶ್ರೀ ಸಿದ್ಧಲಿಂಗೇಶ್ವರ ನಾಮ ಸಂಕೀರ್ತನೆ.

೨೧. ಕಲ್ಯಾಣ ಗೀತ

೨೨. ಬಸವಗೀತ

೨೩. ಜೈ ಸಂತೋಷಿಮಾತಾ

೨೪. ಬಸವಧ್ಯಾನ ಚಿಂತಾಮಣಿ

೨೫. ಪಾರ್ವತಿಸ್ತುತಿ

೨೬. ಕರ್ನಾಟಕದ ವೀರ ಮಹಿಳೆಯರು

೧೭. ಕುಟುಂಬ ಕಲ್ಯಾಣದ ಹಾಡುಗಳು

೧೮. ಹಂತಿಯ ಹಾಡುಗಳು

೧೯. ಮಹಾಸತಿ ಶಾಂತಮ್ಮ

೨೦. ವರದಕ್ಷಿಣೆಯ ದುರಂತ.

ತಾಳಕೇರಿ ಬಸವರಾಜರು ಬರೆದ ಹಾಡುಗಳು ಜಾನಪದ ಲಯದಿಂದ ಕೂಡಿವೆ. ತಾವು ಬದುಕಿನಲ್ಲಿ ಕಂಡುಂಡ ಜೀವನಾನುಭವಗಳನ್ನು: ಪ್ರಕೃತಿ ಚಿತ್ರಣ, ಜೀವನಮೌಲ್ಯ, ಸಂದೇಶ, ತಾಯಿಯ ಮಮತೆ, ಕನ್ನಡ ನಾಡಿನ ಹಿರಿಮೆ ಗರಿಮೆ, ಕನ್ನಡ ಭಾಷೆಯ ಸತ್ವ ಸೊಗಡುಗಳನ್ನು ಜಾನಪದೀಯ ಧಾಟಿಯಲ್ಲಿ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಜಾನಪದೀಯ ಧಾಟಿಯ ಈ ರಚನೆಗಳು ಮಧುರ ಕಂಠದಿಂದ ಹರಿದು ಬರುವಾಗ ಕೇಳುಗರಿಗೆ ಖುಷಿಯನ್ನುಂಟು ಮಾಡುತ್ತವೆ. ಜಾನಪದ ಹಾಡುಗಳು ಈ ಹೊತ್ತಿಗೂ ಕೇಳಬೇಕೆನಿಸಲು, ಓದಬೇಕೆನಿಸಲು ಬಹಳ ಮುಖ್ಯವಾದ ಕಾರಣ, ಅವು ತಮ್ಮಲ್ಲಿ ಹುದುಗಿಸಿಕೊಂಡಿರುವ ಜೀವನ ಮೌಲ್ಯ, ನೀತಿ ಪಾಠ, ಆದರ್ಶಪ್ರಿಯತೆ, ಬದುಕಿನ ಬಗೆಗೆ, ಸಮುದಾಯದ ಬಗೆಗಿರುವ ಅಪಾರವಾದ ಕಾಳಜಿಗಳು. ಅದರ ಜೊತೆಗೆ ವಾಸ್ತವ ಸತ್ಯಗಳನ್ನು ಹೇಳುತ್ತಿರುವುದರಿಂದ ತುಂಬಾ ಆಪ್ತವೆನಿಸುತ್ತವೆ. ಇದಕ್ಕೆ ಬಹುಶಃ ಇನ್ನೊಂದು ಕಾರಣವೆಂದರೆ ಸಾಹಿತ್ಯಕ್ಕೆ ಬಳಸುವ ಭಾಷೆಯ ಆಡುನುಡಿಗಳು, ಸರಳ-ಸಹಜವಾದ ಭಾಷೆಯೂ ಒಂದು ಎನ್ನಬಹುದು. ಈ ಹೊತ್ತಿಗೂ ನಮ್ಮ ನಡುವೆ ಜಾನಪದ ಹಾಡುಗಳು ಉಳಿದುಕೊಂಡಿವೆ. ಜಾಗತೀಕರಣದ ಪ್ರಭಾವ ಇವುಗಳ ಮೇಲೆ ಆಗಿದ್ದರೂ ಹಳ್ಳಿಗಳಲ್ಲಿ ಜನರ ನಾಲಿಗೆಯ ಮೇಲೆ ಇನ್ನೂ ಜೀವಂತವಾಗಿವೆ.

ತಾಳಕೇರಿ ಬಸವರಾಜರವರ ಜಾನಪದ ಹಾಡುಗಳು ಬದುಕಿನ ಸಮೃದ್ಧತೆಯನ್ನು ಹೊಂದಿವೆ. ಹಬ್ಬಗಳ ಬಗೆಗೂ ಬರೆದಿದ್ದಾರೆ. ಯಾವುದೇ ಹಬ್ಬವನ್ನು ನೋಡಿದರೂ ಆ ಹಬ್ಬದ ಹಿಂದೆ ಒಂದು ಸಂಪ್ರದಾಯ, ಹಿನ್ನೆಲೆಯಿರುತ್ತದೆ. ಬದುಕಿನಲ್ಲಿ ದಿನವೂ ದುಡಿದು ದುಡಿದು ಸುಸ್ತಾದ ಜೀವಕ್ಕೆ ಹಬ್ಬ ಬಂದರೆ ಒಂದು ಸಂಭ್ರಮದ ದಿನ. ಹಬ್ಬದ ದಿನ ದೇವರಿಗೆ ವಿಶೇಷ ಪೂಜೆ. ಮನೆಯಲ್ಲಿ ಮಕ್ಕಳಿಗಂತೂ ಸಂಭ್ರಮವೋ ಸಂಭ್ರಮ. ಅಂದು ಎಲ್ಲರಿಗೂ ಹೊಸ ಬಟ್ಟೆ ಜೊತೆಗೆ ವಿಶೇಷ ಭೋಜನ, ಹಬ್ಬ ಒಂದು ರೀತಿಯಲ್ಲಿ ನಮ್ಮ ಸಂಸ್ಕೃತಿಯ ಪ್ರತೀಕ. ಹಬ್ಬದ ಸಂದರ್ಭದಲ್ಲಿ ಎಲ್ಲರೂ ಒಂದು ಕಡೆ ಸೇರುತ್ತಾರೆ. ಎಲ್ಲರನ್ನು ಭಾವನಾತ್ಮಕವಾಗಿ ಬಂಧಿಸುವ ಶಕ್ತಿಯನ್ನು ಹಬ್ಬಗಳು ಪಡೆದುಕೊಂಡಿವೆ. ವಿಶೇಷ ಹಬ್ಬಗಳಾದ ಯುಗಾದಿ, ದೀಪಾವಳಿ, ಎಳ್ಳಾಮವಾಸೆಗಳಲ್ಲಿ ನಾಟಕ, ಮನೋರಂಜನಾ ಕಾರ್ಯಕ್ರಮಗಳು ಜರುಗುತ್ತವೆ. ಇವತ್ತು ಬಹಳಷ್ಟು ಹಬ್ಬಗಳು ನಮ್ಮಿಂದ ದೂರಾಗುತ್ತಿವೆ. ಹಬ್ಬಗಳು ಮತ್ತು ಅವುಗಳ ಆಚರಣೆಗಳು ಏನಾದರೂ ಉಳಿದುಕೊಂಡಿವೆ ಎಂದರೆ ಅವು ಹಳ್ಳಿಗಳಲ್ಲಿ ಮಾತ್ರ ಎನ್ನುವುದು ಸತ್ಯ. ಹಬ್ಬದ ಬಗೆಗೆ ತಾಳಕೇರಿಯವರ ಒಂದು ಹಾಡು ಹೀಗಿದೆ.

ಹಬ್ಬದಲಿ ತತ್ತ್ವಂಟು ತಿಳಿದು ಆಚರಿಸಿದರೆ
ಮಬ್ಬು ಹರಿವುದು ಮನದ ಕೇಳು ಕೇಳಮ್ಮ ||

ನಾನಾರು - ನೀನಾರು ಅವರಾರು - ಇವರಾರು
ಏನೆಂಬುದರಿತವರು ಮತಿವಂತರಮ್ಮ ॥

ಪೂಜೆ ವ್ರತಗಳ ಮಾಡಿ, ಪುಣ್ಯಕಥೆಗಳ ಕೇಳಿ,
ಮೋಜು ಮಾಡಿದರೇನು ಬಂತು ತಂಗೆಮ್ಮ ।
ಮನೆ - ಮಠದ ಬಾಗಿಲಿಗೆ, ಮಾವು ಬಾಳೆಯ ಕಟ್ಟಿ,
ಜನಮೆಚ್ಚ ಮಾಡಿದರೆ ಏನು ಬಂತಮ್ಮ

(ಹಾಡೋಣ ಬಾ ತಂಗಿ)

ನಾವು ಹಬ್ಬಗಳ ಮಹತ್ವವನ್ನು ಅರಿತುಕೊಂಡು ಆಚರಿಸಬೇಕು. ವೈಚಾರಿಕವಾಗಿ ಕೂಡ ಹಬ್ಬಗಳನ್ನು ಬರಮಾಡಿಕೊಳ್ಳುವುದರ ಕುರಿತು ಚಿಂತನ-ಮಂಥನ ನಡೆಯಬೇಕು. ಬರೀ ಪೂಜೆ ವ್ರತಗಳನ್ನು ಮಾಡಿದರೆ ಮೂಢ ನಂಬಿಕೆಗಳಿಗೆ ಆದ್ಯತೆ ಕೊಟ್ಟಂತಾಗುತ್ತದೆ. ಜನರನ್ನು ಮೆಚ್ಚಿಸುವುದಕ್ಕಿಂತ ಮನವನ್ನು ಮೆಚ್ಚಿಸುವುದರ ಕಡೆ ತುಡಿಯಬೇಕಾಗಿದೆ ಎನ್ನುವುದನ್ನು ಇಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ. ನಮ್ಮ ಜನ ಕೆಲ ಹಬ್ಬಗಳನ್ನು ಆಚರಿಸುವುದನ್ನು ನೋಡಿದರೆ ಬಹುಪಾಲು ಆಚರಣೆಯ ಪದ್ಧತಿಗಳು ಮೂಢನಂಬಿಕೆಗಳಿಂದಲೇ ಕೂಡಿರುವುದನ್ನು ಕಾಣುತ್ತೇವೆ. ವೈಚಾರಿಕ ಪ್ರಜ್ಞೆಯನ್ನು ಉಂಟು ಮಾಡುವ ಇಂತಹ ಹಾಡುಗಳನ್ನು ಬಹಳ ಹಿಂದೆಯೇ ಬಸವರಾಜ ತಾಳಕೇರಿಯವರು ರಚನೆ ಮಾಡಿರುವುದನ್ನು ಗಮನಿಸಬಹುದು. ಕನ್ನಡ ನಾಡಿನ ಜನರಿಗೆ ನಾಡಿನ ಸಂಸ್ಕೃತಿಯನ್ನು ವೈಚಾರಿಕ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಒಂದು ಪ್ರಯತ್ನ ಇಲ್ಲಿದೆ.

ನಮ್ಮ ದೇಶಕ್ಕೆ ಅನ್ನಕೊಡುವ ವ್ಯಕ್ತಿಯೆಂದರೆ ರೈತ. ರೈತ ಈ ದೇಶದ ಬೆನ್ನೆಲುಬಾಗಿದ್ದಾನೆ. ದುರಂತವೆಂದರೆ ಆತ ಹಲವಾರು ರೀತಿಯಿಂದ ಶೋಷಣೆಗೆ ಒಳಗಾಗಿದ್ದಾನೆ. ರೈತನಿಗೆ ಸಿಗಬೇಕಾದ ಸೌಲಭ್ಯಗಳು, ಬೆಳೆಗೆ ತಕ್ಕಂತಹ ನಿರೀಕ್ಷಿತ ಬೆಲೆ ಸಿಗದಂತಾಗಿದೆ. ಹೀಗಾಗಿ ಆಧುನಿಕ ಕಾಲದ ಸಂದರ್ಭದಲ್ಲಿ ಆತ ಆರ್ಥಿಕ ಮಟ್ಟದಿಂದ ಮೇಲೇರಲು ಆಗುತ್ತಿಲ್ಲ. ನಮ್ಮ ಸರ್ಕಾರ ಜನಪ್ರತಿನಿಧಿಗಳು ರೈತರ ಪರವಾಗಿ ಕಾಳಜಿ ವಹಿಸಬೇಕು. ಪ್ರತಿ ಸಲ ಪ್ರಕೃತಿ ವಿಕೋಪ, ನೀರಿನ ಅಸಮರ್ಪಕ ನಿರ್ವಹಣೆಯಿಂದ ಆತನ ಬದುಕು ತತ್ತರಿಸಿ ಹೋಗಿದೆ. ಸಾಲ-ಸೂಲ ಮಾಡಿ ಅದರಲ್ಲೇ ಮುಳುಗೇಳುತ್ತಿದ್ದಾನೆ. ಹೀಗಾಗಿಯೇ ಅನೇಕ ಜನ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದು ಶೋಚನೀಯವಾದ ಸಂಗತಿ. ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರಕ್ಕಿದೆ.

ರೈತರ ಪರವಾಗಿ ಕೂಡ ಆಶುಕವಿಯಾದ ತಾಳಕೇರಿ ಬಸವರಾಜರವರು ಹಾಡುಗಳನ್ನು ಬರೆದಿದ್ದಾರೆ.

ಎಂತ ಪುಣ್ಯವಂತ ನೀ । ಭೂಮಿತಾಯಿ ಪುತ್ರ
ನಿನ್ನ ದುಡಿಮೆಯಲ್ಲಿ ಬಾಳುವುದು ಸರ್ವಕ್ಷೇತ್ರ

ನಿಸ್ವಾರ್ಥ - ಸೇವೆ ನಿನ್ನದು ಜಗಕ್ಕೆಲ್ಲಾ ದಾರಿತೋರುವುದು ।
ನಿನ್ನ ಕಾಯವೆಂಬುವದು, ಕೈಲಾಸವಾಗಿಹುದು ॥
ನಿತ್ಯ ಬೆವರಸುರಿದು, ಭೂತಾಯಿ ಮೈಯ ತೊಳೆದು ॥
ಬೇಸರಿಕೆ ಬರದು ನಿನಗೆ, ನಿನ್ನ ದುಡಿಮೆ ಪೂಜೆಯಾಗಿಹುದು ॥ ೧ ॥

ನೇಗಿಲ ಯೋಗಿ ನೀನು ಜಗತನ್ನದಾತ ನೀನು ।
ಲೋಕೋಪಕಾರಿ ನೀನು, ಪ್ರಾಣಕ್ಕೆ ಪ್ರಾಣಕೊಡುವವನು ॥
ಪ್ರತ್ಯಕ್ಷ ದೇವರಾದವನು ಜನ - ಕಾಮಧೇನು ವಾದವನು ॥
ಪಶುಪಕ್ಷಿ ಎಲ್ಲ ನಿನ್ನನು ಸ್ಮರಿಸುವವು ಉಂಡು ದಾನವನು ॥

ಹೀಗೆ ನೇಗಿಲಯೋಗಿಯ ನಿತ್ಯದ ಕಾಯಕವನ್ನು; ಆತನ ನಿಸ್ವಾರ್ಥ ಬದುಕನ್ನು ಸಮರ್ಥವಾಗಿ, ಕಲಾತ್ಮಕವಾಗಿ ಹಿಡಿದಿಡುವ ಹೂಗಾರರು ರೈತನ ಮಹತ್ವನ್ನು ಎತ್ತಿ ಹಿಡಿಯುತ್ತಾರೆ. ಜಾನಪದ ಕವಿಯಾಗಿ ಹೂಗಾರರು ಜಾನಪದ ಬದುಕನ್ನು ನಂಬಿದ ರೈತನ ಪರವಾಗಿ ಮಾತನಾಡಿರುವುದು ಸ್ವಾಗತಾರ್ಹ. ಇಂತಹ ರೈತನನ್ನು ಇಂದು ನಮ್ಮ ಸಮಾಜ ಕಡೆಗಣಿಸುತ್ತಿದೆ. ಇದು ನಿಲ್ಲಬೇಕೆನ್ನುವುದು ಬಸವರಾಜ ತಾಳಕೇರಿಯವರ ಸಾಹಿತ್ಯದ ನಿಲುವಾಗಿದೆ.

ರೈತ ಒಂದು ರೀತಿಯಲ್ಲಿ ನಮ್ಮ ಸಂಸ್ಕೃತಿಯನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋಗುವ ಪ್ರತಿನಿಧಿಯಾಗಿದ್ದಾನೆ. ಇವತ್ತು ಹಬ್ಬಗಳು ಉಳಿದುಕೊಂಡಿದ್ದರೆ ಅದು ರೈತರಿಂದ ಎಂದೇ ಹೇಳಬೇಕು. ಜೊತೆಗೆ ಬಹಳ ಮುಖ್ಯವಾಗಿ ನಮ್ಮ ಕನ್ನಡ ಭಾಷೆ ತನ್ನ ದೇಶೀಯತೆಯನ್ನು ಉಳಿಸಿಕೊಂಡಿದ್ದು ಹಳ್ಳಿಗರಿಂದ, ಅದು ರೈತಾಪಿ ಜನರಿಂದ ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ. ಇಂತಹ ರೈತನ ಬಗೆಗೆ ತಾಳಕೇರಿ ಬಸವರಾಜರವರಿಗೆ ಗೌರವ ಮತ್ತು ಪ್ರೀತಿ ಸಹಜವಾಗಿದೆ.

ಹೊಲಕ್ಹೋಗಿ ನಿಂತಾಗ, ಎಷ್ಟವ್ವ ಹರುಷ
ಹಸಿರುಟ್ಟ ಭೂಮಿ ತಾಯಿ....ತಣಿಸುವಳು ನಮ್ಮ ಮನಸ ॥

ಬಿಳಿಗಾಳತೆನಿ ಜೋಳ, ಹೊಳೆ ಮುತ್ತು ಮಣಿಹವಳ ।
ಎಷ್ಟವ್ವ ಶೃಂಗಾರ, ಮನೆಯಲ್ಲಿ ಬಂಗಾರ ॥
ಒಕ್ಕಲದ ಮನೆ ಭಾಗ್ಯಲಕ್ಷ್ಮಿ ನಿವಾಸ ॥೧॥

ನಮ್ಮೆಲ್ಲ ಭೂಮಿಗಳು ಕಪ್ಪಾದ ಮಣ್ಣು ಎರಿ ।
ಮನಸಾರೆ ದುಡಿಯುವೆವು ಕೂಡಿ ನಾನು ನನ್ನ ದೊರಿ ॥
ಕಟ್ಟಿಹನು ನನರಾಯ ಗಟ್ಟಿಮುಟ್ಟ ಎರಡು ಹೋರಿ ।

ಹೊತ್ತು ಹೊತ್ತಿಗೆ ಮಾಡ್ತಾನ ಉಪಚಾರ ಭಾರಿ ।
ಬಸವಣ್ಣನಿದ್ದ ಮನೆ ಅನ್ನದ ನಿವಾಸ ॥೨॥

ಒಕ್ಕಲದ ಮನೆ ಭಾಗ್ಯಲಕ್ಷ್ಮಿ ನಿವಾಸ, ಬಸವಣ್ಣನಿದ್ದ ಮನೆ ಅನ್ನದ ನಿವಾಸ ಎನ್ನುವ ರೂಪಕದ ಸಾಲುಗಳು ರೈತರ ಬದುಕಿಗೆ ಹಿಡಿದ ಕನ್ನಡಿಯಾಗಿವೆ. ಹಸಿರುಟ್ಟ ತಾಯಿಯನ್ನು ಕಂಡಾಗ ಆಗುವ ಆನಂದ ವರ್ಣಿಸಲಸದಳವಾದುದು. ರೈತ ಕಟ್ಟಿರುವ ಎರಡು ಹೋರಿಗಳು ಆತನ ಬದುಕಿಗೆ ಆಸರೆಯಾದದ್ದು, ಜೀವನದುದ್ದಕ್ಕೂ ಆತನ ಹೆಗಲಿಗೆ ಹೆಗಲುಕೊಟ್ಟು ಮೈಮುರಿದು ದುಡಿಯುತ್ತಿರುವ ಪರಿಯನ್ನು ರೈತನ ಹೆಂಡತಿಯ ಮೂಲಕ ನಿರೂಪಕ ಹೇಳುತ್ತಿರುವುದು ಅತ್ಯಂತ ಅಪ್ಯಾಯಮಾನವಾದುದಾಗಿದೆ.

ನಿಸರ್ಗವು ತನ್ನ ಕ್ರಮವ ಬದಲಾಯಿಸಿ ನೋಡುತಿದೆ.
ಅತಿವೃಷ್ಟಿ - ಅನಾವೃಷ್ಟಿ - ಅಕಾಲ ವೃಷ್ಟಿ ನಡೆಯುತಿದೆ ॥
ಕವಿಯ ಪ್ರಖರ ತೇಜಭೂಮಿ ತಪ್ತಗೊಳಿಸುತಿದೆ ಒಮ್ಮೆ ।
ಜಲ ಪ್ರಮಾಣ ಕಡಿಮೆಯಾಯಿತೆಂಬ ಭಯವು ಮತ್ತೊಮ್ಮೆ ॥ ೨ ॥

ವಾಯುಗುಣ ಪ್ರಚಂಡವಾಗಿ ಬೀಸಿ ನಾಶ ಮಾಡುತಿದೆ ।
ಮೋಡದಲಿ ಬದಲಾವಣೆ ಯಾವಾಗಲೂ ಕಾಣುತಿದೆ ।
ಮಳೆಗಳೆಲ್ಲ ನೇಮಚತಪ್ಪಿ ಭೂಮಿ ಬರಡು ಆಗುತಿದೆ ।
ವಿಜ್ಞಾನ ಜ್ಞಾನ ವಿಶ್ವವನ್ನು ನುಂಗುತಿದೆ ॥

(ಗೀತ ಭಾರತಿ)

ನಾವಿಂದು ಕಂಪ್ಯೂಟರ ಯುಗದಲ್ಲಿದ್ದೇವೆ. ಇದರ ಜೊತೆಗೆ ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿದ್ದರೂ ಪ್ರಕೃತಿ ಈಗಲೂ ಕೆಲವು ನಿಗೂಢಗಳನ್ನು ತನ್ನೊಳಗೆ ಅಡಗಿಸಿಕೊಂಡು ಕುತೂಹಲವನ್ನುಂಟು ಮಾಡಿದೆ. ವಿಜ್ಞಾನಿಗಳಿಗೂ ಪ್ರಕೃತಿ ಅನೇಕ ಸವಾಲುಗಳನ್ನೊಡ್ಡುತ್ತಿರುವುದು ಆಶ್ಚರ್ಯಕರ ಎನಿಸಿದರೂ ಸತ್ಯವಾಗಿದೆ. ಪ್ರಕೃತಿ ವಿಕೋಪ, ಚಂಡಮಾರುತ, ಅತಿವೃಷ್ಟಿಯಿಂದಾಗಿ ಇಡೀ ಜನಸಮುದಾಯವನ್ನು ಅಲ್ಲೋಲಕಲ್ಲೋಲ ಮಾಡಿ ಬದುಕನ್ನೇ ಕಸಿದುಕೊಂಡು ವಿಸ್ಮಯವನ್ನುಂಟು ಮಾಡುತ್ತಿದೆ ಪ್ರಕೃತಿ. ಇಂತಹ ಪ್ರಕೃತಿಯ ಕುರಿತು ಬಸವರಾಜವರು ವ್ಯಕ್ತ ಪಡಿಸುವ ಆತಂಕ ಸಹಜವಾದುದಾಗಿದೆ.

ಇತ್ತೀಚೆಗೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ನಡೆದ ನೆರೆ ಹಾವಳಿಗೆ ಇಲ್ಲಿನ ಜನತೆ ತತ್ತರಿಸಿ ಹೋಗಿದೆ. ಅವರ ಬದುಕನ್ನು ಕ್ಷಣಾರ್ಧದಲ್ಲೇ ಮೂರಾಬಟ್ಟಿ ಮಾಡಿ ಹೋಗಿದೆ. ಇಲ್ಲಿನ ಜನ ಮತ್ತೆ ಮೊದಲಿನ ಬದುಕನ್ನು ಕಟ್ಟಿಕೊಳ್ಳಲು ಸುಧಾರಿಸಬೇಕಾದರೆ ಕೆಲವು ವರ್ಷಗಳೇ ಬೇಕು. ಇಂತಹ ವೈಚಿತ್ರ್ಯದ ಪ್ರಕೃತಿಯನ್ನು ಕುರಿತು ತಾಳಕೇರಿ ಬಸವರಾಜರು ಆಲೋಚಿಸಿದ ಕ್ರಮ ಸಮಯೋಚಿತವಾಗಿದೆ.

ಪ್ರಕೃತಿಯ ಬಗೆಗೆ ನಮ್ಮ ಕನ್ನಡ ಕಾವ್ಯದಲ್ಲಿ ಬಂದ ಕವಿತೆಗಳನ್ನು ಗಮನಿಸಿದರೆ ಅವೆಲ್ಲವೂ ವರ್ಣನಾತ್ಮಕವಾಗಿ ಬಂದಿದ್ದೇ ಹೆಚ್ಚು. ನವೋದಯ ಕವಿಗಳು ಇದಕ್ಕೆ ಒಳ್ಳೆಯ ಉದಾಹರಣೆ. ಆದರೆ ತಾಳಕೇರಿ ಬಸವರಾಜರವರು ಪ್ರಕೃತಿಯನ್ನು ಬರೀ ವರ್ಣನಾತ್ಮಕ ನೆಲೆಯಲ್ಲಿ ಗ್ರಹಿಸಲು ಹೋಗದೆ ಅದನ್ನು ಭಿನ್ನ ನೆಲೆಯಲ್ಲಿ ಗ್ರಹಿಸಲು ಯತ್ನಿಸಿದ್ದಾರೆ. ಹೀಗಾಗಿ ತಾಳಕೇರಿ ಬಸವರಾಜರವರ ಈ ತೆರನಾದ ಆಲೋಚನಾಕ್ರಮ ಸ್ವಾಗತಾರ್ಹವಾದುದಾಗಿದೆ. ಜನಪದರು ಪ್ರಕೃತಿಯನ್ನು ನಂಬಿದವರು. ಆರಾಧನೆಯ ನೆಲೆಯಲ್ಲಿ ಗ್ರಹಿಸುತ್ತ ಬಂದವರು. ಇಲ್ಲಿ ಜಾನಪದ ಕವಿಯಾಗಿದ್ದರೂ ಕೂಡ ತಾಳಕೇರಿ ಬಸವರಾಜರವರು ಪ್ರಕೃತಿಯ ಸತ್ಯವನ್ನು ಸಹಜವಾಗಿ ಬಿಚ್ಚಿಡುವಲ್ಲಿ ಹಿಂದೇಟು ಹಾಕುವುದಿಲ್ಲ. ನಿಜವಾದ ಕವಿಗೆ ಮಾತ್ರ ಇಂತಹ ಗುಣ ಬರಲು ಸಾಧ್ಯ. ಆ ಕಾರಣಕ್ಕಾಗಿ ತಾಳಕೇರಿ ಬಸವರಾಜರು ಬಹಳ ಮುಖ್ಯವಾದ ಕವಿಯೆನಿಸಿಕೊಳ್ಳುತ್ತಾರೆ. ಆತನ ಸಾಹಿತ್ಯದುದ್ದಕ್ಕೂ ಈ ತೆರನಾದ ಸತ್ಯದ ಅಂಶಗಳನ್ನು ಕಾಣಬಹುದಾಗಿದೆ.

ನಮ್ಮ ಸಮಾಜವನ್ನು ಹಿಂದಿನಿಂದಲೂ ಕಾಡುತ್ತ ಬಂದಿರುವ ಸಮಸ್ಯೆಗಳಲ್ಲಿ 'ವರದಕ್ಷಿಣೆ' ಸಮಸ್ಯೆಯೂ ಒಂದು. 'ಮದುವೆ' ಎನ್ನುವದು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಬರುವ ಒಂದು ಅಪರೂಪದ ಘಟ್ಟ, ಬದುಕಿನ ಬಗೆಗೆ ನೂರಾರು ಕನಸುಗಳನ್ನು ಕಾಣುತ್ತಿರುವ ಜೋಡಿಗಳು ಹಿರಿಯರ ಒಪ್ಪಿಗೆಯಂತೆ ಅವರ ಸಮ್ಮುಖದಲ್ಲಿ 'ಮದುವೆ' ಎಂಬ ಬಂಧನಕ್ಕೆ ಕಾಲಿಡುತ್ತಾರೆ. ಮದುವೆ ಎರಡು ಜೀವ ಮನಸುಗಳ ಬೆಸುಗೆ, ಮದುವೆಗೆ ನಮ್ಮ ಸಂಸ್ಕೃತಿಯಲ್ಲಿ ಒಂದು ವಿಶೇಷವಾದ ಸ್ಥಾನವಿದೆ. ಆದರೆ 'ವರದಕ್ಷಿಣೆ' ಎನ್ನುವ ಪೆಡಂಭೂತದಿಂದಾಗಿ ಹೆತ್ತವರಿಗೆ, ಹೆಣ್ಣುಮಕ್ಕಳಿಗೆ ಅದೊಂದು ಶಾಪವಾಗಿ ಪರಿಣಮಿಸಿದೆ. ವರದಕ್ಷಿಣೆಗಾಗಿ ಅದೆಷ್ಟೋ ಹೆಣ್ಣು ಮಕ್ಕಳ ಬದುಕು ತತ್ತರಿಸಿ ಹೋಗಿದೆ. ಜೀವಗಳೇ ಹೋಗಿವೆ. ಅದೆಷ್ಟೋ ಜನ ಈ ಹೊತ್ತಿಗೂ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ನಿಟ್ಟುಸಿರು ಬಿಡುತ್ತಿದ್ದಾರೆ. ಕೆಲವರ ಬದುಕು ಅರಳುತ್ತಿರುವಾಗಲೇ ಬಾಡಿಹೋಗಿದೆ. ವರದಕ್ಷಿಣೆಯನ್ನು ಕೊಡುವುದು: ತೆಗೆದುಕೊಳ್ಳುವುದು ಮಹಾ ಅಪರಾಧ ಎಂದು ಸರ್ಕಾರ ಕಾನೂನನ್ನು ರೂಪಿಸಿ ಜಾರಿಗೆ ತಂದಿದೆ. ಈ ರೀತಿ ಕಾನೂನು ಉಲ್ಲಂಘನೆ ಮಾಡಿದವರಿಗೆ ಶಿಕ್ಷೆಯ ಕ್ರಮಗಳಿವೆ. ಆದರೂ 'ವರದಕ್ಷಿಣೆ' ಸಮಸ್ಯೆ ನಿಂತಿಲ್ಲ. ಮಹಿಳಾ ಸಂಘಟನೆ, ಬೇರೆ ಬೇರೆ ಸಂಘ ಸಂಸ್ಥೆಗಳು ವರದಕ್ಷಿಣೆಯನ್ನು ವಿರೋಧಿಸುತ್ತಿವೆ. ಗಟ್ಟಿಯಾದ ದನಿ ಎತ್ತುತ್ತಿವೆ. ಆದರೂ ನಿರ್ಮೂಲನೆಯಾಗದೆ ಇರುವುದು ನಮ್ಮ ಸಾಮಾಜಿಕ ವ್ಯವಸ್ಥೆಯ ದುರಂತ.

'ಮದುವೆ' ಎನ್ನುವ ಪವಿತ್ರ ಬಂಧ ಬಹುಪಾಲು ಹೆಣ್ಣುಮಕ್ಕಳ ಪಾಲಿಗೆ ಉರುಳಾಗಿ ಪರಿಣಮಿಸಿದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲ ಪ್ರಜ್ಞಾವಂತರು ಕೈ ಜೋಡಿಸಬೇಕು. ಮದುವೆಯಾಗುವ ಪ್ರತಿ ಹೆಣ್ಣು ಮಗಳು ವರದಕ್ಷಿಣೆ ಬೇಡದ ಹುಡುಗನನ್ನೇ ಮದುವೆಯಾಗಬೇಕು. ಈ ನಿಯಮಕ್ಕೆ ಬದ್ಧಳಾಗಬೇಕು. ಕೈ ಹಿಡಿಯುವ ವರನು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲವೆಂದು ಶಪಥ ಮಾಡಬೇಕು. ಆಗ ಮಾತ್ರ ವರದಕ್ಷಿಣೆ ಕಡಿಮೆಯಾಗಲು ಸಾಧ್ಯ. ಇದಕ್ಕೆ ಕಡಿವಾಣವೆಂದರೆ ಅಂತರ್ಜಾತೀಯ ವಿವಾಹಗಳು.

ವರದಕ್ಷಿಣೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಸಾಕಷ್ಟು ಸಾಹಿತ್ಯ ಈಗಾಗಲೇ ಬಂದಿದೆ. ಪತ್ರಿಕೆಗಳು - ದೂರದರ್ಶನಗಳು ಇವುಗಳ ವಿರುದ್ಧ ದನಿ ಎತ್ತುತ್ತಿವೆ. ಎಪ್ಪತ್ತರ ದಶಕದಲ್ಲಿ ಸಮುದಾಯದಿಂದ ಬಹುಪಾಲು ಬೀದಿನಾಟಕಗಳು ಬಂದು ಒಂದು ರೀತಿಯಲ್ಲಿ ಹೊಸ ಕ್ರಾಂತಿಯನ್ನೇ ಅಲ್ಲಲ್ಲಿ ಉಂಟು ಮಾಡಿದವು. ಕೆಲವು ಸಿನಿಮಾಗಳು ಕೂಡ ಇದನ್ನು ಅಲ್ಲಗಳೆದಿವೆ. ಆದರೂ ಈ ಅಮಾನುಷ ಪದ್ಧತಿ ಸಮಾಜಕ್ಕಂಟಿಕೊಂಡಿದೆ.

ತಾಳಕೇರಿ ಬಸವರಾಜರವರು 'ವರದಕ್ಷಿಣೆ' ಕುರಿತು ಹಾಡುಗಳನ್ನು ಬರೆಯುವುದರ ಮೂಲಕ ಈ ಪದ್ಧತಿಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ವರದಕ್ಷಿಣೆಯೆಂಬುದು ನರಭಕ್ಷಕರ ಮಾತು ।
ವರನಾದ ಸದ್ಗುಣಿಗೆ ಇದು ತಿಳಿದ ಮಾತು ॥
ಕರಪಿಡಿವ ಕನ್ಯಾಮಣಿ ಗುಣಿಯಾದರಾಯ್ತು ।
ಬರಿ ಹಣದಿ ಏನಿಹುದು ತಿಳಿದುಕೊಂಡರೊಳಿತು ॥

ವರದಕ್ಷಿಣೆ ತೆಗೆದುಕೊಳ್ಳವವರು ಮನುಷ್ಯರಾಗಿರುವುದಿಲ್ಲ. ಅವರು ನರಭಕ್ಷಕರು. ಬದುಕನ್ನು ಅರ್ಥ ಮಾಡಿಕೊಂಡು ಹಣಕ್ಕೆ ಬೆಲೆ ಕೊಡದೆ ಗುಣಕ್ಕೆ, ಬದುಕಿಗೆ ಬೆಲೆ ಕೊಡಬೇಕೆಂದು ಮಾರ್ಮಿಕವಾಗಿ ಹೇಳುವ ಹೂಗಾರರು ಇನ್ನೊಂದು ಹಾಡಿನಲ್ಲಿ

ಸತ್ತರೇಂ, ಕೆಟ್ಟರೇಂ ಶಾಪವನು ಕೊಟ್ಟರೇನು
ವರದ ಹಣ ನನಗೊದು ಬಂದ್ರೆ ಸಾಕು ॥
ಎಂದು ಜನರೆದುರಲ್ಲಿ ಪೌರುಷವ ಕೊಚ್ಚಿದರೆ
ಈ ನಿನ್ನ ನಾಗರಿಕತೆಗೆ ಬೆಂಕಿ ಇಡಬೇಕು

ಎಂದು ಹೇಳುವುದರ ಮೂಲಕ ಢಾಂಬಿಕ ಪೌರುಷವನ್ನು ತೋರಿಸಿ ಮೆರೆವ, ಇನ್ನೊಬ್ಬರ ಬದುಕಿನೊಂದಿಗೆ ಚೆಲ್ಲಾಟವಾಡುವ ಅಮಾನವೀಯ ಕೆಲಸವನ್ನು ಖಂಡಿಸುತ್ತಾರೆ. ಜೊತೆಗೆ ಇದು ನಾಗರೀಕತೆಯ ಲಕ್ಷಣವಲ್ಲ ಎಂದು ನೇರವಾಗಿ ಹೇಳುತ್ತಾರೆ. ತಾಳಕೇರಿಯವರು ಸಮಾಜಕ್ಕೆ ಪೂರಕವಾಗಿರದೆ ಇರುವ ಅಂಶಗಳನ್ನು ಬೇಗ ತಿರಸ್ಕರಿಸುತ್ತಾರೆ. ಇದು ಕವಿಗಿರಬೇಕಾದ ನಿಜವಾದ ಕಾಳಜಿ.

ಕವಿಯಾದವನು ಇನ್ನೊಬ್ಬರ ಮೆಚ್ಚುಗೆಯನ್ನು ಗಳಿಸುವುದಕ್ಕೋಸ್ಕರ ಹಾಡುಗಳನ್ನು ಬರೆಯಬಾರದು. ಕವಿ ಎಂದರೆ ಅವನು ಸಮಾಜದ ಪ್ರತಿನಿಧಿ. ಸಮಾಜದ ದನಿಯವನು, ಹೀಗಾಗಿ ಅವನು ಸಮಾಜಕ್ಕೆ ಪೂರಕವಾದ ಅಂಶಗಳ ಬಗೆಗೆ ಮಾತನಾಡಬೇಕು. ಅನ್ಯಾಯದ ವಿರುದ್ಧ ದನಿ ಎತ್ತಬೇಕು. ಮೌಲ್ಯಗಳನ್ನು ಉಳಿಸಿ ಬೆಳೆಸುವುದರ ಕಡೆ ಮನಸ್ಸು ಮಾಡಬೇಕು. ಆಗ ಕವಿಯ ಬದುಕು ಸಾರ್ಥಕವಾಗುವುದರಲ್ಲಿ ಎರಡು ಮಾತಿಲ್ಲ. ಆ ಕೆಲಸವನ್ನು ತಾಳಕೇರಿ ಬಸವರಾಜರವರು ಸಮರ್ಪಕವಾಗಿ ನಿರ್ವಹಿಸಿದ್ದಾರೆ. ಅದೇ ಗುಣಾತ್ಮಕ ಅಂಶ.

ಜಾತಿಯನ್ನು ಈ ಸಮಾಜದಲ್ಲಿ ಬೇರು ಸಹಿತ ಕಿತ್ತಿ ಹಾಕಲು ಬುದ್ಧ, ಬಸವ, ಅಂಬೇಡ್ಕರ, ಮಹಾತ್ಮಗಾಂಧಿ ಮುಂತಾದ ಅನೇಕ ಮಹಾನುಭಾವರು ಅವಿರತವಾಗಿ ಶ್ರಮಿಸಿದರು. ಸಮಾನತೆಯ ಸಮಾಜ ರೂಪುಗೊಳ್ಳಬೇಕು. ಮನುಷ್ಯರನ್ನು ಮನುಷ್ಯರನ್ನಾಗಿ ಕಾಣಬೇಕೆಂದು ಹಂಬಲಿಸಿದರು. ಈ ಹೊತ್ತಿನವರೆಗೂ ಇದು ಸಮಾಜವನ್ನು ಬಿಡದೇ ಕಾಡುತ್ತಿರುವುದು ನಮ್ಮ ಸಮಾಜದ ದುರಂತ. ಜಾತಿ ಎನ್ನುವುದು ನಮ್ಮ ಸಮಾಜಕ್ಕಂಟಿರುವ ದೊಡ್ಡ ಕಪ್ಪು ಚುಕ್ಕೆ, ಜಾತಿಯನ್ನು ನಿರ್ಮೂಲನೆ ಮಾಡಲು ಈ ದೇಶದಲ್ಲಿ ಅನೇಕ ಹೋರಾಟಗಳೇ ನಡೆದಿವೆ. ಈಗಲೂ ಸಹ ಜನಪರ ಚಳುವಳಿಗಳು ಜಾತಿ ವಿರೋಧಿ ಕಾರ್ಯಕ್ರಮಗಳನ್ನು ಸಂಘಟಿಸುವುದರೊಂದಿಗೆ ಜನರಲ್ಲಿ ಜಾಗೃತಿಯನ್ನುಂಟು ಮಾಡುವ ಕೆಲಸವನ್ನು ಮಾಡುತ್ತಲಿವೆ. ಆದರೂ ಇವಾವು ಫಲಕಾರಿಯಾಗುತ್ತಿಲ್ಲ.

ವಚನಕಾರರ ಸಂದರ್ಭದಲ್ಲಿ ವಚನಕಾರರನೇಕರು ಜಾತಿರಹಿತ ಸಮಾಜವನ್ನು ಕಟ್ಟಲು ನಿರಂತರವಾಗಿ ಶ್ರಮಿಸಿದರು. ಸಾಹಿತ್ಯದ ಮೂಲಕ ವೈಚಾರಿಕ ಜಾಗೃತಿಯನ್ನು ಮೂಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಎಲ್ಲವನ್ನು ಕೇಳಿದ, ನೋಡಿದ, ಅರ್ಥೈಸಿಕೊಂಡ ಸಮಾಜ ಇವೆಲ್ಲ ವಿಚಾರಗಳನ್ನು ಅಷ್ಟೇ ಸುಲಭವಾಗಿ ತಳ್ಳಿ ಹಾಕಿತು. ಜಾತಿಯ ನಿರ್ಮೂಲನೆಗೆ ಪ್ರತಿಯೊಬ್ಬ ವ್ಯಕ್ತಿ ಕೂಡ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಪರಿವರ್ತನೆ ಎನ್ನುವುದು ಮನಸ್ಸಿನಲ್ಲಿ ಮೂಡಬೇಕು. ಸಮಾಜದ ಪ್ರಗತಿಯ ಬಗೆಗೆ ಒಳ್ಳೆಯ ಇಚ್ಚಾಶಕ್ತಿ ಇರಬೇಕು.

ಜಾತಿಯ ಬಗೆಗೆ ಆಧುನಿಕ ಸಾಹಿತಿಗಳು ಅನೇಕ ಕತೆ, ಕಾದಂಬರಿ, ಹಾಡುಗಳನ್ನು ಬರೆದು ಸಮಾಜದಲ್ಲಿ ಜಾಗೃತಿ ಮೂಡಿಸಲು, ಮಾನವೀಯತೆಯನ್ನು ಬೆಳಗಲು ಯತ್ನಿಸಿದ್ದಾರೆ. ತಾಳಕೇರಿ ಬಸವರಾಜ ಗವಾಯಿಗಳು ಕೂಡ ಆ ದಿಶೆಯಲ್ಲಿ ಹೆಜ್ಜೆ ಇಟ್ಟವರು.

ಜಾತಿಕುಲದ ಜಗಳ ಮಾಡಬೇಡ ಕಾಣಿರೊ
ಒಡಕು ತೊಡೆದು ಹಾಕಿರೋ ||
ಪ್ರೀತಿ ಸ್ನೇಹದಿಂದ ಮುಂದೆ ಮುಂದೆ ಸಾಗಿರೋ
ಕೂಡಿ ಮುಂದೆ ಸಾಗಿರೊ ||

ನಮ್ಮ ಸಮಾಜದಲ್ಲಿ ಜಾತಿಜಗಳಗಳು ದಿನವೂ ನಡೆಯುತ್ತಿವೆ. ಹೀಗಾಗಿ ನಮ್ಮ ದೇಶವು ಸರಿಯಾದ ರೀತಿಯಲ್ಲಿ ಪ್ರಗತಿಯನ್ನು ಕಾಣುತ್ತಿಲ್ಲ. ಸಣ್ಣತನ, ಸ್ವಾರ್ಥ ಮುಂತಾದ ಸಂಕುಚಿತ ಮನೋಭಾವಗಳು ಕೂಡ ಇದರೊಂದಿಗೆ ಸೇರಿಕೊಂಡು ದೇಶದ ಪ್ರಗತಿಗೆ ಅಡ್ಡಗಾಲಾಕುತ್ತಿವೆ. ಕೂಡಿ ಬಾಳುವ, ಪ್ರೀತಿ - ಸ್ನೇಹವನ್ನು ಹಂಚಿ ನಡೆಯುವ ಎಂದು ಕರೆ ಕೊಡುವ ತಾಳಕೇರಿಯವರು ಜಾತ್ಯಾತೀತ ಮನೋಭಾವವನ್ನು ಸಾರುತ್ತಾರೆ. ತಾಳಕೇರಿ ಬಸವರಾಜರವರೇ ತಮ್ಮ ಇನ್ನೊಂದು ಹಾಡಿನಲ್ಲಿ

"ಜಾತಿ - ಜಾತಿಗಳಲ್ಲಿ ಪ್ರೀತಿ ಬೆಳಿಬೇಕು
ನೀತಿ - ನಡೆ - ನುಡಿಯಲ್ಲಿ ಜಾಗ್ರತೆಯು ಇರಬೇಕು
ಸೋತು ಬಂದವರನ್ನು ಮೇಲಕೆತ್ತಬೇಕು

ಮಾತು - ಮನ - ಭಾವಗಳು ಶುದ್ಧವಿರಬೇಕು.

ಎಂದು ಹೇಳುತ್ತಾರೆ. ಅವರು ಪ್ರೀತಿ, ಮಮತೆಗಳಿಗೆ ಕೊಡುವ ಮಹತ್ವ, ಸೋತು ಬಂದವರನ್ನು ಮೇಲಕೆತ್ತಬೇಕು ಎನ್ನುವ ವಿಶಾಲ ವ್ಯಕ್ತಿತ್ವ ಎಂತವರನ್ನು ಚಿಂತನೆಗೀಡುಮಾಡುವುದರಲ್ಲಿ ಸಂದೇಹವಿಲ್ಲ, ಅವರ ಈ ರೀತಿಯ ನಿಲುವುಗಳು ಪ್ರಗತಿಪರ ಸಮಾಜಕ್ಕೆ ದಾರಿದೀಪದಂತಿದೆ. ಸದಾ ಕಾವ್ಯಾಸಕ್ತರಲ್ಲಿ ಹೊಸ ಪ್ರಜ್ಞೆಯನ್ನುಂಟು ಮಾಡಲು; ಜಾತ್ಯಾತೀತ ಸಮಾಜವನ್ನು ಕಟ್ಟಲು ಪ್ರೇರೇಪಿಸುತ್ತವೆ. ಒಳ್ಳೆಯ ನಾಡು ಕಟ್ಟಲು, ನಮ್ಮ ಸಂಸ್ಕೃತಿಯನ್ನು ಎತ್ತರಕ್ಕೆ ಏರಿಸುವ ಹಂಬಲ ಈ ತುಡಿತದ ಹಿಂದೆ ಇರುವುದನ್ನು ಗಮನಿಸಬಹುದು.

ಮನುಷ್ಯನ ಮನಸ್ಸು ಸದಾ ಚಂಚಲತೆಯಿಂದ ಕೂಡಿರುವಂತಹುದು. ಮಂಗನ ತರದ ಗುಣ ಹೊಂದಿರುವಂತಹುದು. ಮನಸ್ಸಿನ ಬಗೆಗೆ ಕನ್ನಡ ಕಾವ್ಯದಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಇದರ ಬಗೆಗೆ ಬರೆಯದೇ ಇರುವ ಲೇಖಕರೇ ಇಲ್ಲ. ಇಂತಹ ಮನಸ್ಸಿನ ಬಗೆಗೆ ಬಸವರಾಜ ತಾಳಕೇರಿಯವರು ಬರೆದ ಹಾಡು 'ಮಂಗನ ನೋಡಿದಿರಾ?' ಗಮನ ಸೆಳೆಯುವಂತಿದೆ.

ಎಲ್ಲರ ಹೃದಯದಿ ವಾಸವಾಗಿರುವುದು'
ಎಲ್ಲಿಯೂ ನಿಲ್ಲದೆ ಕುಣಿದಾಡುತಿರುವದು
ಬಲ್ಲಿದರ ಬಾಳಿಗೆ ಬಲು ಕೊಡುವುದು
ಅಲ್ಲಲ್ಲಿ ಸುತ್ತಾಡಿ ಮತ್ತೆ ಇಲ್ಲಿಗೆ ಬರುವುದು

ತರ ತರದ ರುಚಿಗಾಗಿ ತಿರುಗಾಡುತಿರುವುದು
ಅರೆನಿಮಿಷವಾದರೂ ಸ್ಥಿರವಾಗಿ ನಿಲ್ಲದು
ಮರವಿರಲಿ ಮನೆಯಿರಲಿ ಓಡಾಡುತ್ತಿರುವುದು
ಗುರಿಯಿಲ್ಲ ಗತಿಯಿಲ್ಲ ತನ್ನ ತಾ ತಿಳಿಯದು

ನಿಂತಲ್ಲಿ ನಿಲ್ಲದೆ ಸದಾ ಹರಿದಾಡುವ ಮನಸ್ಸನ್ನು ಯಾರು ಗೆಲ್ಲುತ್ತಾರೊ ಅವರು ಮಾತ್ರ ಶ್ರೇಷ್ಠ ವ್ಯಕ್ತಿಗಳಾಗಲು ಸಾಧ್ಯ. ಮನಸ್ಸಿನ ಬಗ್ಗೆ ಅನೇಕರು ಹೇಳಿದ - ಬರೆದ ವಿಚಾರಗಳನ್ನು ಕೇಳಿದರೂ ಮರೆತು ಬಿಡುತ್ತೇವೆ. ಇದಕ್ಕೂ ಮನಸ್ಸೇ ಕಾರಣ, ಅನುಭಾವಿಗಳಿಗಂತೂ ಈ ಮನಸ್ಸು ಸಾಹಿತ್ಯಕವಾಗಿ ಸಾಕಷ್ಟು ಕಾಡಿದೆ. ಇದರ ಬಗೆಗೆ ವಿವಿಧ ರೀತಿಯಲ್ಲಿ ತಮ್ಮ ವಿಚಾರಗಳನ್ನು ದಾಖಲಿಸಿದ್ದಾರೆ.

ಕಾಲ ಸದಾ ಚಲನಶೀಲವಾದುದು. ಕಾಲದ ಜೊತೆಗೆ ಮೌಲ್ಯಗಳು ಬದಲಾಗಬಾರದು. ಸಂಸ್ಕೃತಿ ಬದಲಾಗಬಾರದು. ಹೀಗಾದಾಗ ಮೋಸ-ವಂಚನೆ. ಪ್ರೀತಿಯ ಕೊಲೆ, ಅಸತ್ಯ, ಇವೇ ಹೆಚ್ಚಾಗಿ ಕಂಡು ಬರುತ್ತವೆ. ಪ್ರೀತಿ, ವಿಶ್ವಾಸ, ನಂಬಿಕೆ ಹುಡುಕಿದರೂ ಸಿಗುವುದಿಲ್ಲ. ಶಾಂತಿಯೆನ್ನುವುದು ಕಳೆದು ಹೋಗುತ್ತಿದೆ ಎಂಬ ಹಳಹಳಿಕೆಯನ್ನು ಬಸವರಾಜ ಹೂಗಾರರು 'ಎಂಥ ಕಾಲ ಬಂತು' ಹಾಡಿನಲ್ಲಿ ವ್ಯಕ್ತಪಡಿಸಿದ್ದಾರೆ.

“ಎಂಥ ಕಾಲ ಬಂತು । ಇದು । ಏನು ಕಾಲ ಬಂತು ॥
ಕತ್ತಲು ಬೆಳಕು ಯಾವುದು ಎಂಬುದು ಗುರುತೇ ಯಾರಿಗು ಸಿಗದಾಯ್ತು ॥
ಈಗ ಲೋಕದ ಸ್ಥಿತಿಯೇ ಬದಲಾಯ್ತು ॥
ಸತ್ಯಕೆ ಸುಖವು ಇಲ್ಲದಾಯ್ತು । ಈಗ
ಅಸತ್ಯ ಅನ್ಯಾಯವು ಮೇಲಾಯ್ತು ॥
ಮಾನ ಪ್ರಮಾಣವು ದೂರಾಯ್ತು ।
ಲಂಚಗೂಳಿಗೆ ಮರ್ಯಾದೆ ಬಂತು ॥

ಸತ್ಯ ಮೂಲೆಗುಂಪಾಗಿ ಅಸತ್ಯ, ಅನ್ಯಾಯಗಳೇ ಎದ್ದು ಕಾಣುವಂತಹ, ಲಂಚದ ಜನರೇ ತುಂಬಿದ ಸಮಾಜವನ್ನು ಕುರಿತು ನೇರವಾಗಿ ಬರೆದಿದ್ದಾರೆ. ಸಮಾಜದಲ್ಲಿ ಅಪ್ರಾಮಾಣಿಕತೆ, ಅರಾಜಕತೆ, ಮೌಲ್ಯಗಳ ಕುಸಿತವನ್ನು ಕಂಡು ಹೂಗಾರರು ಸಹಜವಾಗಿ ಜಾನಪದೀಯ ಧಾಟಿಯಲ್ಲಿ ಹಾಡುಗಳನ್ನು ಬರೆದಿದ್ದಾರೆ. ಇಂತಹ ಹಾಡುಗಳು ಓದುವಾಗ ಆಗುವ ಪರಿಣಾಮಕ್ಕಿಂತ ಹಾಡುವಾಗ ಸಾಕಷ್ಟು ಪರಿಣಾಮವನ್ನುಂಟು ಮಾಡುತ್ತವೆ. ಸ್ವತಃ ಬಸವರಾಜ ಹೂಗಾರರು ಕಲಾವಿದರಾಗಿದ್ದರಿಂದ ತಾವು ಬರೆದ ಹಾಡುಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದರು. ಈಗಲೂ ಇವರ ಹಾಡುಗಳನ್ನು ಹಾಡುವ ಕಲಾವಿದರು ಗ್ರಾಮೀಣ ಪ್ರದೇಶಗಳಲ್ಲಿ ಕಾಣಸಿಗುತ್ತಾರೆ. ಜೊತೆಗೆ ಇವರು ಬರೆದ ಹಾಡುಗಳನ್ನು ಬಿಕ್ಷುಕರು ಹಾಡುತ್ತಾ ಭಿಕ್ಷೆ ಬೇಡುತ್ತಿದ್ದಾರೆ. ಕವಿ ಬರೆದ ಹಾಡಿನಿಂದ ಕೆಲವರು ಬದುಕುತ್ತಿದ್ದಾರಲ್ಲ ಇದು ಹಾಡಿನ ಸಾರ್ಥಕತೆ. ಇದಕ್ಕಿಂತ ಸಂತೋಷ ಒಬ್ಬ ಕವಿಗೆ ಇನ್ನೇನು ಬೇಕು?

ಗುರುವಿನ ಬಗೆಗೆ ಬಸವರಾಜ ಹೂಗಾರರು ಭಕ್ತಿ ಭಾವದ ನೆಲೆಯಲ್ಲಿ ಹಾಡುಗಳನ್ನು ರಚಿಸಿದ್ದು ಗುರುವಿಗೆ ನಾವು ಸಲ್ಲಿಸಬೇಕಾದ ಗೌರವಃ ತೋರಿಸಬೇಕಾದ ಪ್ರೀತಿಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಅಜ್ಞಾನದ ಕತ್ತಲೆಯನ್ನು ಕಳೆದು ಜ್ಞಾನದ ಬೆಳಕನ್ನು ಕೊಡುವಃ ವ್ಯಕ್ತಿತ್ವವನ್ನು ರೂಪಿಸುವ ಆ ಚೇತನಕ್ಕೆ ಸಾಕಷ್ಟು ಋಣಿಯಾಗಿರಬೇಕೆನ್ನುತ್ತಾರೆ. ಇವತ್ತು ಪ್ರತಿ ಕ್ಷೇತ್ರದಲ್ಲೂ ಸಾಧನೆ ಮಾಡಿದ ವ್ಯಕ್ತಿಗಳನ್ನು ನೋಡುತ್ತೇವೆ. ಆ ಸಾಧನೆಯ ಹಿಂದೆ ಒಬ್ಬ ಗುರುವಿದ್ದಾನೆ ಎನ್ನುವುದನ್ನು ಮರೆಯಬಾರದು. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ” ಎಂದು ಒಂದು ಕಡೆ ಒಬ್ಬ ಅನುಭಾವಿ ಹೇಳುತ್ತಾನೆ. ಗುರುವಿಗೆ ಹಿಂದಿನ ಕಾಲದಿಂದಲೂ ನಮ್ಮ ಸಮಾಜದಲ್ಲಿ ಉನ್ನತವಾದ ಸ್ಥಾನವಿದೆ.

ಇಂದು ಗುರುವಿಗೆ ಕೊಡಬೇಕಾದ ಗೌರವಃ ಸಿಗಬೇಕಾದ ಪ್ರೀತಿ ಕಡಿಮೆಯಾಗುತ್ತಿದೆ. ಇದಕ್ಕೆ ಕೆಲವು ಶಿಕ್ಷಕರೂ ಕಾರಣ. ಹಾಗಂತ ಎಲ್ಲರನ್ನು ಇಲ್ಲಿ ದೂಷಿಸಲು ಆಗದು. ಅನೇಕ ಕಡೆ ತಮ್ಮ ಪಾಡಿಗೆ ತಾವಿದ್ದು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಗುರುಗಳಿದ್ದಾರೆ. ಅವರಿನ್ನೂ ಮೌಲ್ಯಗಳನ್ನು ಕಾಪಿಟ್ಟುಕೊಂಡಿದ್ದಾರೆ. ತಮ್ಮಲ್ಲಿಗೆ ಬರುವ ವಿದ್ಯಾರ್ಥಿಗಳನ್ನಷ್ಟೇ ತಿದ್ದದೆ ಸಮಾಜವನ್ನು ತಿದ್ದುತ್ತಿರುವುದನ್ನು ಕಾಣಬಹುದು.

ಗುರುವೆ ನೀ - ನಕ್ಕಾಗ, ಮುಖಮಲ್ಲಿಗೆ ಅರಳಿತ್ತು,

ಎದೆಮೊಗ್ಗು ತೆರೆ - ತೆರೆದು ಪರಿಮಳವ ಸೂಸಿತ್ತು

ಆನಂದ ಚಿಮ್ಮಿತ್ತು

ಗುರುವೇ ನೀ ನಿಂತಾಗ ಮೈ ಮರವು ಚಿಗುರಿತು ।

ತಿಳಿಗಾಳಿ ಸುಳಿದಾಡಿ, ಬಾಳೆಲ್ಲ ಹರಡಿತು

ಚಿರಶಾಂತಿ - ಮನಶಾಂತಿ - ನೆಲೆನಿಂತಿತು.

ಗುರು ನಿಂತ ನೆಲೆಯಿಂದ ಆಗುವ ಬದಲಾವಣೆಗಳು, ಆ ಶಕ್ತಿಯ ಮಹತ್ವವನ್ನು ಕುರಿತು ಮನೋಜ್ಞವಾಗಿ ಹಾಡುಗಳನ್ನು ಬರೆದಿರುವ ತಾಳಕೇರಿಯವರ ಒಟ್ಟಾರೆ ಆಶಯ ಗುರುವಿಗೆ ಗೌರವಕೊಡಬೇಕೆನ್ನುವುದೇ ಆಗಿದೆ. ಈ ಸಂದರ್ಭದಲ್ಲಿ ತತ್ವಪದಕಾರರೊಬ್ಬರ ತತ್ತ್ವಪದದ ಸಾಲು ನೆನಪಾಗುತ್ತದೆ. "ಹರ ಮುನಿದರೆ ಗುರು ಕಾಯ್ವನು". ಇಲ್ಲಿ ತತ್ವಪದಕಾರರಿಗೆ ದೇವರಿಗಿಂತ ಗುರು ಮುಖ್ಯವಾಗಿ ಕಾಣುತ್ತಾನೆ. ಅವರು ಗುರುವಿನ ಮೂಲಕವೇ ಅನುಭಾವದ ಬೆಳಕನ್ನು ಕಂಡವರು. ಅಂತರಂಗದೊಳಗೆ ಗುರುವನ್ನು ಪ್ರತಿಷ್ಠಾಪನೆ ಮಾಡಿಕೊಂಡವರು.

ಪ್ರತಿಯೊಬ್ಬ ವ್ಯಕ್ತಿ ಬದುಕಿನಲ್ಲಿ ಮುಂದೆ ಬರಲು ಗುರು ಮತ್ತು ಗುರಿಯ ಅವಶ್ಯಕತೆಯಿದೆ. ಎರಡೂ ಇಲ್ಲದಾಗ ಮುಂದೆ ಬರುವುದು ಕಷ್ಟ. ಈ ಎರಡನ್ನು ಗುರು ಕರುಣಿಸುತ್ತಾನೆ. ಈ ತೆರನಾದಂತಹ ಆಶಯವನ್ನು ಬಹಳ ಸೂಕ್ಷ್ಮವಾಗಿ ತಾಳಕೇರಿ ಬಸವರಾಜರವರು ಕಟ್ಟಿಕೊಡಲು ಯತ್ನಿಸಿದ್ದಾರೆ. ಗುರುವಿನ ಬಗೆಗೆ ಹದಿನೈದಕ್ಕೂ ಹೆಚ್ಚು ಹಾಡುಗಳನ್ನು ಬರೆದಿರುವ ಅವರು ಗುರುವಿನ ಮೂಲಕ ನಮ್ಮ ನೆಲದ ಸಂಸ್ಕೃತಿಯನ್ನು: ಜ್ಞಾನದ ಎತ್ತರವನ್ನು ತಿಳಿಸಿದ್ದಾರೆ. ಇಲ್ಲಿನ ಕೆಲ ಹಾಡುಗಳು ವಿದ್ಯಾರ್ಥಿಗಳಿಗೆ ಮತ್ತೆ ಮತ್ತೆ ಕೇಳಿಸುವಂತಿವೆ. ಇಂದು ಗುರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ದೂರವಾಗುತ್ತಿದೆ. ಕಾರಣಗಳು ಒಂದೆರಡಲ್ಲ. ಅದೇನೆ ಇರಲಿ ಗುರುಗಳ ಮತ್ತು ವಿದ್ಯಾರ್ಥಿಗಳ ನಡುವೆ ಒಳ್ಳೆಯ ಸಂಬಂಧ ಇರಬೇಕು. ಆಗ ಮಾತ್ರ ಶೈಕ್ಷಣಿಕ ಕ್ಷೇತ್ರ ಇನ್ನಷ್ಟು ಎತ್ತರಕ್ಕೆ ಬೆಳೆಯುವುದರಲ್ಲಿ ಸಂಶಯವಿಲ್ಲ.

ಮಹಾತ್ಮಗಾಂಧೀಜಿ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಬಹಳಷ್ಟು ಶ್ರಮವಹಿಸಿದರು. ಸ್ವಾತಂತ್ರ್ಯ ಪಡೆದುಕೊಳ್ಳುವುದಕ್ಕಾಗಿ ದೇಶದ ಉದ್ದಗಲಕ್ಕೂ ಇರುವ ಜನರನ್ನು ಅಣಿಗೊಳಿಸಿದ್ದು, ಅವರನ್ನು ಸಂಘಟಿಸಿದ್ದು ಸಣ್ಣ ಸಂಗತಿಯಲ್ಲ. - ಬ್ರಿಟಿಷರ ಕಪಿಮುಷ್ಟಿಯಲ್ಲಿದ್ದ ಈ ದೇಶವನ್ನು ಬಿಡುಗಡೆಗೊಳಿಸಿ; ಅಹಿಂಸೆ ಎಂಬ ಅಸ್ತ್ರವನ್ನು ಬಳಸಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯ ಸಿಗುವ ಹಾಗೆ ಮಾಡಿದುದರ ಹಿಂದೆ ಸುದೀರ್ಘವಾದ ಯಶೋಗಾಥೆಯೇ ಇದೆ. ಇಡೀ ಭಾರತ ದೇಶದ ಜನತೆಗಾಗಿ ಹಗಲಿರುಳು ಮಿಡಿದ ಗಾಂಧಿ ಸ್ವಾತಂತ್ರ್ಯಕ್ಕಾಗಿ ಸದಾ ಹಂಬಲಿಸಿದ್ದು; ಅದರಲ್ಲಿ ಯಶಸ್ವಿಯಾದುದು ಈಗ ಇತಿಹಾಸ. ದುರಂತವೆಂದರೆ ಇಂತಹ ಮಹಾನ್ ಚೇತನ ಗುಂಡಿಗೆ ಬಲಿಯಾದುದು.

ತ್ಯಾಗ, ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಸರಳತೆ, ಮುಂತಾದವುಗಳಿಗೆ ಮತ್ತೊಂದು ಹೆಸರಾಗಿದ್ದ ಮಹಾತ್ಮಗಾಂಧೀಜಿ ಇಡೀ ದೇಶದ ಪ್ರೀತಿಯನ್ನು ಗಳಿಸಿದವರು. ಗಾಂಧೀಜಿ ಈ ದೇಶವನ್ನು ಬಿಟ್ಟು ಅಗಲಿದಾಗ

ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗಿತ್ತು. ಸದಾ ಜನಸಮುದಾಯದ ಬಗೆಗೆ ಚಿಂತಿಸುತ್ತಿದ್ದ, ಜಾತಿ ವ್ಯವಸ್ಥೆಯನ್ನು ಬುಡಸಹಿತ ಕಿತ್ತಿ ಹಾಕುವ ಕನಸು ಕಂಡಿದ್ದ ಅವರು ಆ ದಿಶೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಕೆಲಸದಿಂದಲೇ ದೇಶದ ಗಮನವನ್ನು ತೀವ್ರವಾಗಿ ಸೆಳೆದರು.

ಗಾಂಧೀಜಿಯ ವಿಚಾರ; ಅವರ ಸರಳತೆ, ಸತ್ಯ, ಅಹಿಂಸೆ ಇವು ಇಂದು ಪುಸ್ತಕಕ್ಕೆ ಮಾತ್ರ ಸೀಮಿತವಾಗಿವೆ. ಗಾಂಧಿವಾದವನ್ನು ಇಂದು ನಮ್ಮ ಸಮಾಜ ಎಷ್ಟರಮಟ್ಟಿಗೆ ಸ್ವೀಕರಿಸಿದೆ ಎಂದು ಆಲೋಚಿಸಿದರೆ ವಿಷಾದವೆನಿಸುತ್ತದೆ. ಗಾಂಧಿ ಹೆಸರು ಇಂದು ಅನೇಕ ಸಂದರ್ಭದಲ್ಲಿ ತಮಾಷೆಗೆ ಬಳಕೆಯಾಗುತ್ತಿರುವುದು ನಮ್ಮೆಲ್ಲರಲ್ಲಿ ತಳಮಳವನ್ನುಂಟು ಮಾಡುತ್ತಿದೆ. ಆದರೂ ಬೆರಳೆಣಿಕೆಯಷ್ಟು ಜನರಾದರೂ ಗಾಂಧಿವಾದವನ್ನು; ಅವರ ವ್ಯಕ್ತಿತ್ವವನ್ನು ಪ್ರೀತಿಸುತ್ತಿದ್ದಾರೆ. ಬದುಕಿನಲ್ಲಿ ಅಳವಡಿಸಿಕೊಂಡು ಸಾಗಿದ್ದಾರೆ ಎನ್ನುವುದೇ ಸಮಾಧಾನದ ಸಂಗತಿ. ಸರಿಯಾದ ರೀತಿಯಲ್ಲಿ ಆಲೋಚಿಸಿದರೆ ಗಾಂಧಿವಾದಕ್ಕೆ ಒಂದು ಮೌಲಿಕ ಸ್ಥಾನವಿದೆ. ಅವರ ವಾದ ಎಲ್ಲ ಕಾಲಕ್ಕೂ ಬೆಳಕಾಗುವಂತಹದ್ದು. ಹಾಗೆ ನೋಡಿದರೆ ಗಾಂಧಿಯೇ ಎಲ್ಲ ಕಾಲದ ಬೆಳಕು. ಇಂತಹ ವ್ಯಕ್ತಿತ್ವ ಅಪರೂಪವಾದುದು.

ಮಹಾತ್ಮಗಾಂಧೀಜಿಯವರ ಕುರಿತಂತೆ ಅನೇಕ ಕಥೆ, ಕಾದಂಬರಿ, ಕಾವ್ಯಗಳು ಬಂದಿವೆ. ಡಾ. ಬೆಸಗರಹಳ್ಳಿ ರಾಮಣ್ಣನವರ ಕಥೆ 'ಗಾಂಧಿ ಎಂಬ ಹುಡುಗ', ಪ್ರೊ. ಚಂದ್ರಶೇಖರ ಪಾಟೀಲ್‌ರ 'ಗಾಂಧಿ ಸ್ಮರಣೆ'; ಎಚ್. ನಾಗವೇಣಿಯವರ 'ಗಾಂಧಿ ಬಂದ.' ಡಾ. ಸರಜೂ ಕಾಟ್ಕರ್‌ರವರ 'ಗಾಂಧಿ ಟೂ ಗೋದ್ರಾ' ಮುಂತಾದ ಕೃತಿಗಳು ಗಮನಾರ್ಹವಾಗಿವೆ. ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಇವರು 'ಗಾಂಧೀಜಿಗೆ ಸಂಬಂಧಿಸಿದ ಕವಿತೆಗಳ ಬೃಹತ್ ಪ್ರಾತಿನಿಧಿಕ ಸಂಪಾದನಾ ಕೃತಿಯನ್ನೇ ಪ್ರಕಟಿಸಿದೆ. ಈ ಹೊತ್ತಿಗೂ ಗಾಂಧೀಜಿಯ ಚಿಂತನೆಗಳ ಕುರಿತಂತೆ ವಿಚಾರ ಸಂಕೀರ್ಣಗಳು ಏರ್ಪಟ್ಟು ಸಾಂಸ್ಕೃತಿಕ ಮುಖಾಮುಖಿ ನಡೆಸುತ್ತಿವೆ. ಇವೆಲ್ಲವುಗಳಿಂದ ತಿಳಿದು ಬರುವ ಅಂಶವೆಂದರೆ ಗಾಂಧೀಜಿ ಇಂದಿಗೂ ನಮ್ಮನ್ನು ಬೇರೆ ಬೇರೆ ರೀತಿಯಲ್ಲಿ ಕಾಡುತ್ತಿದ್ದಾರೆ.

ಬಸವರಾಜ ತಾಳಕೇರಿಯವರು ಕೂಡ ಮಹಾತ್ಮ ಗಾಂಧೀಜಿಯವರಿಗೆ ಸಂಬಂಧಿಸಿದಂತೆ ಒಂಭತ್ತು ಹಾಡುಗಳನ್ನು ಬರೆದಿದ್ದಾರೆ. ಅವರ ವ್ಯಕ್ತಿತ್ವ ಸಿದ್ದಾಂತ, ಅಗಾಧವಾದ ಸೇವೆ ಮುಂತಾದವುಗಳ ಹಿನ್ನೆಲೆಯಲ್ಲಿ ರಚನೆಯಾದ ಈ ಹಾಡುಗಳು ಸೊಗಸಾಗಿವೆ.

ಹುಟ್ಟಿ ಬಾ ಬಾಪೂಜಿ ಮತ್ತೊಮ್ಮೆ ಭಾರತಕೆ।
ಭವಣೆಯಲಿ ಬಳಲುವದು ನೀಡು ಸುಮತಿ ಜನಕೆ
ಸತ್ಯ ಅಹಿಂಸೆ ದಯೆ ಧರ್ಮ ಶಾಂತಿ
ಸುಮತಿ ಅಳಿದಿವೆ
ಮಿಥ್ಯವಾದ ಜಾತಿ ಪಂಥ ಪಂಗಡಗಳು ಬೆಳೆದಿವೆ

ಪುಣ್ಯಮೂರ್ತಿ ನಿನ್ನ ತತ್ವಡಾಂಭಿಕರ ಸೊತ್ತಾಗಿವೆ
ನಿನ್ನ ಅಮರ ಸಂದೇಶ ಬೆಳಗು ದೀನ ಬಂಧುವೆ ॥

ಇಲ್ಲಿ ಗಾಂಧೀಜಿಗೆ ಮತ್ತೆ ಮರು ಜನ್ಮವೆತ್ತಿ ಬರಲು ಕೋರುತ್ತಲೇ ದೇಶದ ಸದ್ಯದ ಪರಿಸ್ಥಿತಿಯ ಚಿತ್ರಣವನ್ನು ಕೊಡುತ್ತಾರೆ. ಜೊತೆಗೆ ಕೆಲವರು ಗಾಂಧಿಯ ತತ್ವಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ಕಂಡು ಮರಗುತ್ತಾರೆ.

"ರಾಟಿ ಮೇಟಿಗಳನ್ನು ಮನಸಾರೆ ಮೆಚ್ಚಿರುವೆ
ಖಾದಿ ಸ್ವರ್ಗದ ಹಾದಿ ಎಂದದನು ಧರಿಸಿರುವೆ
ಕಾಯಕವೆ ಕೈಲಾಸವೆಂದ ಮುದ್ದು ಬಸವನಿಗೊಲಿದೆ
ಭಾರತಕೆ ಪೂಜ್ಯಪಿತ ಮಹಾತ್ಮನು ನೀನಾದೆ"

ಗಾಂಧಿಯವರು ದೇಶೀಯತೆಗೆ ನೀಡಿದ ಮಹತ್ವವನ್ನು ನೆನಪಿಸುತ್ತಲೇ ಶರಣರ ಕಾಯಕ ನಿಲುವನ್ನು ಪ್ರೀತಿಸುತ್ತಿದ್ದ ಬಗೆಯನ್ನು ನೆನಪಿಸುತ್ತಾರೆ. ತಾಳಕೇರಿಯವರು ಬರೆದ ಗಾಂಧೀಜಿಯ ಕವಿತೆಗಳು ಅವರ ಸಮಗ್ರ ವ್ಯಕ್ತಿತ್ವಕ್ಕೆ; ಚಿಂತನೆಗಳಿಗೆ ಹಿಡಿದ ಕೈಗನ್ನಡಿಯಂತಿವೆ. ನಾನು ಈಗಾಗಲೇ ಹೇಳಿದಂತೆ ಗಾಂಧಿ ಎಂದರೆ ಅದೊಂದು ಸಂಸ್ಕೃತಿ; ಅದೊಂದು ಮೌಲ್ಯ ಎಂದು ಪರಿಭಾವಿಸಿಕೊಂಡಾಗ ನಮಗೆ ಗಾಂಧಿ ಇನ್ನಷ್ಟು ಹತ್ತಿರವಾಗಬಹುದು. ಗಾಂಧಿಯ ವ್ಯಕ್ತಿತ್ವ; ಅವರ ಚಿಂತನಾಕ್ರಮ ನಮಗೆ ಸದಾ ಬೇಕು.

ಗಾಂಧೀಜಿಯವರ ಪ್ರತಿಮೆಯನ್ನು ಗಲ್ಲಿಗೊಂದರಂತೆ ಅನಾವರಣಗೊಳಿಸಿ ಅವಮಾನ ಮಾಡುವುದಕ್ಕಿಂತ ಅವರ ವಿಚಾರಗಳನ್ನು ಅಳವಡಿಸಿಕೊಂಡು ಸಾಗಿದಾಗ ಮಾತ್ರ ನಾವು ಅವರಿಗೆ ನಿಜವಾದ ಗೌರವನ್ನು ಸಲ್ಲಿಸಿದಂತಾಗುತ್ತದೆ. ಸರಕಾರ ಅವರ ಪುಸ್ತಕಗಳನ್ನು ಪ್ರಕಟಿಸುವುದರ ಮೂಲಕ ಕಡಿಮೆ ಬೆಲೆಯಲ್ಲಿ ಓದುಗರ ಕೈಗೆ ಸಿಗುವಂತೆ ಮಾಡುವುದು ಉಚಿತವಾದುದು.

ಎಂತಿಹಳೊ ನನ್ನವಳು ನನ್ನನ್ನೇ ನೆನೆಯುವಳು।
ಎಂತಿಹಳೊ ನನ್ನವಳು ತವರೂರಿನಲ್ಲಿ ॥
ಎಂತಿಹಳೊ ನನ್ನರಸಿ ಮನಸಿಗತಿ ಮುದವೆರಸಿ
ಎಂತಿರುವಳೋ ಅವಳು ದೂರದೂರಲ್ಲಿ ॥
ಎಂದಾದರೊಂದು ದಿನ ಬಿರಿ ನುಡಿಯ ನುಡಿದಾಗ
ಬಳಬಳನೆ ಕಣ್ಣೀರ ಸುರಿಸುವಳು
ನಾನಿರದ ದಿನವೆಲ್ಲ ನನ್ನನ್ನೇ ನೆನೆನೆನೆಸಿ।
ಕೊರಕೊರಗಿ ಮರುಮರುಗಿ ಮಿಡುಕುವಳು ॥

ಬರುವದು ಬರುತಿರಲಿ ಹೋಗುವುದು ಹೋಗ್ತಿರಲಿ।

ನಾವೀರ್ವರೊಂದಿರಲಿ ಎನ್ನುವಳು ||

ಸುಖವು ಬೇಡೆನಗೆ ಸ್ವರ್ಗವೂ ಬೇಡೆನಗೆ ||

ನಿಮ್ಮ ಸುಖ ಸಹವಾಸವಿರಲೆನ್ನುವಳು ||

ನಿಜವಾದ 'ದಾಂಪತ್ಯಗೀತೆ'ಯೊಂದನ್ನು ಬರೆದಿರುವ ತಾಳಕೇರಿ ಬಸವರಾಜರು ಮುಗ್ಧ ಪತ್ನಿಯ ಸಹಜ ಸ್ವಭಾವಗಳನ್ನಿಲ್ಲಿ ಬಿಚ್ಚಿಟ್ಟಿದ್ದಾರೆ. ಗಂಡ ಹೆಂಡತಿಯರ ದೇಹ ಎರಡಾಗಿದ್ದರೂ ಮನಸ್ಸು ಒಂದೇ. ಸಂಸಾರ ಎಂಬ ಬದುಕಿನ ಗಾಡಿಗೆ ಗಂಡ ಹೆಂಡತಿ ಜೋಡೆತ್ತು ಇರುವ ಹಾಗೆ, ಅವರೀರ್ವರ ಮನಸ್ಸು ಒಂದಿದ್ದಾಗ ಬದುಕು ಸಾರ್ಥಕ್ಯವನ್ನು ಪಡೆದುಕೊಳ್ಳುತ್ತದೆ. ಬಂಗಾರವಾಗುತ್ತದೆ. ಅದಕ್ಕಿಂತಲೂ ಬಹಳ ಮುಖ್ಯವಾಗಿ ಆದರ್ಶವಾಗುತ್ತದೆ.

ತಾಳಕೇರಿಯವರು ಈ ಹಾಡಿನ ಮೂಲಕ ಸಂಸಾರದ ಅರ್ಥವನ್ನು ಧ್ವನಿಸುತ್ತಾರೆ. ಬದುಕಿನ ಈ ಹಾದಿಯಲ್ಲಿ ನೋವು, ಕಷ್ಟ-ಕಾರ್ಪಣ್ಯಗಳು ಸಹಜ. ಬದುಕಿಗೆ ಬೆನ್ನು ಕೊಡದೆ ಎದೆಗೊಟ್ಟು ಎದುರಿಸಬೇಕು. ಕಷ್ಟಪಡಬೇಕು. ಆಗ ಸುಖ ತಾನೇ ಸಿಗುತ್ತದೆ. ಬೇಂದ್ರೆ ಹೇಳಿದ ಹಾಗೆ ಬಂದರೆ ಮಾತ್ರ ಬೇಂದ್ರೆ ಆಗಲು ಸಾಧ್ಯ ಎನ್ನುವಂತೆ ಬದುಕಿನಲ್ಲಿ ಬರುವ ಎಲ್ಲವನ್ನು ದಂಪತಿಗಳು ಸಮನಾಗಿ ಸ್ವೀಕರಿಸಿ ಸಾಗಬೇಕು.

ಬಸವರಾಜ ಹೂಗಾರರು ಬರೆದ ಈ ಹಾಡನ್ನು ಓದಲು ತೊಡಗಿದರೆ 'ಮೈಸೂರು ಮಲ್ಲಿಗೆ' ಕವಿ ಕೆ.ಎಸ್. ನರಸಿಂಹಸ್ವಾಮಿ ನಮಗೆ ನೆನಪಾಗದೆ ಇರದು. ಮೈಸೂರು ಮಲ್ಲಿಗೆ ಸಂಕಲನದ ಮೂಲಕ ದಾಂಪತ್ಯದ ಸುಂದರ ಚಿತ್ರಣಗಳನ್ನು ಕಟ್ಟಿಕೊಟ್ಟಿರುವ ಅವರು ಸಾಹಿತ್ಯ ಲೋಕದಲ್ಲಿ 'ಪ್ರೇಮ ಕವಿ'ಯೆಂದೇ ಅಜರಾಮರರಾಗಿದ್ದಾರೆ. ಅವರ ಇಡೀ ಸಂಕಲನವನ್ನು ಓದಿದಾಗ ಎಲ್ಲೂ ಅಶ್ಲೀಲತೆ ಎಂದು ಅನಿಸುವುದೇ ಇಲ್ಲ. ಇದೆಲ್ಲವನ್ನು ಮೀರಿ ಬರೆದ ಒಂದು ಅಪರೂಪದ ಕಾವ್ಯ ಅವರದು. ಶೃಂಗಾರ, ಪ್ರೀತಿ, ಮಧುರಭಾವ, ನೆನಪು, ಅಗಲಿಕೆ, ಒಂಟಿತನ, ಮುಂತಾದ ಭಾವಗಳನ್ನು ಕಲಾತ್ಮಕವಾಗಿ ಹಿಡಿದಿಡುವ ಕುಸುರಿ ಕೆಲಸವನ್ನು ನರಸಿಂಹಸ್ವಾಮಿಯವರು ಮಾಡಿದ್ದಾರೆ. ಅವರ ಹಾಡುಗಳನ್ನು ಕೇಳದ, ಓದದ ಕನ್ನಡಿಗರೇ ಇಲ್ಲ. ಅಷ್ಟೊಂದು ಜನಪ್ರಿಯತೆಯನ್ನು ಈ ಸಂಕಲನ ಕೆ.ಎಸ್. ನರಸಿಂಹಸ್ವಾಮಿಯವರಿಗೆ ತಂದುಕೊಟ್ಟಿದೆ. ರೈಲಿನಲ್ಲಿ, ಬಸ್ಸಿನಲ್ಲಿ ಭಿಕ್ಷೆ ಬೇಡುವ ಭಿಕ್ಷುಕರು ಇವರ ಹಾಡುಗಳನ್ನು ಹಾಡಿ ಬದುಕುತ್ತಿದ್ದಾರೆ. ಅವರ ಹಾಡುಗಳಿಗೆ ಜೀವ ತುಂಬುತಿದ್ದಾರೆ. ತಾಳಕೇರಿಯವರ ಈ ಹಾಡು ಕೂಡ ತನ್ನದೇ ಆದ ರೂಪಕ ಪ್ರತಿಮೆಗಳ ಮೂಲಕ ದಾಂಪತ್ಯದ ನವಿರು ಭಾವನೆಗಳ ಮೂಲಕ ಸೆಳೆಯುತ್ತದೆ. ಈ ಸಂದರ್ಭದಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪ, ದ.ರಾ.ಬೇಂದ್ರೆ, ಡಾ.ಎಚ್.ಎಸ್. ವೆಂಕಟೇಶ್ ಮೂರ್ತಿ, ಡಾ. ಸಿದ್ಧಲಿಂಗಯ್ಯ, ಬಿ.ಆರ್. ಲಕ್ಷ್ಮಣರಾವ್, ಸುಮತೀಂದ್ರನಾಡಿಗ, ಮುಂತಾದವರ ಕವಿತೆಗಳು ನೆನಪಾಗುತ್ತವೆ. ಇಂತಹ ಕಾವ್ಯದ ಮೂಲಕ ಸಾಹಿತ್ಯ ಲೋಕವನ್ನು ಸಮೃದ್ಧಗೊಳಿಸುವ ಕಾವ್ಯವನ್ನು ಪ್ರೀತಿಸುವ ಈ ತೆರನಾದ ಕೆಲಸ ಕನ್ನಡ ಕಾವ್ಯ ಲೋಕದಲ್ಲಿ ನಿರಂತರವಾಗಿ ನಡೆಯಬೇಕಿದೆ. ಆಗ ಪ್ರತಿಯೊಬ್ಬರ ಬದುಕು ಸಹ್ಯವಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ದೇಶದ ಜನಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದರ ಹೆಚ್ಚಳದಿಂದಾಗಿ ಎಲ್ಲ ಸಮಸ್ಯೆಗಳು ಉದ್ಭವಿಸುತ್ತಿವೆ. ದೇಶದ ಪ್ರಗತಿಯ ಹಿನ್ನಡೆಗೆ ಜನಸಂಖ್ಯೆಯೂ ಪ್ರಮುಖ ಕಾರಣವಾಗಿದೆ. ಜನಸಂಖ್ಯೆಯ ಹೆಚ್ಚಳಕ್ಕೆ ಅನಕ್ಷರತೆ, ಮೂಢನಂಬಿಕೆ, ಬೇಗ ಮದುವೆ ಮಾಡಿಕೊಡುವುದು ಹೀಗೆ ಅನೇಕ ಅಂಶಗಳನ್ನು ಪಟ್ಟಿ ಮಾಡಿ ಹೇಳಬಹುದು. ಗಂಡಾಗಲಿ ಹೆಣ್ಣಾಗಲಿ ಮಕ್ಕಳೆರಡೇ ಇರಲಿ, ನಾವಿಬ್ಬರು ನಮಗಿಬರು, ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ ಎನ್ನುವ ವಾಕ್ಯಗಳನ್ನು ಜನಸಮುದಾಯಕ್ಕೆ ತಲುಪಿಸಿದ್ದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸರಕಾರ ಕುಟುಂಬ ಯೋಜನೆಯನ್ನು ಜಾರಿಗೆ ತಂದಿದ್ದಲ್ಲದೆ ಇದರ ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅನುವು ಮಾಡಿಕೊಟ್ಟಿತು. ಸಿನಿಮಾಗಳನ್ನು ತೋರಿಸುವುದರ ಮೂಲಕ ಜನಸಂಖ್ಯೆ ಸಮಸ್ಯೆಯ ಅರಿವನ್ನು ಪ್ರತಿಯೊಬ್ಬ ನಾಗರಿಕನು ಪಡೆದುಕೊಂಡು ಕುಟುಂಬ ಯೋಜನೆಯನ್ನು ಅನುಸರಿಸಲು ಅರಿವು ಮೂಡಿಸುವ ದಿಶೆಯಲ್ಲಿ ಸರಕಾರ ಯತ್ನಿಸಿತು. ಇಂದಿಗೂ ಆ ಕೆಲಸವನ್ನು ಆರೋಗ್ಯ ಇಲಾಖೆ ಮಾಡುತ್ತಿದೆ.

ಹಲವಾರು ವರ್ಷಗಳ ಕಾಲ ಸರ್ಕಾರದ ಈ ಯೋಜನೆಯ ಪ್ರಯತ್ನದಿಂದಾಗಿ ಜನರಲ್ಲಿ ಜಾಗೃತಿ ಮೂಡಿದೆ. ಬಹುಪಾಲು ಕುಟುಂಬಗಳು ಈ ಯೋಜನೆಯನ್ನು ಅನುಸರಿಸಿ ಸರಕಾರದ ಕನಸಿಗೆ ಕೈ ಜೋಡಿಸಿವೆ. ಪ್ರಾರಂಭದಲ್ಲಿ ಕುಟುಂಬ ಯೋಜನೆಯ ಕಾರ್ಯಕ್ರಮಗಳಿಗಾಗಿ ತಾಳಕೇರಿ ಬಸವರಾಜರವರು ಸ್ವತಃ ಹಾಡುಗಳನ್ನು ಬರೆದು ಹಳ್ಳಿ ಹಳ್ಳಿ ತಿರುಗಿ ಹಾಡಿದ್ದಾರೆ. ಸರಕಾರದ ಮಹತ್ವದ ಯೋಜನೆಯ ಸಂದೇಶವನ್ನು ತಲುಪಿಸುವಲ್ಲಿ ಪ್ರಾಮಾಣಿಕ ಯತ್ನವನ್ನು ಮಾಡಿದ್ದಾರೆ.

ಕುಟುಂಬ ಕಲ್ಯಾಣ ಇಲಾಖೆಯವರು ಏರ್ಪಡಿಸುವ ಕಾರ್ಯಕ್ರಮದಲ್ಲಿ ತಾವು ಬರೆದ ಹಾಡುಗಳನ್ನು ಹಾಡುತ್ತ, ಜನಪದ ಸಾಹಿತ್ಯದ ಸವಿಯನ್ನು ಉಣಬಡಿಸಿದ್ದಾರೆ. ಆ ಮೂಲಕ ಮರೆಯಾಗುತ್ತಿರುವ ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವ ಕೆಲಸವನ್ನು ಮಾಡಿದ್ದಾರೆ.

ಸಂತಾನವೆರಡಿರಲಿ ಸಂತೋಷ ನಿನಗಿರಲಿ ।
ಶಾಂತಿಯು ಮನೆಯಲ್ಲಿ ತುಂಬಿರಲಿ । ತಂಗೆಮ್ಮ
ಶಾಂತಿ ತುಂಬುವುದು ಮನೆಯಲ್ಲಿ ॥

ಮಂಗಳಾರತಿಗೊಬ್ಬ ಮಗಳಿರಳಿ ಮನೆಯಲ್ಲಿ ।
ಮಂಗಳಕೆ ಶ್ರೀ ಗೌರಿಯಾಗಿರಲಿ । ತಂಗೆಮ್ಮ ।
ಬಂಗಾರವಾಗುವದು ನಿನಬಾಳು ॥

ಕೀರ್ತಿಗೆ ನಿನಗೊಬ್ಬ ಮಗನಿರಲಿ ಮನೆಯಲ್ಲಿ ।
ಪಾರ್ಥನಂದದಲಿ ಶೂರನಾಗಿರಲಿ ॥ ತಂಗೆಮ್ಮ ।
ಸಾರ್ಥಕವಾಗುವುದು ನಿನಬಾಳು ॥

ಮಿತ ಸಂತಾನ ಕುಟುಂಬದ ಮಹತ್ವವನ್ನು ಆತ್ಮೀಯ ಧಾಟಿಯಲ್ಲಿ ಹೇಳುತ್ತಾ ಸಾಗುವ ಈ ಹಾಡು ಆ ಮೂಲಕ ನೀತಿ ಪಾಠವನ್ನು ಕಟ್ಟಿಕೊಡುತ್ತದೆ. ಹತ್ತು ಮಕ್ಕಳಿಗಿಂತ ಒಂದೆರಡು ಮುತ್ತಿನಂತಹ ಮಕ್ಕಳು ಲೇಸು. ಮಿತ ಕುಟುಂಬ ಎಂದೆಂದಿಗೂ ಹಿತ ಕುಟುಂಬವಾಗಿರುತ್ತದೆ. ಮಿತ ಕುಟುಂಬದಿಂದ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸಲು; ಅವರ ಬದುಕನ್ನು ಸರಿಯಾಗಿ ರೂಪಿಸಲು ಸಹಕಾರಿಯಾಗುತ್ತದೆ.

ಕೇಳಿರಿ ಇದು ನನ್ನ ಮಕ್ಕಳ ಸುದ್ದಿ
ಹಡೆಯುವ ಕಾಲಕ್ಕೆ ಬರಲಿಲ್ಲ ಬುದ್ಧಿ
ಅಡಿಗ್ಯಾದ ಮ್ಯಾಲೆ ಒಲೆ ಉರಿಯುತ್ತೈತಿ,
ಕೆಟ್ಟಿಂದ ಕೆಲವರಿಗೆ ಬುದ್ದಿ ಬರತ್ತೈತಿ
ಎಂಬುದ ಗಾದೆಯು ಎಲ್ಲರಿಗೆಗೊತ್ತೈತಿ
ರಾತ್ರಿಕಂಡ ಬಾವಿಯಲ್ಲಿ ಹಗಲು ಬೀಳ್ಳೈತಿ ||

ಸ್ವಗತದ ಧಾಟಿಯಲ್ಲಿ ಕಥನವೊಂದನ್ನು ಸೊಗಸಾಗಿ ಹೇಳುವ ಕವಿ ತಾಳಕೇರಿಯವರು ಹೆಚ್ಚು ಮಕ್ಕಳು ಹಡೆದು ಪಶ್ಚಾತ್ತಾಪ ಪಡುವುದಕ್ಕಿಂತ ಮೊದಲೇ ಹೆಚ್ಚೆತ್ತುಕೊಳ್ಳುವುದು ಯೋಗ್ಯ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ.

ಮಿತ ಸಂತಾನದ ಬಗೆಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಲು ಯತ್ನಿಸಿದ ಅವರ ಪ್ರಯತ್ನ ಅಭಿನಂದನೀಯವಾದುದು. ಜನಸಂಖ್ಯೆ ಸಮಸ್ಯೆ ಎನ್ನುವುದು ಬರೀ ನಮ್ಮ ರಾಜ್ಯಕ್ಕೆ ಸೀಮಿತವಾದುದಲ್ಲ. ಇಡೀ ರಾಷ್ಟ್ರಕ್ಕೆ ಸಂಬಂಧಿಸಿದುದಾಗಿದೆ. ತಾಳಕೇರಿಯವರು ಆ ಹೊತ್ತಿನ ಸಂದರ್ಭದ ಬಡತನದ ಬದುಕು, ವೈಯಕ್ತಿಕ ಕಷ್ಟ-ಕಾರ್ಪಣ್ಯ ಇವುಗಳ ನಡುವೆಯೇ ಕ್ರಿಯಾಶೀಲವಾಗಿ ಬರೆಹದ ಮೂಲಕ; ಹಾಡುವುದರ ಮೂಲಕ ಕನ್ನಡ ಸಂಸ್ಕೃತಿಯನ್ನು ಕನ್ನಡದ ಮನಸ್ಸುಗಳನ್ನು ಬೆಳೆಸುವ ಕೆಲಸ ಮಾಡಿದ್ದಾರೆ. ಒಂದು ರೀತಿಯಲ್ಲಿ ಈ ಸೇವೆ ಕನ್ನಡ ನಾಡಿನ ಸೇವೆಯೂ ಹೌದು. ಇಡೀ ಭಾರತದ ಸೇವೆಯೂ ಹೌದು.

ಆಧುನಿಕ ಕನ್ನಡ ಕಾವ್ಯವನ್ನು ಅವಲೋಕಿಸಿದಾಗ ನವೋದಯ ಘಟ್ಟದ ದೇಶಭಕ್ತಿಗೀತೆಗಳು ಗಮನ ಸೆಳೆಯುತ್ತವೆ. ಇದರ ಜೊತೆಗೆ ಕನ್ನಡ ನಾಡು-ನುಡಿ, ಪ್ರಕೃತಿ ಸೌಂದರ್ಯವನ್ನು ಕುರಿತು ಬರೆದ ಕವನಗಳು ತಮ್ಮ ಗೇಯತೆಯಿಂದ ಇಂದಿಗೂ ಕಾಡುತ್ತವೆ. ದೇಶಭಕ್ತಿಗೀತೆಗಳ ರಚನೆ ಆ ಹೊತ್ತಿನ ಸಂದರ್ಭದಲ್ಲಿ ಅನಿವಾರ್ಯವಾಗಿತ್ತು. ನಮ್ಮ ದೇಶವನ್ನು ಬ್ರಿಟಿಷರು ತಮ್ಮ ಕಪಿಮುಷ್ಠಿಯಲ್ಲಿ ಹಿಡಿದುಕೊಂಡಿದ್ದರು. ಅವರನ್ನು ಈ ದೇಶದಿಂದ ಹೊಡೆದೋಡಿಸಿ ಇಡೀ ಭಾರತವನ್ನು ನಮ್ಮ ತೆಕ್ಕೆಗೆ ತೆಗೆದುಕೊಳ್ಳುವುದು ಅತ್ಯಂತ ಮಹತ್ವದ ಸಂಗತಿಯಾಗಿತ್ತು. ಬರೆಹಗಾರರು ಕವಿತೆಗಳನ್ನು ಬರೆಯುವುದರ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕಾಗಿತ್ತು. ಜೊತೆಗೆ ಭಾರತ ದೇಶದ ಮಹತ್ವದ ಬಗೆಗೆ, ಕೀರ್ತಿಯ ಬಗೆಗೆ, ಪ್ರಕೃತಿ ಸೌಂದರ್ಯದ ಬಗೆಗೆ ಗುಣಗಾನ ಮಾಡಬೇಕಾಗಿತ್ತು. ಇದು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರದಲ್ಲೂ ನಡೆಯಿತು. ಗೋವಿಂದಪ್ಪ,

ಕುವೆಂಪು, ಪು.ತಿ.ನರಸಿಂಹಚಾರ್ಯ, ಬೇಂದ್ರೆ, ಜಿ.ಎಸ್. ಶಿವರುದ್ರಪ್ಪ, ಚನ್ನವೀರಕಣವಿ, ಕೆ.ಎಸ್. ನಿಸಾರ ಅಹ್ಮದ್, ಮುಂತಾದ ಪ್ರಮುಖ ಕವಿಗಳು ದೇಶಭಕ್ತಿ ಗೀತೆಗಳನ್ನು ಬರೆದರು.

ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಹೋರಾಟಗಾರರು ಒಂದು ಚಳುವಳಿಯನ್ನು ಕಟ್ಟಿಕೊಳ್ಳುವುದರ ಮೂಲಕ ಅವಿರತವಾಗಿ ಶ್ರಮಿಸಿದರು. ಏನೆಲ್ಲ ಹಿಂಸೆ, ಕಷ್ಟಗಳನ್ನು ಅನುಭವಿಸಿದರು. ಜೈಲಿಗೆ ಹೋಗಿ ಶಿಕ್ಷೆಯ ರುಚಿಯನ್ನು ನೋಡಿದರು. ಅವಮಾನಗಳನ್ನು ಉಂಡರು. ಇದಾವುದಕ್ಕೂ ಸೊಪ್ಪು ಹಾಕದೇ ನಿರಂತರವಾಗಿ ಒಗ್ಗಟ್ಟಿನಿಂದ ದುಡಿದುದರ ಪ್ರತಿಫಲವಾಗಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂತು. ಎಷ್ಟೋ ಜನ ತಮ್ಮ ಪ್ರಾಣವನ್ನೇ ಬಲಿಕೊಟ್ಟರು. ಹೆಂಡತಿ ಮಕ್ಕಳನ್ನು ಕಳೆದುಕೊಂಡರು. ಇವರೆಲ್ಲರಿಗೆ ತಮ್ಮ ವೈಯಕ್ತಿಕ ಬದುಕಿಗಿಂತ ದೇಶ ಮುಖ್ಯವಾಗಿತ್ತು. ಹೀಗಾಗಿ ಯಾವ ಆಸೆ ಆಮಿಷಗಳಿಗೂ ತಮ್ಮ ಮನಸ್ಸನ್ನು ಒಪ್ಪಿಸದೇ ಹಿಡಿದ ಗುರಿಯನ್ನು ಸಾಧಿಸಿ ತೋರಿಸಿದರು. ಆ ಎಲ್ಲ ನಾಯಕರು ಇಂದು ಅಜರಾಮರರಾಗಿದ್ದಾರೆ.

ಬರೆಹಗಾರರು ಹೋರಾಟಗಾರರಿಗೆ ಸ್ಫೂರ್ತಿ ನೀಡುವ ಹಾಗೆ ಕವಿತೆಗಳನ್ನು ಬರೆದರು. ಹೀಗೆ ಬರೆಯುವುದರ ಮೂಲಕ ನಿಮ್ಮೊಡನೆ ನಾವಿದ್ದೇವೆ ಎಂದು ತೋರಿಸಿಕೊಟ್ಟರು. ಒಂದು ಕಡೆ ಒಂದು ಮಾತು ಬರುತ್ತದೆ. ಅದೇನೆಂದರೆ "ಒಂದು ಪೆನ್ನಿನ ಹನಿ ಮಸಿ ನೂರು ತಲೆಗಳಿಗೆ ಬಿಸಿ'. ಹೀಗೆ ಬ್ರಿಟಿಷರಿಗೆ ಈ ದೇಶಕ್ಕೆ ಅನ್ಯಾಯಗೈಯ್ಯುವವರಿಗೆ ಬಿಸಿ ಮುಟ್ಟಿಸುವ ಕೆಲಸವನ್ನು ಬರೆಹಗಾರರು ಮಾಡಿದರು. ಇದು ಒಂದು ರೀತಿಯಲ್ಲಿ ಹೋರಾಟಗಾರರಿಗೆ ನೈತಿಕ ಬಲವನ್ನು ಹೆಚ್ಚಿಸುವ ಶಕ್ತಿ ಯಾವುದೇ ದೇಶ ಅದು ಅಸಮರ್ಥವಾಗಿದೆ, ಅಸಹಾಯಕತೆಯಿಂದ ನರಳುತ್ತಿದೆ, ನಿರ್ವೀರ್ಯವಾಗಿದೆ ಎಂದರೆ ಅದಕ್ಕೆ ಅಲ್ಲಿನ ಬರೆಹಗಾರರು ಕೂಡ ಕಾರಣ. ಬರೆಹಗಾರರು ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ಮಾಡಬೇಕು. ಜೊತೆಗೆ ಬರವಣಿಗೆಯ ಮೂಲಕ ವಾಸ್ತವತೆಯನ್ನು ಎತ್ತಿ ಹಿಡಿದು ಪ್ರಜ್ಞೆಯನ್ನು ಉಂಟು ಮಾಡಬೇಕು. ಆಗ ಉಳಿದವರಿಗೆ ಸಹಜವಾಗಿ ನೈತಿಕ ಬಲ ಸಿಕ್ಕಂತಾಗಿ ಹೋರಾಟಕ್ಕೆ ಅಣಿಯಾಗುತ್ತಾರೆ.

ಒಬ್ಬ ಕವಿಗಿರಬೇಕಾದ ಸಾಮಾಜಿಕ ಬದ್ಧತೆ, ಪ್ರಜ್ಞೆಯನ್ನು ಕುರಿತಂತೆ ಡಾ. ಸರಜೂ ಕಾಟ್ಕರ್‌ರವರು ಅನುವಾದಿಸಿದ 'ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು' ಸಂಕಲನದ ಘನಶ್ಯಾಂ ಅಗರವಾಲ್‌ರ ಕವಿತೆ ನೆನಪಾಗುತ್ತಿದೆ. ಬಹಳ ಪರಿಣಾಮಕಾರಿಯಾಗಿ ಹೇಳುವ ಅವರ ಕವಿತೆಯ ಸಾಲುಗಳು ಹೀಗಿವೆ.

ಈತ ರಾಜಕಾರಣಿ
ಈತ ಬಾಂಬ್ ಸೃಷ್ಟಿಸಿದ
ಈತನಿಗೆ ಹತ್ತು ಬಾರುಕೋಲಿನಿಂದ ಬಾರಿಸಿರಿ.

ಈತ ಧರ್ಮಗುರು
ಈತ ಬಾಂಬಿಗೆ ಧರ್ಮದ ಬಣ್ಣ ನೀಡಿದ

ಈತನಿಗೆ ಇಪ್ಪತ್ತು ಬಾರುಕೋಲಿನಿಂದ ಬಾರಿಸಿರಿ.

ಈತ ಕವಿ, ಲೇಖಕ, ಕಲಾವಿದ

ಈತನಿದ್ದೂ ಬಾಂಬ್ ಸೃಷ್ಟಿಯಾಯಿತು

ಈತನಿಗೆ ನೂರು ಬಾರುಕೋಲಿನಿಂದ ಬಾರಿಸಿರಿ.

ತಾಳಕೇರಿ ಬಸವರಾಜರವರು ದೇಶಭಕ್ತಿಗೀತೆಗಳನ್ನು ಬರೆದಿದ್ದಾರೆ. ಅವು ಅವರ, ಗೀತಭಾರತಿ ಮತ್ತು ಬಸವಗೀತೆ ಎಂಬ ಸಂಕಲನಗಳಲ್ಲಿವೆ.

ಓ ತಾಯೆ ಭಾರತೀಯೆ ||

ವರದಾಯಿ ಸರಸತಿಯೆ |

ಕಾಪಾಡು, ದಯಮಾಡು, ಓ ಪುಣ್ಯ ಸಿರಿಯೆ ||

ನಿನ್ನ ಪುಣ್ಯದ ಕಣ್ಣು ತೆರೆದೊಮ್ಮೆ ನೋಡಮ್ಮ

ಶ್ರೀಕರದಿ ನಮ್ಮ ಎದೆಯ ಕದವ ತೆರೆಯಮ್ಮ

ಹೃದಯ ಮಂದಿರದಲ್ಲಿ, ಶ್ರೀ ಚರಣ ಇರಿಸಮ್ಮ |

ಧನ್ಯತೆಯ ಮಹಾರೂಪ, ಕಣ್ಮುಂದೆ ನಿಲಿಸಮ್ಮ ||

ಎಂದು "ಓ ತಾಯಿ ಭಾರತಿಯೆ ವರನೀಡು' ಎಂದು ಬಿನ್ನಹಿಸಿಕೊಳ್ಳುತ್ತಾರೆ. ಅವರೇ 'ನಾವೆಲ್ಲರೊಂದೆ' ಎನ್ನುವ ಹಾಡಿನಲ್ಲಿ

ನಾವು ಎಲ್ಲರೊಂದೆ ತಾಯಿ ಮಕ್ಕಳೆಂದು ಬಾಳುವಾ |

ನಮ್ಮ ತಾಯಿ ಭಾರತಾಂಬೆ ಅವಳ ಸೇವೆ ಮಾಡುವಾ |

ಅಣ್ಣ ತಮ್ಮರೆಂದು ಕೂಡಿ ದುಡಿದು ನಾಡು ಕಟ್ಟುವಾ |

ನಮ್ಮ ಪ್ರೀತಿ ಸ್ನೇಹಕೀರ್ತಿ ಲೋಕದಲ್ಲಿ ಹರಡುವಾ |

ಸತ್ಯಶಾಂತಿ ತ್ಯಾಗಮೂರ್ತಿ ಗಾಂಧಿಪಿತನ ಸ್ಮರಿಸುವಾ

ಧರ್ಮವೀಡು ನಮ್ಮ ನಾಡು ಭರತಭೂಮಿ ಎನ್ನುವಾ || ೧ ||

ಬಸವಬುದ್ಧ ಶಂಕರ ಪ್ರಸಿದ್ಧ ತತ್ವ ಭಾರತ |

ಮಧ್ವ ರಮಣ ಪೈಗಂಬರ ನಾನಕರ ಸುಭಾರತ |

ನಾವುವೊಂದೆ ದೇಶವೊಂದೆ ವೀರಜನದ ಭಾರತ |

ಹೆಮ್ಮೆಯಿಂದ ಕೂಗಿ ಕರೆವ ಜೈ ಜೈ ಭಾರತ || ೨ ||

ತೆಲುಗು ತಮಿಳು ಪಂಜಾಬ ಗುಜರಾತವು ನಮ್ಮದು
ಮಹಾರಾಷ್ಟ್ರ ಕರ್ನಾಟಕ ಬಂಗಾಲವು ನಮ್ಮದು ।
ಕೇರಳ ಕಾಶ್ಮೀರ ಗೋವೆ ಆಸ್ಸಾಮವು ನಮ್ಮದು
ಭಾಷೆ ಬೇರೆಯಾದರೇನು ಒಂದೇ ಭಾರತೆಂಬುದು ॥

ನಮ್ಮ ದೇಶದ ಬಗೆಗೆ ಪ್ರತಿಯೊಬ್ಬರಿಗೂ ಇರಬೇಕಾದ ದೇಶ ಪ್ರೇಮ, ಭ್ರಾತೃತ್ವ, ವಿಶಾಲ ಮನೋಭಾವ ಇವೆಲ್ಲವುಗಳನ್ನು ಈ ಹಾಡು ಮೇಲ್ಮೈಸಿಕೊಂಡಿದೆ. ತಾಳಕೇರಿಯಂತಹ ಪುಟ್ಟ ಪ್ರಪಂಚದಲ್ಲಿದ್ದುಕೊಂಡು ದೇಶದ ಬಗೆಗೆ ಮಾತನಾಡುವ; ಬರೆಯುವ ಅವರ ತುಡಿತ - ಮಿಡಿತ ಅನುಕರಣೀಯವಾದುದು. ಈ ಹೊತ್ತು ನಮ್ಮಲ್ಲಿ ದೇಶಪ್ರೇಮ, ದೇಶಸೇವೆ ಎನ್ನುವಂತಹ ಪದಗಳು ಮಾತಿನಲ್ಲಿ ಮಾತ್ರ ಹೇರಳವಾಗಿ ಸಿಗುತ್ತಿವೆ. ದೇಶದ ಬಗೆಗೆ ಚಿಂತನೆ - ಕಳಕಳಿಗಳು ಕಡಿಮೆಯಾಗುತ್ತಿವೆ. ಇಂತಹ ಪ್ರಕ್ಷುಬ್ಧ ಸನ್ನಿವೇಶದಲ್ಲಿ ತಾಳಕೇರಿಯಂತಹ ಅನೇಕ ಬರೆಹಗಾರರ ಬರೆಹಗಳು ನಮ್ಮನ್ನು ಚಿಂತನೆಗೀಡು ಮಾಡುತ್ತವೆ. ಇಂತಹ ಹಾಡುಗಳನ್ನು ಓದುವ - ಕೇಳುವುದರ ಜೊತೆಗೆ ದೇಶ ಪ್ರೇಮ, ನಾಡ ಪ್ರೇಮವನ್ನು ಪ್ರತಿಯೊಬ್ಬರೂ ಬೆಳಸಿಕೊಳ್ಳಬೇಕಾದುದು ಎಂದಿಗಿಂತಲೂ ಇಂದು ಅಗತ್ಯವಾಗಿದೆ.

ತಾಯೆ ನಿನ್ನ ಉಪಕಾರವನು
ಮರೆಯಿಲೆಂತು ನಾನು ॥
ನಿನ್ನ ಮಮತೆ ಮೋಹಗಳನ್ನು
ಬಣ್ಣಿಸುವುದು ಸಾಧ್ಯವೇನು ?

ಒಂಭತ್ತು ತಿಂಗಳದಲ್ಲಿ, ಒಡಲಭಾರತಾಪದಲ್ಲಿ ।
ನೊಂದು ಬೆಂದು ಬಾಳುತ ನೀನು, ಪಡೆದ ನನ್ನ ಜನ್ಮವನ್ನು ।
ನಾನು ಹುಟ್ಟುವಾಗ ನಿನ್ನ ಕಷ್ಟವೆಷ್ಟೆ ? ತಾಯಮ್ಮ ।
ನನ್ನ ಜನ್ಮದೊಂದಿಗೆ ನಿನ್ನ ಪುನರ್ಜನ್ಮವಾಯಿತಮ್ಮ
ಮತ್ತೆ ಹುಟ್ಟಿಬಂದೆಯಮ್ಮ ॥ ೧ ॥

ಬಾಣಂತಿ ನಿನ್ನ ಜನ್ಮ, ರಕ್ತ ನದಿಯೆ ಆಯಿತಮ್ಮ
ಆ ನಿನ್ನ ನೋವು - ನಲಿವು, ಲೋಕದಲ್ಲಿ ಯಾರಿಗಮ್ಮ ?
ಮಾಂಸ ಮುದ್ದಿಯಾದ ನನ್ನ, ತಿದ್ದಿ ತೀಡಿ ಬೆಳೆಸಿದಿಯಮ್ಮ
ಕರುಣೆ ತೋಳ ತೊಟ್ಟಿಲದಲ್ಲಿ ತೂಗಿ ಜೋಗುಳ ಹಾಡಿದೆಯಮ್ಮ ।
ಹಾಡಿ ಮೈಮರೆತೆಯಮ್ಮ ॥ ೨ ॥

ಅಳುವದನಿಯ ಕೇಳಿದೊಡನೆ, ಅವಸರಾಗಿ ಬಂದೆಯಮ್ಮ ॥

ಎತ್ತಿ ಎದೆಗೆ ಅವಚಿಕೊಂಡು, ಅಮೃತವನ್ನು ಕುಡಿಸಿದೆಯಮ್ಮ

ರೋಗ - ರುಜಿನ ಬಾರದಂತೆ, ನೋಡಿ ನೀ ನಂಜು ಕುಡಿದೆಯಮ್ಮ

ನನ್ನ ಪ್ರಾಣ ನೀನೆಯಾಗಿ, ನಿತ್ಯ ಕಾಲ ಕಳೆದೆಯಮ್ಮ ||

ಜೋಪಾನ ಮಾಡಿದೆಯಮ್ಮ ||೩||

ಇದು ತಾಳಕೇರಿ ಬಸವರಾಜರವರಿಗೆ ಅತ್ಯಂತ ಜನಪ್ರಿಯತೆಯನ್ನು ತಂದುಕೊಟ್ಟ ಹಾಡು. ಈ ಭಾಗದ ಪ್ರತಿ ಹಳ್ಳಿಯಲ್ಲೂ ಈ ಹಾಡು ಕೇಳಿಬರುತ್ತದೆ. ರೇಡಿಯೋ, ದೂರದರ್ಶನಗಳಲ್ಲೂ ಇದು ಪ್ರಸಾರವಾಗಿ ಜನಪ್ರಿಯತೆಯನ್ನು ಪಡೆದುಕೊಂಡಿದೆ. ತಾಯಿಯ ತ್ಯಾಗ, ಮಮತೆ, ಅಂತಃಕರುಣ, ವಿಶಾಲಮನೋಭಾವ, ಕಷ್ಟ, ನೋವು ಎಲ್ಲವುಗಳನ್ನು ಒಟ್ಟಿಗೆ ಕಟ್ಟಿಕೊಡುವ ಈ ಹಾಡು ತನ್ನ ದೇಶೀಯ ಸೊಗಡಿನಿಂದ ಮನಮುಟ್ಟುತ್ತದೆ. ಒಂದು ಕ್ಷಣ ಚಿಂತಿಸುವಂತೆ ಮಾಡುತ್ತದೆ. ಹಾಡನ್ನು ಭಾವಪೂರ್ಣವಾಗಿ ಹಾಡುವವರಿಂದ ಕೇಳಿಸಿಕೊಂಡರೆ ರೋಮಾಂಚನವಾಗುತ್ತದೆ. ಇದು ಈ ಹಾಡಿನ ಶಕ್ತಿ, ಇದರಲ್ಲಿ ಬರುವ 'ತಾಯಿ' ತಾಳಕೇರಿಯವರ ತಾಯಿಯಷ್ಟೇ ಅಲ್ಲ. ನಮ್ಮೆಲ್ಲರ ತಾಯಿಯೂ ಕೂಡ. ಈ ಹಾಡನ್ನು ಅನೇಕ ವಿದ್ಯಾರ್ಥಿಗಳು 'ಜಾನಪದ ಗೀತೆ' ಸ್ಪರ್ಧೆಗಳಲ್ಲಿ ಹಾಡಿ ಬಹುಮಾನ ಪಡೆದುಕೊಂಡದ್ದು ಲೆಕ್ಕವಿಲ್ಲ. ಬಸವರಾಜರವರು ಇಂತಹ ಅಪರೂಪದ ಗೀತೆಯನ್ನು ಬರೆದು ಸಾರಸ್ವತ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ. ಯಾವುದೇ ಕವಿ ಜೀವಂತವಾಗಿ ಕೊನೆಯವರೆಗೂ ಈ ಪ್ರಪಂಚದಲ್ಲಿ ಅಜರಾಮರವಾಗಿ ಉಳಿಯುವುದು ಇಂತಹ ಕೆಲವು ಹಾಡುಗಳಿಂದ ಮಾತ್ರ.

ತಾಯಿಗೆ ಪ್ರಪಂಚದಲ್ಲೇ ಒಂದು ಪ್ರಮುಖವಾದ ಸ್ಥಾನವಿದೆ. ಅದರಲ್ಲೂ ನಮ್ಮ ಜನಪದ ನಂಬಿಕೆಯಲ್ಲಿ ತಾಯಿಯು ಅತ್ಯಂತ ಪ್ರಮುಖವಾದ ಪಾತ್ರವನ್ನು ಪಡೆದುಕೊಂಡಿದ್ದಾಳೆ, ಮಾನವೀಯತೆಯೇ ಮೂರ್ತಿವೆತ್ತ ವ್ಯಕ್ತಿಯೆಂದರೆ ತಾಯಿ. ಆಕೆಯನ್ನು ದೇವರಿಗೆ ಹೋಲಿಸಲಾಗಿದೆ. ಆಕೆಯ ಬಗೆಗೆ ಬರೆಯದ ಬರೆಹಗಾರನೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಇಡೀ ಕನ್ನಡ ಸಾಹಿತ್ಯದುದ್ದಕ್ಕೂ ಆಕೆ ಅವಕಾಶ ಪಡೆದುಕೊಂಡಿದ್ದಾಳೆ. ಬದುಕಿಗಾಗಿ ಗಂಧದ ಪ್ರತಿ ಕೊರಡಿನಂತೆ ತನ್ನನ್ನ ತೇಯ್ದುಕೊಂಡು ಅರ್ಥ ತುಂಬಿದಾಕೆ. “ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ. “ತಾಯಿಯಿದ್ದರೆ ತವರು” ಮುಂತಾದ ಮಾತುಗಳಿಂದ ನಮಗೆ ತಾಯಿ ಇಡೀ ಭಾರತೀಯ ಸಂಪ್ರದಾಯದಲ್ಲೇ ಪ್ರಧಾನ ಸ್ಥಾನ ಪಡೆದುಕೊಂಡಿರುವುದು ವೇದ್ಯವಾಗುತ್ತದೆ. 'ಅಮ್ಮ' ಎನ್ನುವ ಪದವೇ ಅತ್ಯಂತ ಪ್ರೀತಿಯದ್ದು. ಈ ಪದ ಕೇಳುತ್ತಿದ್ದಂತೆ ಮೈಮನ ಪುಳಕಿತವಾಗುವಂತಹುದು. ತಾಯಿಯೆಂದರೆ ಸಂಸ್ಕೃತಿ; ಪ್ರೀತಿಯ ಕಡಲು, ಭೂಮಿತಾಯಿಗಿರುವ ಸಹನೆಯ ಶಕ್ತಿ ಆಕೆಗಿದೆ. ಆಕೆಗೆ ಎಷ್ಟು ಮಕ್ಕಳಿದ್ದರೂ ಎಲ್ಲರನ್ನು ಸಮಾನವಾಗಿ ನೋಡುತ್ತಾಳೆ. ಸಮನಾಗಿ ಪ್ರೀತಿ ಹಂಚುತ್ತಾಳೆ. ಬೆಚ್ಚಗೆ ಮಲಗಿಸಿ ಲಾಲಿ ಹಾಡುತ್ತಾಳೆ.

ಅಮ್ಮಾ.... ನಿನ್ನ ಕರುಣೆ ದೊಡ್ಡದಮ್ಮ | ನಿನ್ನಾ

ಕರುಣೆ ದೊಡ್ಡದಮ್ಮ

ಭೂ ಲೋಕದಲ್ಲಿ ಪ್ರತ್ಯಕ್ಷ ದೇವರಮ್ಮ | ನೀ

ಸತ್ಯ ಸತ್ಯವಮ್ಮ । ನಿಜ ಸತ್ಯ ಸಾಕ್ಷಿಯಮ್ಮ

ಜಗದಲಿ ನಿನ್ನ ಹೊರತು
ದೇವ್ರಿಲ್ಲ ನನಗೆ ಗೊತ್ತು
ಗುರು ನೀನು ಮೊದಲು ಬಾಳೆ ।
ಋಣಿಯಮ್ಮ ನಾನು ನಿನಗೆ ॥

ನಿನ್ನ ಕೈಯ ತುತ್ತು ಪರಮ
ಪ್ರಸಾದವಾಯ್ತು ನನ್ನಮ್ಮ ॥
ನಿನ್ನ ಕಣ್ಣು ಪಂಚ ಪರುಷ
ನೋಡಿದರೆ ನನಗೆ ಕೈಲಾಸ ॥ ಅಮ್ಮಾ

"ಅಮ್ಮಾ ನಿನ್ನ ಕರುಣೆ ದೊಡ್ಡದಮ್ಮ' ಎಂಬ ಹಾಡಿನ ಈ ಸಾಲುಗಳು ತಾಯಿಯ ತ್ಯಾಗ, ಕರುಣೆ, ಪ್ರೀತಿ ಒಟ್ಟಾರೆ ಇಡೀ ವ್ಯಕ್ತಿತ್ವದ ಚಿತ್ರಣವನ್ನೇ ಕಟ್ಟಿಕೊಡುವಂತವು. ಈ ತೆರನಾಗಿ ಅವರು ಬರೆದ ಹತ್ತಾರು ಹಾಡುಗಳು ಹೃದಯಂಗಮವಾಗಿವೆ. ಈ ಹಾಡುಗಳು ಭಾವುಕ ನೆಲೆಯಲ್ಲಿ ರಚನೆಯಾಗಿದ್ದರೂ ವಾಸ್ತವತೆಯಿಂದ ಕೂಡಿವೆ. ಸರಳ ಮತ್ತು ಸಹಜವಾಗಿ ಮೂಡಿ ಬಂದ ಈ ಹಾಡುಗಳು ಎಲ್ಲ ಕಾಲಕ್ಕೂ ಬೇಕು. ಇವರ ಹಾಡುಗಳನ್ನು ಓದುತ್ತಿದ್ದಂತೆ ತಾಯಿಯ ಕುರಿತು ಬರೆದ ಜಿ.ಎಸ್. ಶಿವರುದ್ರಪ್ಪ, ಲಂಕೇಶರ ಕವಿತೆಗಳು ನೆನಪಾಗುತ್ತವೆ. ಜೊತೆಗೆ ಡಾ. ಸರಜೂ ಕಾಟ್ಕರ್‌ರವರ 'ಅವ್ವ' ಕವನ ಸಂಕಲನ ಕೂಡ.

ತಾಳಕೇರಿ ಬಸವರಾಜರವರು ಈ ಬಗೆಯ ಹಾಡುಗಳನ್ನು ಬರೆಯಲು ಯಾವುದೇ ರೀತಿಯ ತೊಂದರೆಗೆ ಒಳಗಾಗುವುದಿಲ್ಲ. ಸಹಜವಾಗಿ ಬರೆಯುತ್ತಾರೆ. ಒಂದು ಗಿಡಕ್ಕೆ ಸಹಜವಾಗಿ ಎಲೆ, ಹೂ ಮೂಡಿದಂತೆ ಸಾಹಿತ್ಯ ಮೂಡಿದೆ. ಅವರ ಸಾಹಿತ್ಯವನ್ನು ಅವಲೋಕನ ಮಾಡುತ್ತ ಹೋದಂತೆ ಜೀವನಾನುಭವವೇ ಹರಿದು ಬಂದಂತೆ ಕಾಣುತ್ತದೆ. ಯಾವ ಬರಹಗಾರನಿಗೆ ದಟ್ಟವಾದ ಜೀವನಾನುಭವ ಗಳಿರುತ್ತವೆಯೋ ಅವನು ಜೀವಂತ ಬರೆಹವನ್ನು ನೀಡಲು ಸಾಧ್ಯ. ಆ ಅನುಭವದ ಬರೆವಣಿಗೆ ತಾಳಕೇರಿಯವರಲ್ಲಿತ್ತು. ಹೀಗಾಗಿಯೇ ನಮಗೆ ತಾಳಕೇರಿ ಬಸವರಾಜರು ಪ್ರಮುಖ ಕವಿಯಾಗಿ ಕಾಣುತ್ತಾರೆ.

ಜನ್ಮಕೊಟ್ಟ ತಾಯಿಯನ್ನು, ಜನ್ಮದಾತ ತಂದೆಯನ್ನು
ದೇವರೆಂದು ಪೂಜಿಸುವವನು ಧನ್ಯ ಧನ್ಯನು
ಜನ್ಮಭೂಮಿ ಜನ್ಮನಾಡು ಸ್ವರ್ಗಕ್ಕಿಂತ ಶ್ರೇಷ್ಠವೆಂದು
ಭಾವಿಸಿ ಬಾಳಿದವನು ಲೋಕಮಾನ್ಯನು ॥೧॥

ದೀನರನ್ನು ದಲಿತರನ್ನು ತನ್ನಂತೆ ತಿಳಕೊಂಡವನು

ಮಹಾತ್ಮನೆಂದು ಲೋಕದಲ್ಲಿ ಪೂಜೆಗೊಳ್ಳನು
ಆಪತ್ಕಾಲದಲ್ಲಿ ಅಪ್ಪಿಕೊಂಡು ಸಹಕಾರವನು
ನೀಡಿದವನು ದೇವರೆಂದು ಕರೆಸಿಕೊಳ್ಳನು ॥೧॥

ಸತ್ಪಾತ್ರ ನೋಡಿ ದಾನ ಧರ್ಮವನ್ನು ಮಾಡುವವನು ।
ಪುಣ್ಯವಂತನಾಗಿ ಸುಖ ಪಡೆದು ಬಾಳ್ವನು ।
ನಿತ್ಯ ಪೂಜೆ ಶಿವನ ಧ್ಯಾನ, ತಪ್ಪದಂತೆ ಮಾಡುವವನು ।
ಶರಣನಾಗಿ ಸಂಸಾರದಲಿ ಶಾಂತಿ ಪಡೆವನು ॥ ೨ ॥

ತಾಳಕೇರಿ ಬಸವರಾಜರವರು 'ಜನ್ಮಕೊಟ್ಟ ತಾಯಿಯನ್ನು' ಎನ್ನುವ ಹಾಡಿನಲ್ಲಿ ಒಳ್ಳೆಯ ವ್ಯಕ್ತಿತ್ವವನ್ನು ಅಳವಡಿಸಿಕೊಂಡು ಸಾಗುವ ವ್ಯಕ್ತಿಯ ಬಗೆಗೆ; ಒಳ್ಳೆಯ ತನದಿಂದ ಅವನೇರುವ ಎತ್ತರದ ಬಗೆಗೆ ಬರೆದಿದ್ದಾರೆ. ಯಾವುದೇ ವಿಷಯದ ಕುರಿತು ಬರೆದರೂ ಅಲ್ಲಿ ಒಂದು ಸಂದೇಶ, ಕಳಕಳಿ, ಚಿಂತನೆ, ಜೀವನಾನುಭವದ ಅಭಿವ್ಯಕ್ತಿ ಇರುವುದನ್ನು ಕಾಣುತ್ತೇವೆ.

ಹೆಣ್ಣು ಜೀವಕ್ಕೆ 'ತವರಿನ' ಪ್ರೀತಿ ದೊಡ್ಡದು. ಆಕೆ ಗಂಡನ ಮನೆಗೆ ಬಂದು ಮುದುಕಿಯಾದರೂ ತವರು ಕೈ ಮಾಡಿ ಕರೆಯುತ್ತಿರುತ್ತದೆ. ತವರಿನಲ್ಲಿ ತಾಯಿ ಇನ್ನೂ ಇದ್ದರಂತೂ ಸೆಳೆತ ಇನ್ನಷ್ಟು ಜಾಸ್ತಿ. ಹೆಣ್ಣಿಗೆ ಕಾಡುವ ತವರ ಪ್ರೀತಿಯ ಒಳತೋಟಿಯನ್ನು; ತುಮುಲವನ್ನು ಕಣ್ಣಿಗೆ ಕಟ್ಟುವಂತೆ ರೂಪಕಗಳನ್ನು ಬಳಸಿಕೊಂಡು ಬರೆದ 'ಹೋಗಿ ಬತ್ತೀನಿ ತವರಿಗೆ' ಹಾಡು ಸಮರ್ಥವಾಗಿದೆ.

ಹೋಗಿ ಬತ್ತೀನಿ ನಾನು ತವರೂರಿಗೆ
ಒಪ್ಪಿಗೆಯ ಕೊಡುರಾಯ ನನಮಾತಿಗೆ

ಹಡೆದಮ್ಮ ಹೇಳ್ಕಳಿಸಿ ಬಾಳ್ದಿವಸವಾಯ್ತು
ಹಗಲೆಲ್ಲ ನೆನೆ-ನೆನಿಸಿ ಬಲು ಬೇಸರಾಯ್ತು
ಮನೆಗೆಲಸ ಮಾಡ್ವಾಗ ಅಮ್ಮನದೇ ನೆನಪು
ಮನದಾಗ ಕಣ್ಣಾಗ ಕಾಣುವುದಾ ರೂಪು !

ಅಪ್ಪನಿಗೆ ಮೈಯಲ್ಲಿ ಆರಾಮವಿಲ್ಲಂತೆ
ನನ್ನ ಹೆಸರು ಬಾಯೊಳಗೆ ಹಗಲೆಲ್ಲವಂತೆ
ಅಣ್ಣ ಬರಬೇಕಂದ್ರ ಕೈ ತುಂಬ ಕೆಲ್ಸಂತೆ
ತಮ್ಮನಿಗೆ ಶಾಲೆಯ ಪರೀಕ್ಷೆ ಇಹುದಂತೆ

ಹೆಣ್ಣಿಗಿರುವ ತವರಿನಾಶ ನಿಮಗೇನು ಗೊತ್ತು
ಕಲ್ಮ ನದ ಗಂಡಸರು ಸುಳ್ಳಲ್ಲೀ ಮಾತು
ಆಸರಕೆ ಬೇಸರಕೆ ತವರೇ ಸಂಪತ್ತು
ದುಡಿದುಡಿದು ಆಗಿಹೆ ನಾಗಾಣದಾ ಎತ್ತು.

ಮುದುಕಿಯಾದರೂ ನಾನು ತವರೂರ ಮರೆಯನು
ಬೇಸರಕಾಸರ ಹೆಣ್ಗೆ "ತಾಯ್ತನೆ" ಕಾಮಧೇನು
ಮುದುಕಾದ್ರೂ ಮುಂದೆ ನೀನು ನನ್ನೊಡನೆ ಬಾರಾಯಾ।
ಇದಕಾರ ಭಯವಿಲ್ಲ ಕೇಳೆನ್ನ ಪತಿರಾಯ

ತನ್ನ ಪತಿರಾಯನಿಗೆ ತವರಿಗೆ ಕಳಿಸಿಕೊಡೆಂದು ಪತ್ನಿ ಕೇಳುವ ರೀತಿ ಇಲ್ಲಿದೆ. ತಂದೆ ತಾಯಿ ಒಂದೇ ಸಮನೆ ಮಗಳನ್ನು ನೆನಪಿಸಿಕೊಳ್ಳುವ ಬಗೆ, ತನಗೂ ಬಿಡದೆ ಕಾಡುವ ತವರಿನ ಬಯಕೆ ಇಲ್ಲಿ ಎಳೆಎಳೆಯಾಗಿ ಹಾಡಾಗಿ ಹೊಮ್ಮಿದೆ. ಅಂತಃಕರಣ, ಪ್ರೀತಿ, ಹೆಣ್ಣಿನ ಬಯಕೆಗೆ ಸಂಬಂಧಿಸಿದ ಹಾಡುಗಳನ್ನು ಬರೆಯುವಾಗ ತಾಳಕೇರಿ ಬಸವರಾಜರವರ ಲೇಖನಿ ಗರಿ ಬಿಚ್ಚಿ ಹಾರಾಡುವ ಹಕ್ಕಿಯಾದಂತಿದೆ.

ತಾಳಕೇರಿ ಬಸವರಾಜರವರು ಮಠದ ಸುಸಂಸ್ಕೃತ ಪರಿಸರದಲ್ಲಿ ಕೆಲ ವರ್ಷಗಳ ಕಾಲ ಬೆಳೆದವರು. ಕಲೆ, ಸಂಗೀತವನ್ನು ಕರಗತ ಮಾಡಿಕೊಳ್ಳುವುದರ ಜೊತೆಗೆ ಒಳ್ಳೆಯ ಕೃತಿಗಳನ್ನು ಓದುವುದನ್ನು ರೂಢಿಸಿಕೊಂಡಿದ್ದರು. ಶರಣ ಸಾಹಿತ್ಯಃ ತತ್ವಪದ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದವರು. ಸಹಜವಾಗಿಯೇ ಅವರಿಗೆ ಬಸವಣ್ಣ ಮತ್ತು ಅವರ ಸಮಕಾಲೀನ ಶರಣರ ವ್ಯಕ್ತಿತ್ವ, ಚಿಂತನೆಗಳು ಪ್ರಭಾವ ಬೀರಿದ್ದರಿಂದ ಬಸವರಾಜ ಹೂಗಾರರು ಬಸವಣ್ಣನವರನ್ನು ಕುರಿತು ತಮ್ಮ ಹಾಡುಗಳಲ್ಲಿ ಅವರ ವ್ಯಕ್ತಿತ್ವವನ್ನು ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಬಸವರಾಜ ಹೂಗಾರರು ಕಲಾವಿದರು ಕೂಡ ಆಗಿರುವುದರಿಂದ ಶರಣರಿಗೆ ಸಂಬಂಧಿಸಿದ ನಾಟಕಗಳಲ್ಲಿ ಪಾತ್ರವನ್ನು ಮಾಡುತ್ತಿದ್ದರು. ಇಂತಹ ನಾಟಕಗಳ ಮೂಲಕ ಶರಣರ ವಿಚಾರಗಳನ್ನು ಪ್ರೇಕ್ಷಕರಿಗೆ ತಲುಪಿಸುವ ಕೆಲಸವನ್ನು ಮಾಡಿದವರು. ಶರಣರ ಪರಂಪರೆಯಲ್ಲಿ ಬಸವರಾಜರವರಿಗೆ ಬಸವಣ್ಣ ಬಹಳಷ್ಟು ಕಾಡಿರುವುದರಿಂದ ಅವರನ್ನು ಕುರಿತು ಬರೆಯಲು ಸಾಧ್ಯವಾಗಿದೆ. ಸರಳ, ಸಹಜವಾಗಿರುವ ಬಸವಣ್ಣನವರ ವಚನಗಳು ಅವು ತುಂಬಿಕೊಂಡಿರುವ ಅಪಾರವಾದ ಜೀವನಾನುಭವ, ಮೌಲ್ಯಗಳು ನಮಗೆ ಎಂದೆಂದಿಗೂ ಪ್ರಸ್ತುತ ಎನಿಸುತ್ತಿರುವುದರಿಂದ ಇದನ್ನು ಮನಗಂಡು ತಾಳಕೇರಿಯವರು ಹಾಡುಗಳನ್ನು ಬರೆದಿದ್ದಾರೆ. ತಾಳಕೇರಿ ಬಸವರಾಜರವರ ಕುಟುಂಬವನ್ನು ಈ ಹೊತ್ತು ನೋಡಿದಾಗ ಶರಣರು - ಮತ್ತವರ ಸಾಹಿತ್ಯದ ಪ್ರಭಾವ ಅವರ ಮೇಲಾಗಿರುವುದನ್ನು ಕಾಣಬಹುದಾಗಿದೆ. ಹೆಚ್ಚಿನ ಆಸೆ ಆಕಾಂಕ್ಷೆಗಳಿಟ್ಟುಕೊಳ್ಳದೆ ಕಾಯಕದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡು ಸಾಗಿರುವ ಇವರು ತಂದೆ ಇರಿಸಿದ ಹೆಜ್ಜೆಗಳಲ್ಲಿ ಹೆಜ್ಜೆ ಹಾಕುತ್ತಿದ್ದಾರೆ.

ತಾಳಕೇರಿ ಬಸವರಾಜರು ಬಸವಣ್ಣನವರ ಕುರಿತು ಅನೇಕ ಹಾಡುಗಳನ್ನು ಬರೆದಿದ್ದಾರೆ. ಆ ಮೂಲಕ ಅವರ ವ್ಯಕ್ತಿತ್ವವನ್ನು; ಶರಣ ಚಳುವಳಿಯನ್ನು; ಜನಪರ ನಿಲುವನ್ನು, ಸಮಾನತೆಯ ಸಮಾಜವನ್ನು ರೂಪಿಸಲು ಯತ್ನಿಸಿದ ಬಗೆಯನ್ನು; ಜಾತ್ಯಾತೀತ ಮನೋಭಾವವನ್ನು ಹಿಡಿದಿಟ್ಟಿದ್ದಾರೆ. ಇಲ್ಲಿ ಉದಾಹರಣೆಗೆ ಎತ್ತಿಕೊಂಡ ಹಾಡುಗಳು ಅವರ 'ಗೀತಭಾರತಿ' ಕೃತಿಯಲ್ಲಿವೆ.

ಬಸವಣ್ಣ ಹುಟ್ಟಿದನು, ವಿಷಮತೆಯ ಮೆಟ್ಟಿದನು
ಹೊಸದೊಂದು ಧರ್ಮವನ್ನು ಕಟ್ಟಿದನು ‖ ಜಗದಲ್ಲಿ ‖
ಹಸನಾದ ತತ್ವವನು ಬೆಳಸಿದನು
ಬಸವನೆಂಬುವ ದಿವ್ಯ, ರಸದುಂಬಿದಾ ತತ್ವ ।
ವಸುಧಿಯೊಳು ಸಕಲ ಜೀವಾತ್ಮರಿಗೆ । ಲೇಸನ್ನೂ ‖
ಎಸೆದೀವುದೈ ಬಾಳಿಗಮೃತ ಸತ್ವ.

ನುಡಿಯ ವೇದಗಳಿಂದ, ನಡೆಯದಾರಿಯ ತೋರಿ ।
ನಡೆನುಡಿಯ ರೀತಿಯ ಕಲಿಸಿದನು । ಬಸವಣ್ಣ ।
ನಡೆದಿಹುದೆ ಸಾಕ್ಷಿ ನಮಗಿಂದು ‖
ಹೊಲಿಯ ಮೊದಿಗರೆಂಬ, ಬಲಿಯ ಕಿತ್ತೊಗೆದಿಹನು ।
ಬಲವ ಉರಿಸಿದ ಗಂಡು, ಹೆಣ್ಣುಗಳಿಗೆ । ಲೋಕದಲಿ ।
ನೆಲೆಗೊಳಿಸಿ ಜನಪದರೆ, ಸ್ಥಾನ ಮಾನವನು ‖

ಎಂದು ಬಸವಣ್ಣನವರ ವ್ಯಕ್ತಿತ್ವದ ಕುರಿತು ಹಾಡಿದರೆ, ಇನ್ನೊಂದು ಹಾಡಿನಲ್ಲಿ 'ಉದಯವಾಗು ಬಸವದೊರೆ' ಎಂದು ಬಿನ್ನಹಿಸಿಕೊಳ್ಳುತ್ತಾರೆ.

ಗಾಢ ನಿದ್ರೆಗೊಂಡ ಜಗವ, ಜಾಗೃತಗೊಳಿಸಿ ಕಣ್ಣು ತೆರೆ
ಬಿರುಗಾಳಿಗೆ ಕಿವುಡುಗೊಂಡ, ಕಿವಿಗಳನ್ನು ಪೂರ್ಣ ತೆರೆ
ಹೃದಯ ಕದವ ತೊರೆದು ನಿನ್ನ, ತತ್ವದುಸಿರು ತುಂಬುತಿರೆ
ಸಕಲ ಜೀವ ಲೇಸಗೊಂಡು ಬದುಕಲೆಂಬ ಭಾಷೆಯಿರೆ ‖

ಎತ್ತ ನೋಡಿದತ್ತ ಹಿಂಸೆ, ಸ್ವಾರ್ಥ - ಮೋಸ ತುಂಬಿದೆ
ಜಾತಿ ಭೂತ ಸ್ಫೂರ್ತಿಗೊಂಡು, ಭೀಕರದಿ ಕುಣಿಯುತಿದೆ
ಪ್ರೀತಿ ಜ್ಯೋತಿ ನಂದಿ ಜಗದಿ, ಅಂಧಕಾರ ಮುಸುಕಿದ ।
ಧರ್ಮ ಪ್ರೀತಿ ದೂರವಾಗಿ, ಪಾಪಕರ್ಮ ಬೆಳೆದಿದೆ ‖

ಮೌಢ್ಯಗಳ ಕುರಿತು, ಅಜ್ಞಾನದ ಅಂಧಕಾರ, ಜಾತಿಯತೆ, ಅರಾಜಕತೆಯಿಂದ ಕೂಡಿದ ಈ ಸಮಾಜವನ್ನು ಸರಿಪಡಿಸಲು ಬಸವಣ್ಣನಂತಹ ಮಹಾನುಭಾವರ ಅಗತ್ಯ ತುಂಬಾ ಇದೆ. ಹೀಗಾಗಿ ಬಸವಣ್ಣನವರಲ್ಲಿ ಕವಿ ನಮ್ರ ವಿನಂತಿ ಸಲ್ಲಿಸಿದ್ದಾರೆ. ತಾಳಕೇರಿಯವರು 'ಜನನ-ಮರಣರಹಿತ ಬಸವಣ್ಣ' ಎನ್ನುವ ಹಾಡಿನಲ್ಲಿ

ಜನನ - ಮರಣ ರಹಿತ ನೀನು ।
ಶಿವನ ಶರಣ ಬಸವಣ್ಣ ॥
ತನು - ಮನ - ಧನ ಪಾವನನು ।
ಕಲ್ಯಾಣದ ಬಸವಣ್ಣ
ಶಿವಧರ್ಮದ ಸಿರಿಯು ನೀನು, ಪರಮತತ್ವ ಚೇತನ
ಸಮತಾವಾದಕೆ ನೀನು, ಜನ್ಮವಿತ್ತ ಕಾರಣ ॥
ಜಾತಿಭೇದವಳಿದು ಜಗದ, ಪ್ರೀತಿಗಳಿಸಿ ನೂತನ
"ಮಹಾತ್ಮನಾದೆ" ಸರ್ವಜನದ ಹಿತಕೆ ಚಿರ-ಚಿರಂತನ ।
ಕುಲದ ಮದವ ಮುರಿದೆ ನೀನು,
ಗುಣಕೆ ಕೊಟ್ಟೆ ಮಾನವನು ।
ಶರಣ ಬಳಗ ಕಟ್ಟಿ ನೀನು,
ಭಕ್ತಿ ರಾಜ್ಯ ಬೆಳೆಸಿದವನು ।
ಕಾಯಕ ಶುದ್ಧ ಗೈದವನು, ನಿತ್ಯ ದಾಸೋಹಿಯಾದವನು
ಮಾಯಾಭ್ರಮೆಯ ಕಳೆದ ನೀನು,
ಶರಣ ಶ್ರೇಷ್ಠನಾದವನು ॥

ಹೀಗೆ ಬಸವಣ್ಣನವರು ಈ ಸಮಾಜಕ್ಕೆ ಸಲ್ಲಿಸಿದ ನಿಸ್ವಾರ್ಥ ಸೇವೆ: ಕಾಯಕಪ್ರಜ್ಞೆ ಸಮಾನತೆಯ ವಾದವನ್ನು ಎತ್ತಿಹಿಡಿದ ಬಗೆಯನ್ನು ಎಳೆಎಳೆಯಾಗಿ ಬಿಚ್ಚಿ ತೋರಿಸಿದ್ದಾರೆ. ಬಸವಣ್ಣನವರ ವಿಚಾರಗಳನ್ನು ಪಾಲಿಸುವ; ಆಚರಣೆಗೆ ತರುವ ಕೆಲಸ ಇಂದು ಆಗುತ್ತಿಲ್ಲ. ಇದು ನಮ್ಮ ಸಮಾಜದ ದುರ್ದೈವವೇ ಸರಿ. ಬಸವಣನವರಾಗಲಿ; ಅವರ ಸಮಕಾಲೀನ ವಚನಕಾರರಾಗಲೀ ಅವರು ಹೇಳದೇ ಇರುವ ಸಂಗತಿಗಳೇ ಇಲ್ಲ. ಪ್ರತಿಯೊಂದು ವಿಷಯದ ಬಗೆಗೂ ವಸ್ತುನಿಷ್ಠವಾಗಿ ಮಾತನಾಡಿದ್ದಾರೆ.

ತಾಳಕೇರಿ ಬಸವರಾಜ ಹೂಗಾರವರು ಬಸವಣ್ಣನವರಿಗೆ ಸಂಬಂಧಿಸಿದ "ಕಲ್ಯಾಣದ ಬಸವಣ್ಣ' ಎಂಬ ಶೀರ್ಷಿಕೆಯಲ್ಲಿ ಲಾವಣಿಯೊಂದನ್ನು ಬರೆದು ಪ್ರಕಟಿಸಿದ್ದಾರೆ. ಹದಿನಾರು ಪುಟಗಳನ್ನು ಹೊಂದಿರುವ ಚಿಕ್ಕ ಪುಸ್ತಕ ಇದಾಗಿದೆ. ಜೇಬಿನಲ್ಲಿ ಹಿಡಿಸಬಹುದಾದ ಕೃತಿಯಂತಿದೆ. ಈ ಚಿಕ್ಕ ಪುಸ್ತಕಕ್ಕೆ ಮುನ್ನುಡಿ ಬರೆದಿರುವ ನವಿಲುಗುಂದದ ಗವಿಮಠ ಶ್ರೀಗಳು "ಹನ್ನೆರಡನೆಯ ಶತಮಾನದಲ್ಲಿ ಶಾಂತಿ ಸತ್ವಯುತ ಧರ್ಮ ಕ್ರಾಂತಿಯನ್ನು ಮಾಡಿದ ಮಹಾತ್ಮ

ಬಸವೇಶ್ವರರ ಮುಕ್ತಿ ಮಾರ್ಗದರ್ಶನವು ಕೇವಲ ಕರ್ನಾಟಕಕ್ಕಷ್ಟೇ ಸೀಮಿತವಾಗಿರದೆ ಮಾನವ ಕುಲಕ್ಕೆ ಅನ್ವಯಿಸುವಂತಿದೆ! ಸಕಲ ಜೀವಾವಳಿಗೆ ಲೇಸನೇ ಬಯಸಿ ತಮ್ಮ ಆತ್ಮಾನುಭವವನ್ನು ವಚನ ವಾಗ್ಮಯ ರೂಪದಿಂದ ಜನತೆಯ ಮನಂಬುಗೆವಂತೆ ತಿಳಿಸಿದ್ದಾರೆ. ಈ ಮೂಲಕ ಕನ್ನಡ ನುಡಿಯು ದೇವವಾಣಿಯ ಮಟ್ಟಕ್ಕೇರಿದೆಯೆಂದರೆ ಅತ್ಯುಕ್ತಿಯಾಗಲಾರದು. ಬಸವಣ್ಣನವರು ಸಂಸಾರದಲ್ಲಿದ್ದು ಸದ್ಗತಿಯನ್ನು ಸಾಧಿಸುವ ಹವನವನ್ನು ತೋರಿಸಿದರು. ಮುಕ್ತಿಗೆ ಸಂಸಾರವು ಬಾಧಕವಾಗಿರದೆ ಅದರಲ್ಲಿರುವ ಅಹಂಭಾವನೆಯು ಅಡ್ಡ ಬರುವದೆಂಬುದನ್ನು ವಿವರಿಸಿದರು.. . . .ಬಸವಣ್ಣನವರ ಪುಣ್ಯ ಜೀವನದ ವೈಶಿಷ್ಟ್ಯವನ್ನು ಜನತೆಗೆ ಎತ್ತಿ ತೋರಿಸುವ ಉದ್ದೇಶದಿಂದ ಈ ಕೃತಿಯನ್ನು ತಾಳಕೇರಿ ಬಸವರಾಜರು ಬರೆದಿದ್ದಾರೆ ಎಂದು ಹೇಳಿದ್ದಾರೆ.

ಇಪ್ಪತ್ತೆರಡು ನುಡಿಗಳನ್ನು ಒಳಗೊಂಡಿರುವ ಈ ಚಿಕ್ಕ ಪುಸ್ತಕದ ಬರೆಹದ ಹಿಂದಿರುವ ಪ್ರೇರಣೆಯನ್ನು ಕುರಿತಂತೆ ತಾಳಕೇರಿ ಬಸವರಾಜರವರು “ಬಾಳಿನಲ್ಲಿ ಅನಂತ ಕಷ್ಟ ಪರಂಪರೆಗಳು ಬರುತ್ತವೆ ! ಅವುಗಳಲ್ಲಿ ಕೆಲವು ಸಂಚಿತ ಕರ್ಮದ ಫಲಗಳೆಂದು, ಇನ್ನು ಕೆಲವು ಸತ್ವ ಪರೀಕ್ಷೆಯ ಒರೆಗಲ್ಲೆಂದು ಭಾವಿಸಿ ಅವುಗಳನ್ನು ಪ್ರಶಾಂತ ಮನಸ್ಸಿನಿಂದ ಸ್ವಾಗತಿಸಿ ಎದುರಿಸಬೇಕು ! ಅವುಗಳನ್ನು ಮಹಾತ್ಮರ - ಶರಣರ-ಯೋಗಿಗಳ - ಪುಣ್ಯ ಜೀವನದ ಸ್ಮರಣೆಯಿಂದ ಕಳೆದುಕೊಳ್ಳಬೇಕು. ಅದಕ್ಕಾಗಿ ಜಗಜ್ಯೋತಿ ಶ್ರೀ ಬಸವೇಶ್ವರರ ದಿವ್ಯ ಜೀವನದ ಸ್ಮರಣೆಯೂ ಒಂದು ಸಾಧನವೆಂದು, ಜನಸಾಮಾನ್ಯರೂ ಕೂಡಾ ಸಹಜ ತಿಳಿದು ಬಾಳಿ ಬದುಕಲೆಂದು “ಶ್ರೀ ಬಸವ ಸಮಿತಿ ಬೆಂಗಳೂರು' ಇವರ ಆಜ್ಞೆಯಂತೆ ಬಹು ಭಕ್ತಿಯಿಂದ ಸರಳ ರಾಗ - ತಾಳಗಳ ಸಮ್ಮಿಶ್ರಣದಿಂದ ಈ ಪದ್ಯವನ್ನು ಬರೆದಿದ್ದೇನೆ. ಇದು ಸಮಸ್ತ ಜನರ ಹೃದಯವನ್ನು ಮುಟ್ಟಿ ಮುಕ್ತಿ ಪಡೆದರೆ ಅದೇ ನನ್ನ ಜನ್ಮಸಾರ್ಥಕದ ಸಾಧನ ಎಂದಿದ್ದಾರೆ.

ಕಲ್ಯಾಣದ ಬಸವಣ್ಣನ ಕಥೆಯನ್ನು ಹೇಳುವೆ ಕೇಳಿರಿ ಸರ್ವಜನ
ಸಲ್ಲೀಲೆಯಲಿ ಲೋಕದ ಕಲ್ಯಾಣಕೆ ಅವತರಿಸಿದ ಶಿವಶರಣ.

ಮಹತ್ವಾಕಾಂಕ್ಷೆಯ ಬಿಜ್ಜಳರಾಯನು ಚಾಲುಕ್ಯರ ಸಾಮ್ರಾಜ್ಯಕ್ಕೆ ।
ಮಹಾರಾಜನು ತಾನಾಗಿ ಬಂದನು
ಸುಂದರ ಕಲ್ಯಾಣ ಪಟ್ಟಣಕ್ಕೆ ॥
ಪ್ರಸ್ತುತ ಸಾಮ್ರಾಜ್ಯಕ್ಕೆ ಪ್ರಧಾನ
ಭಂಡಾರಿಯಾದನು ಬಸವಣ್ಣ ।
ಕ್ರಿಸ್ತಶಕದ ಹನ್ನೊಂದನೂರು
ಐವತ್ತು ನಾಲ್ಕರಲಿ ತಾಜಾಣ ॥ ೫ ॥

ಕಲ್ಯಾಣವುತಾ ಪ್ರಣತಿಯಾಯ್ತು
ಭಕ್ತಿಶೈಲವಾದನು ಬಸವಣ್ಣ ।

ಸಲ್ಲೀಲೆಯಲಿ ಪೂರ್ಣಜ್ಞಾನದ

ಬತ್ತಿಯಾದ "ಚನಬಸವಣ್ಣ"

ಅಲ್ಲಮಪ್ರಭುಗಳು ಜ್ಯೋತಿಯಾದರು

ಆರು ಸ್ಥಳಪ್ರಭೆ ಬೆಳಗಿತ್ತು ।

ಕಲ್ಯಾಣ ವಿಪ್ಲವಗೊಂಡಿತು ಪ್ರಣತೆಯು

ಒಡೆಯಿತು ಜ್ಯೋತಿಯು ಬಯಲಾಯ್ತು ॥ ೧೨॥

ನ್ಯಾಯ ನಿಷ್ಠುರರು - ವಿನಯಶೀಲರು

ಭಕ್ತಿ ಭಂಡಾರಿಯಾದವರು

ಧ್ಯೇಯವಾದಿ - ಸಾಮಾಜಿಕ - ಆರ್ಥಿಕ

ಧಾರ್ಮಿಕ ನೀತಿಯ ನೀಡಿದರು ।

ವೃತ್ತಿ ಸ್ವಾತಂತ್ರ್ಯ - ವ್ಯಕ್ತಿ ಸ್ವಾತಂತ್ರ್ಯ

ಸಂಘ ಸ್ವಾತಂತ್ರ್ಯ ಕೊಟ್ಟವರು ।

ಸೂಕ್ತ ಮಾತು - ಸಮಬಾಳು -

ಸಮಪಾಲು - ಸರ್ವೋದಯದ ಸಾಧಕರು।೧೪॥

ಕೋಲುವನೆ ಮಾದಿಗನವ - ಹೊಲಸು ತಿಂಬುವರೆ

ಹೊಲೆಮನದವರು

ಇಲ್ಲಿ ಸಲ್ಲುವವರಲ್ಲಿ ಸಲ್ಲುವರು

ಎಂಬ ತತ್ವನು ತಿಳಿಸಿದರು ।

ಕಾಯಕದಿಂದಲೆ ಕುಲಗಳಕಟ್ಟಿದ

ಕಾರಣ ಪುರುಷರಾಗಿಹರು

ಕಾಯದ ಮೇಲೆ ಕುಲವನು

ಎಣಿಸದೆ ಗುಣಕಾದರ್ಶವ ಕೊಟ್ಟಿಹರು ॥ ೧೬ ॥

ಹೀಗೆ ಲಾವಣಿ ಸಾಗುತ್ತದೆ. ನಾನು ಮುಖ್ಯವಾಗಿರುವ ಲಾವಣಿಯ ಸಾಲುಗಳನ್ನು ಇಲ್ಲಿ ಉದಾಹರಣೆಗಾಗಿ ಕೊಟ್ಟಿರುವೆ. ಮೂಲತಃ ಜಾನಪದ ಸಾಹಿತ್ಯವನ್ನು ಕೇಳಿದ: ಅಂತಹ ಪರಿಸರದಲ್ಲಿ ಬೆಳೆದ ಕವಿ ತಾಳಕೇರಿ ಬಸವರಾಜರವರಾಗಿದ್ದರಿಂದ ಜಾನಪದ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿ ಲಾವಣಿಯನ್ನು ಕಟ್ಟಿದ್ದಾರೆ. ಬಸವಣ್ಣನವರ ಜೀವನ ವೃತ್ತಾಂತ, ಬೆಳೆದ ಪರಿಸರ, ಚಳುವಳಿ, ವ್ಯಕ್ತಿತ್ವ, ಸಾಧನೆ, ಜನಪರ ನಿಲುವು, ಜಾತ್ಯಾತೀತ ದೃಷ್ಟಿಕೋನ ಎಲ್ಲವನ್ನು ಇಲ್ಲಿ ಮಾರ್ಮಿಕವಾಗಿ ಹಿಡಿದಿಟ್ಟಿದ್ದಾರೆ. ಈ ಲಾವಣಿಯನ್ನು ಕೊಪ್ಪಳದ

ಸುತ್ತಮುತ್ತಲೂ ಈಗಲೂ ಹಾಡುವ ಕಲಾವಿದರಿದ್ದಾರೆ. ಲಾವಣಿ ಹಾಡು ಕೇಳಲು ತುಂಬಾ ಪರಿಣಾಮಕಾರಿಯಾಗಿರುತ್ತದೆ.

“ಕಲ್ಯಾಣದ ಬಸವಣ್ಣ' ನೋಡಲು ಚಿಕ್ಕ ಕೃತಿಯೆನಿಸಿದರೂ ಒಂದು ಸೊಗಸಾದ ಕಥನವೊಂದನ್ನು ಹೊಂದಿದೆ. ಸೊಲಬಯ್ಯ ಪೂಜಾರರು ಈ ಕೃತಿಯ ಹಿನ್ನುಡಿಯಲ್ಲಿ ಹೇಳಿದಂತೆ “ತಾಳಕೇರಿ ಬಸವರಾಜರು ಕಲ್ಯಾಣ ಗೀತವೆಂಬ ಕಾವ್ಯದಿಂದ ಬಸವಣ್ಣನವರನ್ನು ಅನನ್ಯವಾಗಿ ಪ್ರಾರ್ಥಿಸಿದ್ದಾರೆ. ಅದರಂತೆ “ಜನಸಾಮಾನ್ಯರಿಗೂ ತಿಳಿಯಲೆಂದು ಅವರ ಬಾಳಿನ ಭವ್ಯ ಕಥೆಯನ್ನು 'ಲಾವಣಿ' ರೂಪದಿಂದ ಬರೆದು ಉಪಕಾರ ಮಾಡಿದ್ದಾರೆ” ಎನ್ನುವ ಮಾತುಗಳು ನಿಜವೆನಿಸುತ್ತವೆ.

ತಾಳಕೇರಿ ಬಸವರಾಜರವರು ಸ್ವತಃ ಕಲಾವಿದರಾಗಿದ್ದರಿಂದ ಈ 'ಲಾವಣಿ' ಯನ್ನು ಕೂಡ ಸೊಗಸಾಗಿ ಹಾಡುತ್ತಿದ್ದರು. ಬಸವಣ್ಣನವರ ಜಯಂತಿಯ ಸಂದರ್ಭದಲ್ಲಿ ಧಾರವಾಡ, ಗದಗ, ಬೆಂಗಳೂರು, ಹಾವೇರಿ, ಗುಲ್ಬರ್ಗಾ ಮುಂತಾದ ಊರುಗಳಲ್ಲಿ ಹಾಡಿದ್ದಾರೆ. ಅಲ್ಲದೇ ಆಕಾಶವಾಣಿ ಧಾರವಾಡ, ಗುಲ್ಬರ್ಗಾ ಕೇಂದ್ರಗಳು ಕೂಡ ಈ ಲಾವಣಿಯನ್ನು ಪ್ರಸಾರ ಮಾಡಿವೆ. ಬಸವಣ್ಣನವರ ವಿಚಾರಗಳನ್ನು ಜನರಿಗೆ ತಲುಪಿಸುವ ಒಂದು ಅಳಿಲು ಸೇವೆ ಮಾಡುತ್ತಿದ್ದೇನೆ ಎಂದು ಆಗಾಗ ಅವರೇ ಹೇಳಿಕೊಂಡಿದ್ದು ಕೂಡ ತಿಳಿದು ಬರುತ್ತದೆ. ಬಸವಣ್ಣನವರ ಬಗೆಗೆ ವಿಶೇಷ ಪ್ರೀತಿ, ಮತ್ತು ಭಕ್ತಿ ಇದ್ದುದ್ದರಿಂದ ಅನೇಕ ಹಾಡುಗಳನ್ನು ಬರೆಯಲು ಕವಿಗೆ ಸಾಧ್ಯವಾಗಿದೆ. 'ಬಸವಗೀತೆ' ಎಂಬ ಹಾಡಿನ ಸಂಕಲನವನ್ನು ಪ್ರಕಟಿಸಿರುವುದನ್ನು ಕೂಡ ಕಾಣಬಹುದಾಗಿದೆ. ಒಂದು ರೀತಿಯಲ್ಲಿ ಶರಣರ ಅನುಭಾವ ಸಾಹಿತ್ಯದ ಪ್ರೇರಣೆ - ಪ್ರಭಾವಗಳು ಕವಿಯ ಮೇಲೆ ಗಾಢವಾಗಿ ಆಗಿರುವುದು ಗಮನಕ್ಕೆ ಬಾರದಿರದು. ಲಾವಣಿಯ ಈ ಕೃತಿ ಬಸವಣ್ಣನವರ ಸಮಗ್ರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವಂತಿದೆ. ಅಪ್ಯಾಯಮಾನವಾಗಿದೆ.

'ಬಸವಗೀತೆ'ಯು ತಾಳಕೇರಿ ಬಸವರಾಜರವರ ಮತ್ತೊಂದು ಪ್ರಮುಖ ಹಾಡಿನ ಸಂಕಲನವಾಗಿದೆ. ಇದರಲ್ಲಿ ಒಂದುನೂರು ಹಾಡುಗಳಿವೆ. ಪ್ರತಿಯೊಂದು ಹಾಡಿಗೂ ರಾಗ - ತಾಳಗಳನ್ನು ಕವಿಗಳೇ ನೀಡಿದ್ದರಿಂದ ಹಾಡುವ ಕಲಾವಿದರಿಗೆ ಅನುಕೂಲವಾಗುವಂತಿದೆ. ಬಸವಣ್ಣ, ಕನ್ನಡ ನಾಡು - ನುಡಿ, ರಾಷ್ಟ್ರ ಪ್ರೇಮ, ಇತ್ತೀಚಿನ ಶರಣರ ಜೀವನ, ನೆಚ್ಚಿನ ರಾಷ್ಟ್ರ ನಾಯಕರ ಕುರಿತು ಬರೆದ ಹಾಡುಗಳು ಇಲ್ಲಿವೆ. ವೈವಿಧ್ಯಮಯವಾದ ರಚನೆಗಳು ಇವಾಗಿವೆ. ಇಲ್ಲಿನ ಹಾಡುಗಳು ಒತ್ತಾಯಪೂರ್ವಕವಾಗಿ ಬರೆದ ಹಾಡುಗಳಾಗಿರದೆ ತಾವೇ ಕವಿಯಿಂದ ಬರೆಯಿಸಿಕೊಂಡ ಹಾಡುಗಳಂತಿವೆ. ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಬಹುಪಾಲು ಸಾಹಿತ್ಯ ಶರಣರ ಕುರಿತು ಬರೆದುದಾಗಿದೆ. ಅದರಲ್ಲೂ ವಿಶೇಷವಾಗಿ ಭಕ್ತಿ ಭಂಡಾರಿ ಬಸವಣ್ಣನವರು ಅನೇಕ ಬರೆಹಗಾರರನ್ನು ಬಗೆಬಗೆಯಾಗಿ ಕಾಡಿದ್ದಾರೆ.

ಈ ಕೃತಿಗೆ ಮುನ್ನುಡಿ ಬರೆದ ಖ್ಯಾತ ವಿಮರ್ಶಕರಾದ ಡಾ. ವಿ. ಶಿವಾನಂದರವರು “ತಾಳಕೇರಿಯವರ ಮೇಲೆ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪನವರಂಥ ದಿವ್ಯ ಅನುಭಾವಿಗಳ ಪ್ರಭಾವವಿದೆ. ಕುವೆಂಪು,

ಕೆ.ಎಸ್. ನರಸಿಂಹಸ್ವಾಮಿ, ಡಿ.ಎಸ್. ಕರ್ಕಿಯವರಂಥ ಆಧುನಿಕರ ಅನುಲೇಪವಿದೆ. ಈ ಗಾಥ ಸಂಸ್ಕಾರದಲ್ಲಿ ಕವಿಯ ನೆಲೆ ಬೆಲೆಯನ್ನು ಅಳೆಯುವುದು ಇಲ್ಲಿನ ಉದ್ದೇಶವಲ್ಲ! ಮುಖ್ಯವಾಗಿ ತಾಳಕೇರಿ ಅವರ ಜನ್ಮಜಾತ ಪ್ರತೀತಿಗೆ, ಆಶುಕವಿತ್ವ ಶಕ್ತಿಗೆ, ಸಂಗೀತ ಸಾಹಿತ್ಯದೊಲುಮೆಗೆ, ನಾನು ಮಾರು ಹೋಗಿದ್ದೇನೆ" ಎಂದು ಬರೆದಿದ್ದಾರೆ. ಈ ಮಾತುಗಳಿಂದ ತಾಳಕೇರಿ ಬಸವರಾಜರವರ ಸೃಜನಶೀಲ ಪ್ರತಿಭೆ, ಕ್ರಿಯಾಶೀಲ ವ್ಯಕ್ತಿತ್ವ ಹೇಗಿತ್ತು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ.

ಸಂಕಲನದ ಮೊದಲ ಹಾಡು 'ಬಸವಗೀತೆ' ಹೀಗೆ ಆರಂಭವಾಗುತ್ತದೆ.

ಬಸವಗೀತ ಇದು ಪುನೀತ ।

ಭಕ್ತಿ ಗತಿಗೆ ಇದು ಸುಪಂಥಾ ॥

ಮನವು ಶುದ್ಧ ಮಾಡುವಂಥ ।

ಬಾಳಿ ಬೆಳಗಿನ ಪರಮಗೀತ ।

ಭಾವ ಕುಸುಮ ಅರಳುವಂಥ ।

ಶರಣ ತತ್ವದ ಸುಗಮ ಗೀತ ॥ ೧ ॥

ಅನುಭವದ ಸಿರಿ ತುಂಬಿದಂತ ।

ಸತ್ಯ ಸದಮಲ ಭಾವಗೀತ ।

ಮನುಜ ಧರ್ಮದ ತಿಳಿಸುವಂಥ ।

ಪರಮ ನಿಧಿಯ ಸ್ತುತಿಸು ಗೀತ ॥ ೨ ॥

ಧರೆಯ ಶಾಂತಿಗೆ ನಿರುತ ಹಾಡುವ

ಅರುವಿನೊಲುಮೆಯ ಆತ್ಮಗೀತ ॥

ಗುರುದಯಾಕರ ಪಂಚಾಕ್ಷರ ಮಹಾ

ಕರುಣೆ ಬೀರುವ ಸುರಸಂಗೀತ ॥೩॥

ಬಸವಣ್ಣನವರನ್ನು ನೆನಪಿಸಿಕೊಂಡರೆ ನಮ್ಮಲ್ಲಾಗುವ ಬದಲಾವಣೆಗಳನ್ನು ಕುರಿತು ಹೇಳುವ ಹಾಡಿದು. ಬಸವಣ್ಣನವರನ್ನು ನೆನಪಿಸಿಕೊಳ್ಳುವುದು ಎಂದರೆ ಅವರ ವಿಚಾರಗಳನ್ನು ಮುಖಾಮುಖಿ ಮಾಡಿಕೊಳ್ಳುವುದು. ಜೊತೆಗೆ ಎಷ್ಟು ಸಾಧ್ಯವೋ ಅಷ್ಟು ಅವರ ವಿಚಾರಗಳನ್ನು ನಮ್ಮೊಳಗು ಮಾಡಿಕೊಳ್ಳುವುದೇ ಆಗಿದೆ. ಶರಣ ಸಾಹಿತ್ಯದಲ್ಲಿ ಎಲ್ಲವೂ ಇದೆ ಎನ್ನುವುದನ್ನು ವಿವರಿಸುವ ಹಾಡಿದಾಗಿದೆ.

'ಬಸವ ಭಾನು' ಎನ್ನುವುದು ಒಂದು ನೀಳವನ. ಇಪ್ಪತ್ತಾರು ನುಡಿಗಳನ್ನೊಳಗೊಂಡ ಹಾಡು.

ಬಸವ ಭಾನು ಮೂಡಿಬರುವ ।

ವಿಶ್ವಧರ್ಮ ಬೆಳಕು ತರುವ ॥

ಸಮಯವಿದು ಏಳಿರೀಗ ಎಚ್ಚರಾಗಿರಿ

ಹರುಷದಿಂದ ಸ್ವಾಗತಕ್ಕೆ ಸಿದ್ಧರಾಗಿರಿ ॥

ಸತ್ಯಶುದ್ಧ ಬಟ್ಟೆಯುಟ್ಟು ।

ವಿಶ್ವಧರ್ಮ ರೂಪ ತೊಟ್ಟು

ಪೂರ್ಣಕಲೆಯ ರಾಜಯೋಗಿ ಶಿವನ ಕಂಡನು

ಬಂದು ಮಧುರವಾಣಿಯಿಂದ ಇಂತು ನುಡಿದನು ॥

ಭುವಿಯ ಪಾಪಮಯವಿದೆಲ್ಲ ।

ತಪ್ಪನೊಪ್ಪಿಕೊಳ್ಳರಿಲ್ಲ ॥

ನಿನ್ನೊಳಿರುವ ತಪ್ಪನೆಲ್ಲ ಎತ್ತಿ ತೋರುವೆ ।

ಅರಿತು ಬಾಳುವಂಥ ನೀತಿಯನ್ನು ತಿಳಿಸಿವೆ ॥ ೫ ॥

ದೇವಲೋಕ ಮರ್ತ್ಯಲೋಕ

ಬೇರೆಯುಂಟೆ ಸ್ವರ್ಗಲೋಕ

ದಿಟವ ನುಡಿಯೆ ದೇವಲೋಕವೆಂದು ತಿಳಿಯಿರೋ

ಮಿಥ್ಯನುಡಿಯೆ ಮರ್ತ್ಯಲೋಕವದುವೆ ಕಾಣಿರೋ

ಮರವು ದೈವ ಮಡಕೆ ದೈವ

ಕಲ್ಲುದೈವ ಕಣಿವೆ ದೈವ ||

ಕೊಳವು ದೈವವೆಂಬ ಭ್ರಮೆಯ ದೂರ ಮಾಡಿರೋ |

ಇಂಥ ನೂರು ದೈವಕೊಬ್ಬ "ಶಿವನು" ನಂಬಿರೊ

ಕಲ್ಲ ನಾಗರಕ್ಕೆ ಹಾಲು

ದಿಟದ ನಾಗರಕ್ಕೆ ಕೋಲು

ಎಂಥ ಭಕ್ತಿ ಎಂಥ ದಯೆ ಲೋಕದವರದು

ಭಕ್ತರಂತೆ ಸೋಗು ಹಾಕಿ ನಡೆಯೆ ನರಕದು

ಬಡವನೊಬ್ಬ ಬಹಳ ಹಸಿದು

ಬಂದು ಬೇಡೆ "ಹೋಗು" ಎಂದು

ಕಲ್ಲಮುಂದೆ ಎಡೆಯನಿಟ್ಟು ತಿನ್ನು ಎಂಬಿರಿ |

ಮನೆಗೆ ತಂದು ಎಲ್ಲಾ ನೀವೇ ತಿಂದು ಬಿಡುವಿರಿ.

ಇಲ್ಲಿ ಬಸವನೇ ಭಾನಾಗಿದ್ದಾನೆ. ಕವಿ ತಾನು ಕಂಡ ಕನಸಿನ ಚಿತ್ರದ ಮೂಲಕ ಇಡೀ ಹಾಡನ್ನು ಬರೆದಿದ್ದಾರೆ. ನಾವು ಸಮಾಜದಲ್ಲಿ ನಡೆದುಕೊಳ್ಳುವ ರೀತಿ, ಬಸವಣ್ಣನವರ ಆಚಾರ-ವಿಚಾರಗಳನ್ನು ಮಾಡಿಕೊಳ್ಳಬೇಕಾದ ಸಾಂಸ್ಕೃತಿಕ ಮುಖಾಮುಖಿಯ ಬಗೆಗೂ ಒತ್ತಿ ಹೇಳಿದ್ದಾರೆ. ಜೊತೆಗೆ ಮೂಢನಂಬಿಕೆಯನ್ನು ತೊರೆದು ವೈಚಾರಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯತೆಯ ಬಗೆಗೂ ಸೂಕ್ಷ್ಮವಾಗಿ ಹೇಳಿದ್ದಾರೆ. ಬಸವ ಪ್ರಜ್ಞೆಯನ್ನು ಸಮಾಜದಲ್ಲಿನ ಪ್ರತಿಯೊಬ್ಬರು ಮೈಗೂಡಿಸಿಕೊಂಡು; ಅದನ್ನು

ಉಸಿರಾಗಿಸಿಕೊಂಡು ನಡೆದಾಗ ಖಂಡಿತಾ ನಮ್ಮ ಸಮಾಜ ಮಾದರಿ ಸಮಾಜವಾಗುವುದರಲ್ಲಿ ಸಂದೇಹವಿಲ್ಲ. ಆ ಶಕ್ತಿ - ಸಾಮರ್ಥ್ಯ ಬಸವ ಪ್ರಜ್ಞೆಗಿದೆ.

'ಜಯ ಬಸವಣ್ಣ' ಎನ್ನುವ ಹಾಡು ಭಕ್ತಿಯ ನೆಲೆಯಿಂದ ರಚನೆಯಾದ ಹಾಡೆನಿಸಿದರೂ ಕೂಡ ಬಸವಣ್ಣನವರು ಈ ಸಮಾಜಕ್ಕೆ ಸಲ್ಲಿಸಿದ ಸೇವೆಯ ಭಿನ್ನ ನೆಲೆಗಳನ್ನು ಗುರುತಿಸುವ ದಿಸೆಯಲ್ಲಿ ಮುಂದುವರೆದಿದೆ.

ಕಾಯಕವೇ ಕೈಲಾಸವೆಂದು
ಶುದ್ಧಾಚರಣೆಯ ಪಿಡಿದು
ವಿಶ್ವದ ಬೆಳಕಿಗೆ ಬೆಳಕನು ತಂದೆ
ಮೇಲು-ಕೀಳುಗಳಿಲ್ಲವೆಂದೆ।
ಸಮತಾವಾದಿ ನೀನೇ ಜಗದಿ
ಹೇ ಜಗದಣ್ಣ ನಮೋ ನಮೋ ॥ ೩ ।

ಕನ್ನಡ ನುಡಿಯಲಿ ಶಕ್ತಿಯ ತುಂಬಿ
ಕ್ರಾಂತಿಯ ಕಹಳೆಯ ನೂದಿ
ಕನ್ನಡ ನಾಡಿಗೆ ಚೇತನವಾಗಿ
ಕನ್ನಡ ಕುಲಗುರುವಾದೆ
ಕನ್ನಡ ಕವಿಯೇ ಭಾಗ್ಯದ ರವಿಯೇ
ಹೇ ಜಗದಣ್ಣ ನಮೋ ನಮೋ ॥ ೪ ॥

ಹೊಲೆ - ಹೊಲೆಯರ ಮನೆ ಹೊಕ್ಕವ ನೀನು
ಕುಲಛಲವಳಿದವ ನೀನು।
ಸ್ವಾರ್ಥವ ದೂಡಿ ಜನತೆಯ ನೋಡಿ
ಪಾವನಗೊಳಿಸಿದೆ ನೀನು।
ಭಕ್ತಿಯ ಕಣ್ಣ ಕೊಟ್ಟವನಣ್ಣ
ಹೇ ಜಗದಣ್ಣ ನಮೋ ನಮೋ ॥ ೫ ॥

ಸಮತಾವಾದಿ, ಮಹಾ ಮಾನವತಾವಾದಿಯಾಗಿ ಈ ನಾಡಿಗೆ ಅಪರೂಪದ ಕೊಡುಗೆಯನ್ನೂ ಸಲ್ಲಿಸಿದ ಬಸವಣ್ಣನವರು ಅಹಿಂಸಾ ಚಳುವಳಿಯನ್ನು ಮಾಡಿದವರು. ಕನ್ನಡ ಭಾಷೆ ಅವರಿಂದ ಹೊಸ ಸತ್ಯವನ್ನು; ಹೊಸ ಆಯಮವನ್ನು ಪಡೆದುಕೊಂಡಿದೆ. ಯಾರನ್ನು ಸಮಾಜ ದೂರವಿಟ್ಟಿತ್ತೋ ಅವರ ಮನೆಗೆ ಹೋಗಿ, ಅವರೊಂದಿಗೆ ಬೆರೆತು ಊಟ ಮಾಡಿದ ಬಸವಣ್ಣನವರು ಕುತೂಹಲವನ್ನು ಅಂದಿನ ಸಮಾಜದಲ್ಲಿ ಮೂಡಿಸಿದವರು.

ಮಾನವೀಯತೆಗಾಗಿ ಸಮಾನತೆಯ ಸಮಾಜಕ್ಕಾಗಿ ಬದುಕಿನುದ್ದಕ್ಕೂ ಮಿಡಿದ ಬಸವಣ್ಣನವರದು ಅನನ್ಯ ವ್ಯಕ್ತಿತ್ವವಾಗಿತ್ತು. ಒಂದು ರೀತಿಯಲ್ಲಿ ಅವರು ಇಡೀ ಸಮಾಜದ ಕಣ್ಣಾಗಿದ್ದರು. ಒಂದು ಅಪರೂಪದ ಶಕ್ತಿಯಾಗಿದ್ದರು.

ಬಸವಾದಿ ಶರಣರು ದುಡಿದುಣ್ಣುವುದನ್ನು ಕಲಿಸಿಕೊಟ್ಟರು. ಪ್ರತಿ ವ್ಯಕ್ತಿ ತನಗೆ ಸಿಕ್ಕ ಕಾಯಕದಲ್ಲಿ ನಿಷ್ಠೆ ಪ್ರಾಮಾಣಿಕತೆಯಿಂದ ದುಡಿಯಬೇಕು. ಕಾಯಕದಲ್ಲಿ ಕಡಿಮೆ-ಹೆಚ್ಚು ಎನ್ನುವ ತಾರತಮ್ಯ ಇರಕೂಡದು. ಏಕತೆಯಿಂದ ದುಡಿದಾಗ ನಾವು ಅಲ್ಲಿಯೇ ಕೈಲಾಸವನ್ನು ಕಾಣಲು ಸಾಧ್ಯ ಎಂದು ಸ್ವತಃ ತೋರಿಸಿಕೊಟ್ಟವರು. ದುಡಿದು ಬಂದ ಪ್ರತಿಫಲದ ಹಣದಿಂದಲೇ ದಾಸೋಹಕ್ಕೆ ನೆರವಾದರು. ಶರಣರಿಗೆ ಮುಂದಾಲೋಚನೆ ಬಹಳಿತ್ತು. ಶರಣರು ವಿಜ್ಞಾನಿಗಳು, ತತ್ವಜ್ಞಾನಿಗಳು, ಚಿಂತಕರು, ಅನುಭಾವಿಗಳು, ಅರ್ಥಶಾಸ್ತ್ರಜ್ಞರು, ಆಡಳಿತ ಸುಧಾರಕರು, ಎಲ್ಲವೂ ಆಗಿದ್ದರು. ಹೀಗಾಗಿ ಅವರ ಚಿಂತಾನಕ್ರಮ ಎಂದೆಂದಿಗೂ ಪ್ರಸ್ತುತ.

ತಾಳಕೇರಿಯವರು ತಮ್ಮ ಇನ್ನೊಂದು ಹಾಡಾದ 'ಹುಟ್ಟಿ ಬಾ ಶಿವಶರಣ' ಎನ್ನುವ ಹಾಡಿನಲ್ಲಿ

ಕತ್ತಲೆ ಬಸಿರನ್ನು ಬಗೆದು ಹೊರ ಮೂಡಿ ಬಾ |
ಮತ್ತೊಮ್ಮೆ ಜಗ ಬೆಳಗು ಶರಣ ದಿನಮಣಿಯೆ
ಮುತ್ತಿಹುದು ಸುತ್ತುಕಡೆ ನೋಡಿಲ್ಲ ಬೇಗ ಬಾ
ಹೊಂಬೆಳಗ ಹೂನಗೆಯ ಜ್ಞಾನ ಕಿರಣದ ನಿಧಿಯೆ ||೧||

ಎತ್ತತ್ತೊ ಮೂಢ ಬಗೆ ಬೀಡು ಬಿಟ್ಟಿದೆ ನೋಡು |
ಕತ್ತೆತ್ತದಂತಾಗಿ ಭಯವಾಗುತಿಹುದು ||
ನಿತ್ಯ ನಡೆದಿದೆ ಸತ್ಯ ಧರ್ಮದಾ ಕೋಲೆ, ನಾಡು |
ಮೃತ್ಯು ಮಸಣದಿ ತಾನು ಕುಣಿದಾಡುತಿಹುದು ||೨||

ಮರೆಮೋಸ ಸ್ವಚ್ಛಂದ ಸ್ವಾರ್ಥದಾ ಜನಮನ
ಬರಿ ಮಾತುಗಳ ಮಾಲೆ ಕಟ್ಟುತಿಹುದಣ್ಣ
ಬಿರಿಯುವಳು ಭೂತಾಯಿ ಪಾಪ ಭಾರದಿ ತಾನು |
ವರ ಶಕ್ತಿ ಸಂಪನ್ನ ಬಾರೋ ಬಸವಣ್ಣ ||೩||

ಸುತ್ತ ಮುತ್ತ ಮೋಸವಂಚನೆಗಳಾಟ, ಸತ್ಯ ಧರ್ಮದ ಕೊಲೆ, ಮಾನವೀಯ ಮೌಲ್ಯಗಳ ಕುಸಿತ, ಅಶಾಂತಿ, ಸ್ವಾರ್ಥವೇ ತುಂಬಿರುವುದರಿಂದ ಆದರ್ಶ ಸಮಾಜ ಕಾಣಸಿಗದಂತಾಗಿದೆ. ಇದನ್ನೆಲ್ಲ ನೆಲಸಮ ಮಾಡಿ ಹೊಸ ಬೆಳಕನ್ನು ಚಿಮ್ಮಿಸಲು, ವೈಚಾರಿಕ ಪ್ರಜ್ಞೆಯನ್ನು ಮೂಡಿಸಲು, ಮತ್ತೊಮ್ಮೆ ಹುಟ್ಟಿ ಬಾ ಎಂದು ಕವಿ ತಾಳಕೇರಿಯವರು ಇಲ್ಲಿ ಕೇಳಿಕೊಳ್ಳುತ್ತಿದ್ದಾರೆ. ಜೊತೆಗೆ ಶಾಂತಿ, ನೆಮ್ಮದಿ, ಪ್ರೀತಿಯನ್ನು ಅರಳಿಸಲು ಬರಬೇಕೆಂದು ಬಿನ್ನಹಿಸಿಕೊಳ್ಳುತ್ತಾರೆ.

ನಿನ್ನ ತತ್ವಗಳೆಲ್ಲ ಬರಿ ಬಾಯಿ ಮಾತಿನಲ್ಲಿ
ಸಣ್ಣವರ ದೊಡ್ಡವರ ಉಪದೇಶಕಿಹವು
ಕೃತಿಯಲ್ಲಿ ಎಳ್ಳಷ್ಟು ಬಂದಿಲ್ಲ ನಮ್ಮಲ್ಲಿ ।
ಮತಿ ನೀಡು ಗತಿ ತೋರುಬರಲಿ ನಿಜ ಗೆಲವು ॥ ೫ ॥

ಎಂದು ಹೇಳುವುದರ ಮೂಲಕ ವಾಸ್ತವವನ್ನು ತೆರೆದಿಡುತ್ತಾರೆ. ಅರಿವನ್ನು ನೀಡೆಂದು ಮತ್ತೆ ಮತ್ತೆ ಕೇಳಿಕೊಳ್ಳುತ್ತಾರೆ.

ಕನ್ನಡ ಕುಲಕೊಬ್ಬ ನೀನೆ ಕಲ್ಯಾಣದ ಬಸವಣ್ಣ
ಭಕ್ತಿ ಭಾಂಡಾರಕೊಡೆಯ ನೀನಾದೆಯಣ್ಣ ॥

ಕಟ್ಟಿದೆ ಶಿವಕಲ್ಯಾಣ ಕೊಟ್ಟೆ ಜಗಕೆ ಜ್ಞಾನಕಣ್ಣ
ಮೆಟ್ಟಿದ ಧರೆ ಪಡೆದು ಪುಣ್ಯ ಪಾವನಾಯ್ತು ಜಗದಜನ
ನಿನ್ನ ನುಡಿ ಕ್ರಾಂತಿ ಕಿಡಿ ಶಾಂತಿ ಶಾಂತಿ ಶುಭಕಿರಣ
ಪಂಚವರುಷ ಮೂರ್ತಿ ನಿನ್ನ ಕೀರ್ತಿ ವಿಶ್ವ ತುಂಬಿತಣ್ಣ ॥

ವೇದಶಾಸ್ತ್ರ ಸ್ಮೃತಿ ಪುರಾಣ ಸಾರ ಪೂರ್ಣ ನಿನ್ನ ವಚನ
ಕನ್ನಡ ಸಿರಿಕಣಜ ತುಂಬಿ ದಾನಗೈದೆ ಶಿವಶರಣ
ನಿನ್ನ ಋಣ ಕನ್ನಡ ಜನ ತೀರಿಸುವದ್ದೇಗಣ್ಣ ?
ವಿಶ್ವಧರ್ಮ ಜ್ಯೋತಿ ನಿನಗೆ ನಾಡು ಚಿರಋಣಿಯಣ್ಣ ॥

ಸತ್ಯಶೀಲ ಕಾಯಕವ ನಿತ್ಯ ನಡೆಸಿ ಅಮರಗಣ
ತೃಪ್ತಿಗೊಳಿಸಿ ಪಡೆದೆ ಪುಣ್ಯನೀನೇ ಪರಮ ಧನ್ಯ ಮಾನ್ಯ
ಕಾಯಕವಿದು ಕೈಲಾಸವೆಂದು ಕಂಡೆ ನಿತ್ಯ ಪರಶಿವನ
ಕೂಡಲ ಸಂಗಯ್ಯವೆಂದು ಸೇವೆಗೈದೆ ಚರವರನ ॥

ವಚನ ಚಳುವಳಿಯ ಮೂಲಕ ಅನನ್ಯ ಕೊಡುಗೆಯನ್ನು ಸಲ್ಲಿಸಿದ ಭಕ್ತಿ ಭಂಡಾರಿ ಬಸವಣ್ಣನವರು ಇಡೀ ಕಲ್ಯಾಣದ ಕಣ್ಣಾದವರಾಗಿದ್ದರು. ವೈಚಾರಿಕ ಪ್ರಜ್ಞೆಯನ್ನು ಮೂಡಿಸಿ; ಹೋರಾಟದ ಕಿಡಿಹಚ್ಚಿದ ಅವರು ಕನ್ನಡದ ಸಾಂಸ್ಕೃತಿಕ, ಸಾಹಿತ್ಯಕ ಪ್ರಪಂಚದ ಅನರ್ಘ್ಯರತ್ನವಾಗಿದ್ದರು. ಅವರಿಗೆ ಇಡೀ ನಾಡೇ ಋಣಿಯಾಗಬೇಕೆಂದು ತಾಳಕೇರಿಯವರು 'ಕನ್ನಡ ಕುಲಕ್ಕೊಬ್ಬ ನೀನೆ ಬಸವಣ್ಣ' ಎನ್ನುವ ಹಾಡಿನಲ್ಲಿ ಹೇಳಿದ್ದಾರೆ. ಈ ಸಂಕಲನದ ಕುರಿತು ಡಾ. ವಿ. ಶಿವಾನಂದರು ಹೇಳುವಂತೆ “ಇವರ ಹಾಡುಗಳಲ್ಲಿ ಕಾಣುವ ಒಂದು ವೈಶಿಷ್ಟ್ಯವೆಂದರೆ, ಅವುಗಳ ಜಾನಪದ ಧಾಟಿ, ಸಂಗೀತ ಮುದ್ರೆ, ಪ್ರಾಸದ ಸಹಜತೆ ಶ್ರೀ ಬಸವರಾಜರ ಗೀತೆಗಳಲ್ಲಿ ಹ್ರಾಸವಿಲ್ಲ. ಶಬ್ದದ ಡೊಂಬರಾಟವಿಲ್ಲ!

ಎಲ್ಲವೂ ಸಹಜ ಸುಂದರ ಸುಗೀತಗಳಾಗಿವೆ. ಇವರಿಗೆ ಛಂದಸ್ಸಿನ ಶಾಸ್ತ್ರಜ್ಞಾನವಿಲ್ಲದಿದ್ದರೂ ಅದರ ಲಯದ ಒಳಗುಟ್ಟು ತಿಳಿದಿದೆ" ಎಂದಿದ್ದಾರೆ. ಒಟ್ಟಾರೆ ಈ ಸಂಕಲನ ಕಾವ್ಯಾಸಕ್ತರ ಗಮನವನ್ನು ತೀವ್ರವಾಗಿ ಸೆಳೆಯುವಂತಿದೆ.

ಈ ಸಂಕಲನದಲ್ಲಿ ಬಹುಪಾಲು ವ್ಯಕ್ತಿ ಚಿತ್ರಣಗಳನ್ನು ಹಾಡಿನಲ್ಲಿ ಹಿಡಿದಿಡುವ ಕೆಲಸವನ್ನು ಬಸವರಾಜ ತಾಳಕೇರಿಯವರು ಮಾಡಿದ್ದಾರೆ. ಅಂತಹ ಒಂದು ಹಾಡು 'ಗುರು ಪುಟ್ಟರಾಜು'.

ಕರಿನಾಡ ಕಣ್ಮಣಿಯೆ ಕವಿಗಾನ ಕೋಗಿಲೆಯೇ : ನೀ
ಬರೆದುದೆಲ್ಲವು ಸತ್ಯ ಸರಸ್ವತಿಯ ಸಾಹಿತ್ಯ ।
ತೆರೆದು ತೋರಿದೆ ಪೂರ್ಣ ಹೃದಯ ಭಾಂಡಾರವನು ।
ಪರಮ ಸಂಗೀತದಲಿ ಬೆರೆಸಿ ಹಾಡಿದೆ ನಿತ್ಯ ॥

ನುಡಿಸಿ ಪಂಚಮದಲ್ಲಿ ಮೂರು ಭಾಷೆಯನಾದ ।
ಒಡಲ ಕಡಲೊಳು ತೆಗೆದು ವಜ್ರ ವೈಢೂರ್ಯ ।
ಮಡಿಮನದಿ ಕಾವ್ಯ 'ಸು'ಮಾಲೆಯನು ಪೋಣಿಸಿ
ನುಡಿತಾಯಿ ಕೊರಳಲ್ಲಿ ಧರಿಸಿದಾಚಾರ್ಯ ॥ ೧ ॥

ಶಾಂತಮನ ಸಮಭಾವ ಸದ್ಗುಣ ಸರ್ವೋತ್ತಮ
ಭ್ರಾಂತಿಯವಗುಣದೂರ ಶಿವಕುಲದ ಸಂಪನ್ನ ।
ಸಂತೋಷ ಮುಖ ಬ್ರಹ್ಮಚರ್ಯ ನಿಷ್ಠಾಪೂರ್ಣ ।
ಸಂತಶಿವಜ್ಞಾನಿ ಕರುಣಾಳು ಜಗಮಾನ್ಯ ।

ಹೊರಗಣ್ಣ ಪರಿಯಿಂದ ಭದ್ರಕೋಟೆಯ ಕಟ್ಟಿ
ಪರಮ ಜ್ಞಾನದ ಅಮೃತ ನಿಧಿಯ ಸಂಗ್ರಹಿಸಿ
ಗುರುಕರುಣೆಯಾಕೋಡಿ ಒಳಗಣ್ಣ ಮುಖವಾಗಿ
ಹರಿದು ಬಂದಿತು ಜಗದ ರಂಗದಲಿ ಸೋಸಿ ॥

ಪಂಡಿತ ಪುಟ್ಟರಾಜ ಗವಾಯಿಗಳು ಸಂಗೀತ ಪ್ರಪಂಚದ ಮಹಾನ್ ಸಾಧಕರು. ಸಂಗೀತ ವಿದ್ಯಾಲಯವನ್ನು ನಡೆಸುವುದರ ಜೊತೆಗೆ ಅನನ್ಯ ಸಾಧನೆ ಮಾಡಿದ ಅವರದು ಅಪರೂಪದ ವ್ಯಕ್ತಿತ್ವ. ಕವಿಗಳೂ ಆಗಿರುವ ಗವಾಯಿಗಳು ನೂರಾರು ಶಿಷ್ಯರನ್ನು ಬೆಳೆಸಿದವರಾಗಿದ್ದಾರೆ. ಅಂತಹ ಮಹಾನುಭಾವಿಗಳ ಸಾಮಿಪ್ಯ, ಶಿಷ್ಯತ್ವವನ್ನು ಪಡೆದುಕೊಂಡ ತಾಳಕೇರಿ ಬಸವರಾಜರವರು ಈ ಹಾಡಿನಲ್ಲಿ ಅವರ ವ್ಯಕ್ತಿತ್ವದ ಬೇರೆ ಬೇರೆ ಮುಖಗಳನ್ನು ರೂಪಕಗಳನ್ನು ಬಳಸಿ ಹಿಡಿದಿಡಲು ಪ್ರಯತ್ನಿಸಿದ್ದಾರೆ.

ಕನ್ನಡ ನಾಡು ನುಡಿಗೆ ಶ್ರಮಿಸುವುದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯ. ತಾಳಕೇರಿ ಬಸವರಾಜರವರು ನಾಟಕಗಳಲ್ಲಿ ಅಭಿನಯಿಸುವುದರ ಮೂಲಕ ಜನರಲ್ಲಿ ನಾಡಿನ ಮತ್ತು ಕನ್ನಡ ಭಾಷೆಯ ಅಭಿಮಾನವನ್ನು ಜನರ ಮನಸ್ಸಿನಲ್ಲಿ ತುಂಬುತ್ತಿದ್ದರು. ಜೊತೆಗೆ ತಮ್ಮ ಬಿಡುವಿನ ವೇಳೆಯಲ್ಲಿ ಸುತ್ತಮುತ್ತಲಿನ ಜನರಿಗೆ ಅಕ್ಷರಭ್ಯಾಸವನ್ನು ಮಾಡಿಸುತಿದ್ದರು. ಹಾಗೆ ನೋಡಿದರೆ ಈ ಭಾಗ ನಿಜಾಮರ ಆಡಳಿತಕ್ಕೆ ಒಳಪಟ್ಟ ಭಾಗವಾಗಿದುದ್ದರಿಂದ ಕನ್ನಡ ಕಲಿಯುವುದು, ಕಲಿಸುವುದು ಒಂದು ರೀತಿಯಲ್ಲಿ ಕಷ್ಟದ ಕೆಲಸವೇ ಆಗಿತ್ತು. ಈ ಭಾಗದಲ್ಲಿ ಕನ್ನಡ ನಿಜವಾದ ಅರ್ಥದಲ್ಲಿ ಉಳಿಯುವಲ್ಲಿ ಬೆಳೆಯುವಲ್ಲಿ ಶ್ರಮಿಸಿದ ಅನೇಕ ಚೇತನಗಳಲ್ಲಿ ತಾಳಕೇರಿ ಬಸವರಾಜ ಹೂಗಾರರು ಒಬ್ಬರಾಗಿದ್ದಾರೆ. ಅವರು ಸಾಹಿತ್ಯದ ಮೂಲಕ ಕನ್ನಡ ಭಾಷೆಯ ಕಂಪನ್ನು; ಕನ್ನಡದ ಪ್ರಜ್ಞೆಯನ್ನು ಮೂಡಿಸಲು ಸಾಕಷ್ಟು ಕಷ್ಟಪಟ್ಟಿದ್ದಾರೆ.

ಈ ಪ್ರದೇಶದಲ್ಲಿ ಕನ್ನಡ ಕಲಿಸುವುದು ಎಷ್ಟು ಕಷ್ಟವಾಗಿತ್ತು ಎಂದರೆ ಇಲ್ಲಿ ಉರ್ದುವನ್ನು ನಿಜಾಮಶಾಹಿ ವ್ಯವಸ್ಥೆ ಒತ್ತಾಯವಾಗಿ ಕನ್ನಡಿಗರ ಮೇಲೆ ಹೇರುತಿತ್ತು. ಹೀಗಾಗಿ ಬೀದರನಂತಹ ಜಿಲ್ಲೆಗಳಲ್ಲಿ ಹೊರಗಡೆ ಉರ್ದು ಶಾಲೆ' ಎಂದು ಬೋರ್ಡು ಹಾಕಿಕೊಂಡು ಒಳಗಡೆ ಕನ್ನಡದ ಶಾಲೆಯನ್ನು ಕೆಲವರು ನಡೆಸುತ್ತಿದ್ದರು. ಇದು ನಿಜಾಮರಿಗೆ ಗೊತ್ತಾಗದ ಹಾಗೆ ಕಲಿಯುವ ಕಲಿಸುವ ಕನ್ನಡದ ಪ್ರಕ್ರಿಯೆ ನಿರಂತರವಾಗಿ ನಡೆಯುತಿತ್ತು.

ತಾಳಕೇರಿ ಬಸವರಾಜರು ದ್ಯಾಂಪುರ ಚೆನ್ನಕವಿ, ವೈ. ನಾಗೇಶಶಾಸ್ತ್ರಿ, ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಗಳ ಹಾಗೆ ಕನ್ನಡದ ಕೆಲಸವನ್ನು ಮಾಡದೇ ಇದ್ದರೂ ತಮ್ಮ ಮಿತಿಯಲ್ಲೇ ಒಳ್ಳೆಯ ಕೆಲಸವನ್ನು ಮಾಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಕರಿಬಸವಯ್ಯ, ಭಾಲ್ಕಿ ಪಟ್ಟದೇವರು, ರಾಜ ಪುರೋಹಿತ ಜಯತೀರ್ಥ, ಮಾನ್ವಿ ನರಸಿಂಗರಾಯ, ಡಿ.ಕೆ.ಭೀಮಸೇನ್‌ರಾಯರು ಮುಂತಾದವರು ಮಾಡಿದ ಕೆಲಸಗಳು ತಾಳಕೇರಿ ಬಸವರಾಜರವರ ಕಣ್ಣೆದುರಿಗೆ ಇದ್ದುದ್ದರಿಂದ ಇವರು ಇನ್ನಷ್ಟು ಕೆಲಸ ಮಾಡಲು ಸಾಧ್ಯವಾಯಿತು.

ಕನ್ನಡ ನಾಡು ನುಡಿಯ ಕುರಿತಂತೆ ಅವರು ಅನೇಕ ಹಾಡುಗಳನ್ನು ಬರೆದಿರುವುದನ್ನು ಇಲ್ಲಿ ಕಾಣಬಹುದು.

ಕನ್ನಡದ ಆರತಿಯ ಬೆಳಗೋಣ ಬಾ
ಸಂತಸದ ಸುಗ್ಗಿಯಲಿ ಕುಣಿಯೋಣ ಬಾ ಬಾ
ಕಾವೇರಿಯಿಂದಮಾ ಗೋದಾವರಿವರೆಗೆ
ಮೆರೆದು ಬಾಳಿದನಮ್ಮ ಜನಪದದ ಸಿರಿಗೆ ||
ಕರುಳಿನನುಡಿಯಿಂದ ಜಗದ, ಜನಮನವನು ಗೆಲಿದಾಕೆ
ಚನ್ನಚೆಲುವೆ ಶ್ರೀ ತಾಯಿ ಭುವನೇಶ್ವರಿ" ಪಾದಕೆ
-----------------------------------
-----------------------------------

ನಾಡು ನುಡಿ - ಸಂಪದದ, ಸಿರಿ ಸೊಬಗಿನಲ್ಲಿ
ಪಚ್ಚ ಪಸರಿನ ಬೆಳೆಯ ಸುಂದರತೆಯಲ್ಲಿ
ದಿವ್ಯ ಪ್ರಕೃತಿ ಸೊಬಗಿನ ಸಿರಿ ವನರಾಣಿ ಭಾಗ್ಯದಲಿ
ವಿಶ್ವದ ಮನಸೆಳೆದ, ವಿಶ್ವಸುಂದರಿಯಡಿಗೆ.

(ಕನ್ನಡದ ಆರತಿ)

ಕಾವೇರಿಯಿಂದ ಗೋದಾವರಿಯವರೆಗೆ ನಮ್ಮ ಕನ್ನಡ ನಾಡು ಹಬ್ಬಿದೆ ಎಂದು ಕವಿರಾಜಮಾರ್ಗಕಾರನ ಮಾತನ್ನು ನೆನಪಿಸುತ್ತ ಕನ್ನಡದ ಆರತಿಯನ್ನು ಬೆಳಗಲು ಆಹ್ವಾನಿಸುತ್ತಾರೆ. ತಾಯಿ ಭುವನೇಶ್ವರಿ ಜಗದ ಮನವನ್ನು ಗೆದ್ದಾಕೆ. ಸದಾ ಹಸಿರಿನಿಂದ ಕಂಗೊಳಿಸುವ ನಾಡಿನ ಸಿರಿ ಸಂಪತ್ತು ಎಂತವರನ್ನು ಸೆಳೆಯುವಂತಹದ್ದು. ಇಂತಹ ಹೆಮ್ಮೆಯ ನಾಡಿನ ನುಡಿಯು ಶ್ರೇಷ್ಠವಾದದ್ದು ಎನ್ನುತ್ತಾರೆ ತಾಳಕೇರಿಯವರು.

ಕನ್ನಡ ನಾಡಿನ ಜನಗಳೆ ಬನ್ನಿರಿ
ಚನ್ನಡಿ - ಮುನ್ನಡಿಯನ್ನಿಡುತ ||
ನನ್ನಿಯ ನುಡಿಯಲಿ ಜನಮನಗೆಲಿಯುವ
ಭಾರತೀಯರು ನಾವೆಂದೆನುತ ||

ನಾಡಿನ ಜನರೊಳು ತುಂಬಿದ ಮತ್ಸರ,
ಓಡಿಸಿ ಬೆಳೆಸುವ ಐಕ್ಯತನ |
ಮೂಢರ ಮನವನು ಗೆಲಿಯುವನೇಹದಿ
ಮಾಡುವ ನೆರೆ - ಹೊರೆ ಗೆಳೆಯತನ
ಹೆಮ್ಮೆಯ ನಾಡಿದು ನಮ್ಮದು ಕನ್ನಡ
ಸುಮ್ಮನೆ ಕುಳಿತರೆ ಫಲವೇನು |
ನಮ್ಮೊಳು ಸ್ವಾರ್ಥವ ಮರೆಯುತ
ಪ್ರೇಮದ ಪ್ರೇರ್ಮೆಯ ತಿಳಿಸುವ ಎಲ್ಲವನು ||

(ಕನ್ನಡ ಜನಗಳೆ)

ನಮ್ಮಲ್ಲಿರುವ ಸಣ್ಣತನ, ದ್ವೇಷ, ಅಸೂಯೆ, ಸ್ವಾರ್ಥವನ್ನು ಕಳೆದು, ನಾಡಿಗಾಗಿ, ಜನಭಾಷೆಗಾಗಿ ಒಕ್ಕಟ್ಟಿನಿಂದ ದುಡಿಯೋಣ ಎಂದು ಎಚ್ಚರಿಸುತ್ತಾರೆ. ಇಂದು ನಮ್ಮ ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಗಳು ದಾಳಿ ಮಾಡುತ್ತಿವೆ. ಒತ್ತಾಯ ಪೂರ್ವಕವಾಗಿ ಇನ್ನೊಂದು ಭಾಷೆಯನ್ನು ಹೇರಲಾಗುತ್ತಿದೆ. ಇವುಗಳ ನಡುವೆ ಕನ್ನಡ ಭಾಷೆ ನಲುಗುತ್ತಿದೆ. ಇದು ತಪ್ಪಬೇಕು. ನಮ್ಮ ಭಾಷೆಗೆ ಒಂದು ಇತಿಹಾಸ; ಪರಂಪರೆ ಇದೆ. ಭಾಷೆ ಅದು ನಮ್ಮ ಉಸಿರಾಗಬೇಕು. ಅನ್ನದ ಪ್ರಶ್ನೆಯಾಗಬೇಕು. ಭಾಷೆಯ ಬಗೆಗೆ ಪ್ರೀತಿ, ಅಭಿಮಾನ ಅನನ್ಯತೆಗಳನ್ನು ಮೆರೆಯಬೇಕಾಗಿದೆ. ಭಾಷೆಯ ಉಳಿವಿನ ಬಗೆಗೆ ನಿಜವಾದ ಕಾಳಜಿ ಪ್ರತಿಯೊಬ್ಬ ಕನ್ನಡಿಗರಲ್ಲೂ ಅಂತರಾಳದಿಂದ

ಮೂಡಬೇಕು. ಆ ಕಾರಣಕ್ಕಾಗಿಯೇ ಭಾಷೆಯನ್ನು ನಾಡನ್ನು ಉಳಿಸಿಕೊಳ್ಳುವುದಕೋಸ್ಕರ ಐಕ್ಯತೆಯಿಂದ ಇರಬೇಕಾಗಿದೆ ಎಂದು ತಾಳಕೇರಿ ಬಸವರಾಜರವರು ಇಲ್ಲಿ ಹೇಳಿದ್ದಾರೆ.

ನೆಲವು ಕನ್ನಡ I ನಮ್ಮ
ಕುಲವು ಕನ್ನಡಾ I
ಕಲೆಯು ಕನ್ನಡಾ I ಸಕಲ I
ಬಲವು ಕನ್ನಡಾ

ಹುಟ್ಟಿ ಬೆಳೆದ ಊರುನಾಡು, ಸುತ್ತು ಮುತ್ತು ಕನ್ನಡ
ಕಟ್ಟಿದಂಥ ಮನೆಯ ಮಠವು, ಬೀದಿ ಓಣಿ ಕನ್ನಡ
ಆಟ - ಪಾಟ, ಓಟ - ನೋಟ, ಊಟವೆಲ್ಲ ಕನ್ನಡ
ಕೂಟ ಮಧುರ ಬಾಲ್ಯದೋಟ ಮನಸು ಕನಸು ಕನ್ನಡ

ನನ್ನ ಉಸಿರು - ಭಾವಜೀವ, ಉಡಿಗೆ ತೊಡಿಗೆ ಕನ್ನಡ
ಅನ್ನ ನೀರು, ಗಾಳಿ ಬೆಳಕು ಭೂಮಿಸೀಮಿ ಕನ್ನಡ
ಎಳೆಯ - ಹಳೆಯ ಜನಗಳೆಲ್ಲ ನುಡಿಯು ನಡೆಯು ಕನ್ನಡ
ಗೆಳೆಯರೊಡನೆ ಆಡಿದೆಲ್ಲ ಅಂಗಳಂದ ಕನ್ನಡ.

(ನಮ್ಮ ಕನ್ನಡ)

'ಕನ್ನಡ' ಎನ್ನುವುದು ಬರೀ ಭಾಷೆಯಷ್ಟೇ ಅಲ್ಲ ಅದು ನಮ್ಮ ಒಟ್ಟು ಬದುಕು ಎನ್ನುವುದನ್ನು ಬಹಳ ಸುಂದರವಾಗಿ ಈ ಹಾಡಿನಲ್ಲಿ ತಾಳಕೇರಿಯವರು ವ್ಯಕ್ತಪಡಿಸಿದ್ದಾರೆ. ಕನ್ನಡ ಭಾಷೆಯನ್ನು ತಾಳಕೇರಿಯವರು ಪರಿಭಾವಿಸಿಕೊಂಡ ಹಾಗೆ ಪ್ರತಿಯೊಬ್ಬರೂ ಪರಿಭಾವಿಸಿಕೊಳ್ಳಬೇಕಾದ ಅಗತ್ಯವಿದೆ. ಹಾಗಾದಾಗ ಭಾಷೆ ಉಳಿಯಲು, ಸಮೃದ್ಧವಾಗಿ ಬೆಳೆಯಲು; ತನ್ನ ಕಂಪನ್ನು ಹರಡಲು ಸಾಧ್ಯವಾಗುತ್ತದೆ.

ತಾಳಕೇರಿ ಬಸವರಾಜರವರು 'ಹಾಡುತಿಹುದು ನನ್ನ ಮನ' ಹಾಡಿನಲ್ಲಿ ಎದೆ ತುಂಬಿ ಹೇಳುವ ಭಾವವನ್ನು ಗಮನಿಸಿ

“ಹಾಡುತಿಹುದು ಹೃದಯ ಸದಾ ಕನ್ನಡದಾ ಮಧುರ ಗೀತ
ಇದುವೆ ನನ್ನ ಬಾಳಿನುಸಿರು' ನಾದ ವೇದ ಸಂಗೀತ

ಕನ್ನಡದ ಮಧುರಗೀತವನ್ನು, ಕನ್ನಡದ ಜನತೆಗೆ ತಲುಪಿಸುವ, ಬದುಕನ್ನೇ ಕನ್ನಡಕ್ಕಾಗಿ ಮುಡುಪಾಗಿಡುವ ಈ ರೀತಿಯ ಆಶಯ ಸಾಮಾನ್ಯವಾದುದಲ್ಲ. ನಿಜವಾದ ಕವಿಗೆ ಮಾತ್ರ ಈ ರೀತಿಯ ಹೃದಯ ವೈಶಾಲ್ಯತೆ, ಕಳಕಳಿ ಬರಲು ಸಾಧ್ಯ. ಕನ್ನಡ ಕಟ್ಟುವುದಕ್ಕಾಗಿ ದುಡಿದು ಬದುಕನ್ನು ಸಾರ್ಥಕ ಪಡಿಸಿಕೊಂಡವರಲ್ಲಿ ತಾಳಕೇರಿಯವರು ಕೂಡ ಒಬ್ಬರೆಂದರೆ ಅತಿಶಯೋಕ್ತಿಯ ಮಾತೇನಲ್ಲ.

ಎಲ್ಲೇ ಇರು ಹೇಗೆ ಇರು l

ಎಂದೆಂದು ಕನ್ನಡದ ಅಭಿಮಾನ ತುಂಬಿರು

ಕನ್ನಡದ ಭಾಷೆಗೆ ಕನ್ನಡದಭಿಲಾಷೆಗೆ

ಕನ್ನಡದ ಸೇವೆಗೆ ನೀ ಮೀಸಲಾಗಿರು

ಕನ್ನಡದ ನೆಲಕೆ ಕನ್ನಡದ ಕುಲಕೆ

ಕನ್ನಡದ ಧರ್ಮಕ್ಕೆ ಬೆಳಕಾಗಿರು.

ಕನ್ನಡದ ಗಾನಕಲೆ ಕನ್ನಡದ ಶಿಲ್ಪಕಲೆ

ಕನ್ನಡದ ಚಿತ್ರಕಲೆ ನನ್ನದೆಂದು ಹೇಳುತಿರು

ಕನ್ನಡದ ನಾಟ್ಯಕಲೆ ಕನ್ನಡದ ನೃತ್ಯಕಲೆ

ಕನ್ನಡದ ಶ್ರೇಷ್ಠಬೆಲೆ ಮರೆತು ಎಂದೂ ಬಾಳದಿರು.

ರನ್ನ ಫಂಪ ಹರಿಹರ, ಹುಟ್ಟಿದಂಥ ನಾಡಿದು|

ಜನ್ನ ಕುವೆಂಪುರನ್ನು ಪಡೆದ ಕಾವ್ಯ ಬೀಡಿದು l

ಮಾನ್ಯ "ಪುಟ್ಟರಾಜ" ಶಿವ ರವೀಂದ್ರರಿರುವ ನಾಡಿದು

ಸನ್ನುತಿಯ 'ಪಂಚಾಕ್ಷರ ಗಾನಯೋಗಿ ನೆಲವಿದು.

ಆಂಧ್ರ - ತಮಿಳು - ಮಹಾರಾಷ್ಟ್ರ ಕೇರಳೀಯರೆಲ್ಲರಿಗೆ

ಬಂಧು ಭಾವ ತೋರಿ ಸದಾ ಆಶ್ರಯವ ಕೊಟ್ಟಿಹುದು

ಎಂದೆಂದಿಗೂ ಶಾಂತಿ ಪ್ರೇಮ ತುಂಬಿಸಿಹುದು ಎಲ್ಲರಿಗೆ

ಕಂದ ಮುದ್ದು ಬಸವಗಿದು ಕಾಮಧೇನುವಾಗಿಹುದು.

ರಾಷ್ಟ್ರಕವಿ ಕುವೆಂಪುರವರ 'ಮೆಟ್ಟುವ ನೆಲ ಕರ್ನಾಟಕ' ಕವಿತೆಯನ್ನು ನೆನಪಿಸುವ 'ಹಾಡುತಿಹುದು ನನ್ನ ಮನ' ಎನ್ನುವ ಈ ಹಾಡು ಪ್ರತಿಯೊಬ್ಬ ಕನ್ನಡಿಗನನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಬರೆದ ಹಾಡಿದಾಗಿದೆ. ಕನ್ನಡ ನಾಡಿನಲ್ಲಿ ಹುಟ್ಟಿರುವುದೇ ಕನ್ನಡಿಗನ ಪುಣ್ಯ, ಕನ್ನಡವನ್ನು ಉಸಿರಾಗಿಸಿಕೊಂಡು; ಕನ್ನಡದ ಸೇವೆಗೆ ಬದುಕನ್ನು ಮುಡುಪಾಗಿಡಲು ಕರೆ ನೀಡಿದ್ದಾರಲ್ಲದೇ ರನ್ನ, ಪಂಪ, ಹರಿಹರರನ್ನು ನೆನಪಿಸಿದ್ದಾರೆ. ಅನ್ಯ ರಾಜ್ಯದವರಿಗೂ ಸೌಹಾರ್ದತೆಯ ತಾಣವಾಗಿರುವ ನಮ್ಮ ನಾಡಿನ ಹಿರಿಮೆ ಗರಿಮೆಗಳನ್ನು ಕೊಂಡಾಡಿದ್ದಾರೆ. ಸದಾ ಶಾಂತಿ-ಪ್ರೇಮವನ್ನು ಮೆರೆದ ನಮ್ಮ ನಾಡು ಅನೇಕ ರಾಜ್ಯಗಳಿಗೆ ಮಾದರಿಯಂತಿದೆ ಎಂದಿದ್ದಾರೆ.

ತಾಳಕೇರಿ ಬಸವರಾಜರವರ ಎಲ್ಲ ಕನ್ನಡಪರ ಹಾಡುಗಳನ್ನು ನೋಡಿದಾಗ ಕವಿಗಳಿಗೆ ಬರೀ ಭಾಷೆಯ ಬಗೆಗೆ ಪ್ರೀತಿ-ಅಭಿಮಾನಗಳಷ್ಟೇ ಇಲ್ಲ. ಅದರ ಜೊತೆಗೆ ಸೇವಾ ಮನೋಭಾವನೆ ಕನ್ನಡ ಮತ್ತು ಕನ್ನಡ ನಾಡಿನ ಬಗೆಗೆ ಆಳವಾದ ಕಾಳಜಿಯಿದೆ. ಅಂತಃಕರುಣವಿದೆ. ಕ್ರಿಯಾಶೀಲವಾಗಿ ಕೆಲಸ ಮಾಡಬೇಕೆಂಬ ಉತ್ಸಾಹ,

ಲವಲವಿಕೆಗಳು ಅವರ ಕಾವ್ಯದುದ್ದಕ್ಕೂ ಇದ್ದು ನಮಗೆಲ್ಲ ಸ್ಫೂರ್ತಿಯನ್ನುಂಟು ಮಾಡುವಂತಿವೆ. ಕನ್ನಡದ ಬಗೆಗೆ ಚಿಂತನೆ, ಜಾಗೃತಿ ಮೂಡಿಸುವ ಆಶಯವಿದೆ. ಹೀಗಾಗಿ ತಳಕೇರಿಯವರ ಕಾವ್ಯ ಈ ಹೊತ್ತಿಗೂ ಪ್ರಸ್ತುತ ಎನಿಸುವಂತಿದೆ. ಅವರ ಕಾವ್ಯಧೋರಣೆ ನಾಡಿನ ಪರವಾದುದು, ಜನಪರವಾದುದು. ಜೀವಪರವಾದುದಾಗಿದೆ.

ಅವರ ಕಾವ್ಯ ಸಂಕೀರ್ಣತೆಯಿಂದ ತಪ್ಪಿಸಿಕೊಂಡು ಸಹಜವಾಗಿ ಅರಳಿ ನಿಂತಿದೆ. ಕನ್ನಡ ನಾಡಿನ ಬಗೆಗೆ, ಭಾಷೆಯ ಬಗೆಗೆ ಬರೆದ ಹಾಡುಗಳು ಅವರ 'ಹಾಡೋಣ ಬಾ ತಂಗಿ' ಮತ್ತು 'ಗೀತಭಾರತಿ'ಯಲ್ಲಿದ್ದು ಮತ್ತೆ ಮತ್ತೆ ಮೆಲುಕು ಹಾಕುವಂತಿದೆ.

## ೪. ತತ್ತ್ವಪದ ಸಾಹಿತ್ಯ

ತತ್ತ್ವಪದ ಸಾಹಿತ್ಯವನ್ನು ಅನುಭಾವಸಾಹಿತ್ಯ, ಭಜನೆಪದಗಳೆಂದೂ ಕರೆಯುತ್ತಾರೆ. ತತ್ತ್ವಪದ ಸಾಹಿತ್ಯದಲ್ಲಿ ದೇವರಿಗೆ ಸಂಬಂಧಿಸಿದ ಒಂದು ಸಿದ್ಧಾಂತವಿದೆ. ಅದನ್ನು ತತ್ತ್ವಪದಕಾರ ಹಾಡಿನ ಮೂಲಕ ಅಭಿವ್ಯಕ್ತಿಸುತ್ತಾನೆ, ತತ್ವಜ್ಞಾನವೆಂದು, ಬ್ರಹ್ಮಜ್ಞಾನವೆಂದು ಈ ಸಾಹಿತ್ಯದ ಕುರಿತು ವಿದ್ವಾಂಸರು ಹೇಳಿದ್ದಾರೆ. ತತ್ವಪದ ಸಾಹಿತ್ಯವನ್ನು ಗ್ರಾಮೀಣ ಪ್ರದೇಶದಲ್ಲಿ ಹಾಡುವವರನ್ನು ಹೆಚ್ಚಾಗಿ ಕಾಣುತ್ತೇವೆ. ಈ ಸಾಹಿತ್ಯ ಒಂದು ರೀತಿಯಲ್ಲಿ ಜೀವಂತವಾಗಿ ಉಳಿದಿರುವುದೇ ಗ್ರಾಮೀಣ ಪ್ರದೇಶದಲ್ಲಿ. ಅದೂ ಭಜನೆ ಮಾಡುವವರಿಂದ, ಭಜನೆ ಸಾಮೂಹಿಕವಾಗಿ ಹಾಗೂ ಭಕ್ತನೊಬ್ಬನಿಂದಲೂ ನಡೆಯುತ್ತದೆ. ಇಲ್ಲಿ ತತ್ತ್ವಪದಕಾರರು ದೇವರ ಬಗೆಗಿನ ತಮ್ಮ ನಿಲುವನ್ನು : ಅಂತರಂಗದ ವಿಚಾರವನ್ನು ಹೇಳಿದ್ದಾರೆ. ಜೊತೆಗೆ ಅನ್ಯಾಯ, ಅತ್ಯಾಚಾರ, ಮೋಸ, ವಂಚನೆ, ಜಾತಿಯತೆಗಳನ್ನು ಅಲ್ಲಗಳೆದಿದ್ದಾರೆ. ಮಾನವೀಯ ಮೌಲ್ಯಗಳ ಬಗೆಗೆ ದನಿ ಎತ್ತಿ ಮಾತನಾಡಿದ್ದಾರೆ.

ತತ್ತ್ವಪದಕಾರರು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಕಂಡು ಬರುತ್ತಾರೆ. ಹಾಗೆ ನೋಡಿದರೆ ಈ ಸಾಹಿತ್ಯಕ್ಕೆ ಒಂದು ದೀರ್ಘಪರಂಪರೆಯೇ ಇದೆ. ಡಾ. ಬಸವರಾಜ ಸಬರದರು ಹೇಳುವ ಹಾಗೆ ಹನ್ನೆರಡನೆಯ ಶತಮಾನದ ವಚನಕಾರರಿಂದ ಈ ಪರಂಪರೆ ಪಾರಂಭವಾಗುತ್ತದೆ. ತತ್ತ್ವಪದಗಳನ್ನು ಸ್ವರವಚನಗಳೆಂದು ಗುರುತಿಸಿದರೆ ಸ್ವರ ವಚನಗಳನ್ನು ಮೊಟ್ಟ ಮೊದಲು ರಚಿಸಿದ ಕೀರ್ತಿ ಶಿವಶರಣರಿಗೆ ಸಲ್ಲುತ್ತದೆ. ಸಕಲೇಶ ಮಾದರಸ ಕನ್ನಡದ ಮೊಟ್ಟ ಮೊದಲನೆಯ ಸ್ವರವಚನಕಾರನೆಂದು ಸ್ಪಷ್ಟವಾಗಿದೆ ಎಂದಿದ್ದಾರೆ. ಈ ಸಾಹಿತ್ಯ ಅಧಿಕೃತವಾಗಿ ಪ್ರಾರಂಭವಾಗಿದ್ದುದು ಹದಿನಾರನೆಯ ಶತಮಾನದ ನಿಜಗುಣ ಶಿವಯೋಗಿಯವರಿಂದ.

ಹದಿನೆಂಟು - ಹತ್ತೊಂಬತ್ತನೆಯ ಶತಮಾನದಲ್ಲಿ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಮೈಲಾರ ಬಸವಲಿಂಗಶರಣ, ಕೈವಾರ ನಾರಾಯಣಪ್ಪ ಮುಂತಾದ ತತ್ತ್ವಪದಕಾರರು ಬರೆಯಲು ತೊಡಗಿದಾಗ ಅವರ ತತ್ವಪದಗಳು ಜನಸಾಮಾನ್ಯರಿಗೆ ಸೆಳೆದವು. ಬಹುಪಾಲು ಜನ ಅವುಗಳ ಮೋಡಿಗೆ ಒಳಗಾದರು.

ವಿಶೇಷವಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಬರುವ ಗುಲ್ಬರ್ಗಾ, ಬೀದರ, ರಾಯಚೂರು, ಕೊಪ್ಪಳ ಜಿಲ್ಲೆಗಳಿಂದಲೇ ಬಹುಪಾಲು ತತ್ತ್ವಪದಕಾರರು ಬಂದಿರುವುದು ತಿಳಿದು ಬರುತ್ತದೆ.

ಗುಲ್ಬರ್ಗಾ ಜಿಲ್ಲೆಯಿಂದ ರಾಮಪುರ ಬಕ್ಕಪ್ಪ, ಚೆನ್ನೂರ ಜಲಾಲಸಾಹೇಬ, ಖೈನೂರು ಕೃಷ್ಣಪ್ಪ, ಮೋಟನಹಳ್ಳಿ ಹಸನಸಾಹೇಬ, ಮಹಾಗಾಂವ ಮೀರಸಾಬ, ರಸ್ತಾಪುರಭೀಮ ಮತ್ತು ಕೋನಾಪುರ ರಾಮಪ್ಪ ಪ್ರಮುಖ ತತ್ತ್ವಪದಕಾರರಾದರೆ, ಬೀದರ ಜಿಲ್ಲೆಯ ತತ್ತ್ವಪದಕಾರರಲ್ಲಿ ಮರಕುಂದಿ ಬಸವಣ್ಣಪ್ಪ ನಿಜಲಿಂಗ ಭದ್ರೇಶ್ವರ, ಕೊಹಿನೂರ ಹುಸೇನಸಾಬ್ ಬೋರ್ಗಿ ರಹಿಮಾನಸಾಬ್, ಹುಡುಗಿಯ ಗುರುಪಾದಪ್ಪ, ನರಸಪ್ಪ ಮಾಸ್ತರ ಹಾಗೂ ಮದ್ದಿನವಾಡಿ ಅಜೀಜ ಪಟೇಲ ಮುಂತಾದವರು ಪ್ರಮುಖರಾಗಿದ್ದಾರೆ.

ಅದೇ ರೀತಿ ರಾಯಚೂರು ಜಿಲ್ಲೆಯ ತತ್ತ್ವಪದಕಾರರಲ್ಲಿ ಕೂಡಲೂರು ಬಸವಲಿಂಗ ಶರಣ, ಗೂಗಲ್ಲು ಪರಪ್ಪಯ್ಯ, ಗಟ್ಟೂರು ಹಂಪಣ್ಣ, ನೀರಲಕೇರಿ ಬಸವಲಿಂಗ ಶರಣ, ಘನಮಠದ ನಾಗಭೂಷಣ, ಅರವಲಿ ಬಿಜಲಿ ವಸ್ತಾದಿ, ಗಬ್ಬೂರು ಅಯ್ಯಪ್ಪಜ್ಜ, ದೇವದುರ್ಗದ ಚನ್ನಮಲ್ಲ, ಖೇಮಣ್ಣ, ತಾಳಪಲ್ಲಿ ವೆಂಕಯ್ಯ, ದೇವದುರ್ಗದ ಆದಿ ಆ ಮಾತೆಪ್ಪ, ಗಬ್ಬೂರು ಮಾರ್ತಂಡಪ್ಪ, ಗೋನವಾರ ಬಡೇಸಾಬ್, ಹನುಮಂತಪ್ಪ, ಮಂಜರ್ಲಾ ಖಾದರಸಾಬ್, ಯರಮಾರೆಪ್ಪ, ತಿಪ್ಪಣ್ಣ ತಾತಾ, ಹೊಸೂರು ತಿಪ್ಪಣ್ಣ ಹಾಗೂ ಕಲ್ಮಲಾದ ತಾಯಣ್ಣ ಪ್ರಮುಖರು.

ಕೊಪ್ಪಳ ಜಿಲ್ಲೆಯಲ್ಲಿ ಬರುವ ತತ್ತ್ವಪದಕಾರರೆಂದರೆ ಹೇರೂರು ವಿರುಪಣ್ಣ, ವಡಕಿ ತಾತಪ್ಪಯ್ಯ, ಇವರಷ್ಟೇ ಪ್ರಮುಖ ತತ್ತ್ವಪದಕಾರರೆಂದರೆ, ತಾಳಕೇರಿ ಬಸವರಾಜರವರು.

ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಿಂದೂ-ಮುಸ್ಲಿಂ ಸೌಹಾರ್ದತೆಗೆ, ಧರ್ಮ ಸಂಸ್ಕೃತಿಗಳ ಸಮನ್ವಯತೆಗೆ ತುಂಬಾ ಮಹತ್ವವಿದೆ. ಇಲ್ಲಿ ಬರುವ ತತ್ತ್ವಪದಕಾರರನ್ನೇ ಗಮನಿಸಿದರೆ ಹಿಂದೂ ತತ್ತ್ವಪದಕಾರರ ಗುರು ಮುಸ್ಲಿಂ ತತ್ತ್ವಪದಕಾರರಾಗಿದ್ದರೆ, ಮುಸ್ಲಿಂ ತತ್ತ್ವಪದಕಾರರ ಗುರು ಹಿಂದೂ ತತ್ತ್ವಪದಕಾರರಾಗಿದ್ದಾರೆ. ಸಂಸಾರದಲ್ಲಿದ್ದುಕೊಂಡೇ ದೇವರ ಧ್ಯಾನ ಮಾಡಿದುದು ತತ್ತ್ವಪದ ಸಾಹಿತ್ಯವನ್ನು ರಚಿಸಿದ ತತ್ತ್ವಪದಕಾರರು ಇಲ್ಲಿ ಕಾಣಸಿಗುತ್ತಾರೆ. ಯಾವ ತತ್ತ್ವಪದಕಾರ ಕೂಡ ಸಾಂಸಾರಿಕ ಬದುಕಿಗೆ ವಿಮುಖರಾಗಿಲ್ಲ. ಪ್ರತಿಯೊಬ್ಬ ತತ್ವಪದಕಾರ ಕೂಡ ರಾಷ್ಟ್ರೀಯ ಭಾವೈಕ್ಯತೆ, ಕೋಮುಸೌಹಾರ್ದತೆಗೆ ಮಿಡಿದಿರುವುದು ತಿಳಿದು ಬರುತ್ತದೆ. ಇಲ್ಲಿ ಕಂಡು ಬರುವ ಗುಡಿಗಳು ಹೊರಗೆ ಮಸೀದಿಯಂತೆ, ಕಂಡರೆ, ಒಳಗೆ ಗೋರಿಯ ಆಕಾರದ ಗದ್ದುಗೆಯಂತಿವೆ. ಇದಕ್ಕೆ ಕೊಡೇಕಲ್ ಬಸವಣ್ಣನ ದೇವಸ್ಥಾನ ಉದಾಹರಣೆ, ಇದರಂತೆ ತಿಂಥಣಿ ಮಾನೇಶ್ವರ ದೇವಸ್ಥಾನದಲ್ಲೂ ಮೌನುದ್ದೀನ್ ಇರುವುದು ಕಂಡು ಬರುತ್ತದೆ. ಈ ಎಲ್ಲ ಸ್ಥಳಗಳು ಕೂಡ ತತ್ತ್ವಪದಕಾರರ ಮೇಲೆ ಪ್ರಭಾವ ಬೀರಿರಬಹುದು.

ತತ್ತ್ವಪದ ಸಾಹಿತ್ಯವನ್ನು ಕೆಲವು ಜನ ವಿದ್ವಾಂಸರು ಅನುಭಾವ ಸಾಹಿತ್ಯವೆಂದು ಕರೆದಿದ್ದಾರೆ. ಅನುಭಾವವೆಂಬುದು ಅಂತರಂಗದ ರತ್ನ, ಅದು ಆತ್ಮವಿದ್ಯೆ, ಅನುಭಾವವೆಂಬುದು ನಿಜನಿವಾಸದಲ್ಲಿರುವುದು ಎಂದು ಹನ್ನೆರಡನೆಯ ಶತಮಾನದ ಶಿವಶರಣರು ಸ್ಪಷ್ಟಪಡಿಸಿದ್ದಾರೆ. ಡಾ. ಆರ್.ಡಿ. ರಾನಡೆಯವರು "ಅನುಭಾವವು ಅಂತಃಪ್ರಜ್ಞೆಯ ಮೂಲಕ ಬಂದ ಅನುಭವ. ಈ ಅಂತಃಪ್ರಜ್ಞೆಯು ಸದ್ಗುರುಗಳ ಅನುಗ್ರಹದಿಂದ ಪಾರಮಾರ್ಥಿಕ ಸಾಧನದಿಂದ ನಮ್ಮಂತರಂಗದಲ್ಲಿ ಜನಿಸುವ ಶಕ್ತಿ ವಿಶೇಷ" ಎಂದಿದ್ದಾರೆ.

ತಾಳಕೇರಿ ಬಸವರಾಜರು ಬರೆದ ತತ್ತ್ವಪದಗಳ ಮೇಲೆ ಬೇರೆ ತತ್ತ್ವಪದಕಾರರ ಪ್ರಭಾವ ಆಗಿದೆ. ಆದರೂ ಸ್ವಂತಿಕೆಯನ್ನು ಮೆರೆದಿರುವುದು ಗಮನಿಸಬೇಕಾದ ಅಂಶ. ಇಲ್ಲಿ ಬದುಕಿನುದ್ದಕ್ಕೂ ಕಂಡುಂಡ ಜೀವನಾನುಭವಗಳಿದ್ದು ಅವುಗಳಿಗೆ ಅನುಭಾವದ ಸ್ಪರ್ಷವಿದೆ. ನೀತಿ, ತಿಳುವಳಿಕೆ, ಸಂದೇಶ, ಜ್ಞಾನವನ್ನು ಹಂಚುವ ನಿಟ್ಟಿನಲ್ಲಿ ಇಲ್ಲಿನ ತತ್ವಪದಗಳು ಮುನ್ನೆಲೆಗೆ ಬಂದಿವೆ.

ಮಾನವನೆಂದರೆ ಹೇಗಿರಬೇಕು
ತನು-ಮನ-ಧನಗಳು ಶುದ್ದಿರಬೇಕು ‖ ಪ ‖

ಕೆಟ್ಟಗುಣಗಳನ್ನು ಸುಟ್ಟಿರಬೇಕು
ನಿಷ್ಠೆಯ ನಿಜವದು ಗಟ್ಟಿರಬೇಕು
ದುಷ್ಟರ ಸಂಗವ ಬಿಟ್ಟಿರಬೇಕು
ಶ್ರೇಷ್ಠನಾಗಿ ಬಾಳುತ್ತಿರಬೇಕು.

------------------

- - - - - - - - - - -

ಜ್ಞಾನವಂತರಿಗೆ ಬಾಗಲುಬೇಕು
ಮಾನವಂತರಿಗೆ ವಂದಿಸಬೇಕು
ಅನ್ಯ ಧರ್ಮಗಳ ಪ್ರೀತಿಸಬೇಕು ।
ತನ್ನ ಧರ್ಮದಲಿ ಭಕ್ತಿಯು ಬೇಕು ।

'ಮಾನವನೆಂದರೆ ಹೇಗಿರಬೇಕು' ಎನ್ನುವ ಈ ತತ್ತ್ವಪದದಲ್ಲಿ ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕನ್ನು ಸಾರ್ಥಕಪಡಿಸಿಕೊಳ್ಳುವ ಬಗೆಗೆ ಬರೆದಿದ್ದಾರೆ. ಇದರಲ್ಲಿ ನೀತಿಯಿದೆ. ಆದರ್ಶತತ್ತ್ವವಿದೆ. ಮಾನವತಾವಾದದ ಸಂದೇಶವಿದೆ. ಇಡೀ ತತ್ತ್ವಪದ ನಿಜವಾದ ಬದುಕನ್ನು ದರ್ಶಿಸುವಂತಿದೆ.

ಗುಡಿಯನ್ನು ಕಟ್ಟಿಸಲು - ಕಳಶವನ್ನು ಕೂಡಿಸಲು
ತೇರನ್ನು ಮಾಡಿಸಲು ಎನ್ನಳವೆ ತಂದೆ ?
ಕಡು ಬಡವನು ನಾನು, ನಿಮಗೇನು ಮಾಡುವೆನು?

ನನ್ನದು ಎನ್ನುವುದೆಲ್ಲಾ ನಿನ್ನದಲ್ಲವೇನು ॥

ಕಾಯವೆಂಬ ಹಣತೆಯಲ್ಲಿ ಜೀವಬತ್ತಿಯಾಗಿಹುದು

ಆತ್ಮದರಿವೆ ತೈಲವಾಗಿ ಸದಾತುಂಬಿ ಸೂಸುವುದು

ನಿಜ ನಿಷ್ಠೆಯು ಜ್ಯೋತಿಯಾಗಿ, ನಿನ್ನ ಮುಂದೆ ಬೆಳಗುವುದು

ಸದಾನಂದ - ಚಿದಾನಂದ ಪ್ರಭೆಯಾಗಿ ಹರಡಿಹುದು.

ತಾಳಕೇರಿ ಬಸವರಾಜರು ಬರೆದ 'ಗುಡಿಯನ್ನು ಕಟ್ಟಿಸಲು' ಎನ್ನುವ ಈ ತತ್ತ್ವಪದದ ಮೇಲೆ ಬಸವಣ್ಣನವರ 'ಉಳ್ಳವರು ಶಿವಾಲಯವ ಮಾಡುವರಯ್ಯಾ' ಎನ್ನುವ ವಚನದ ಪ್ರಭಾವ ಇದೆ. ದೇವರು ನಿಜವಾದ ಅರ್ಥದಲ್ಲಿ ನಮ್ಮೊಳಗೆ ಇದ್ದಾನೆ. ಅಂತರಂಗದ ಕದವನ್ನು ತೆರೆಯಬೇಕಾಗಿದೆ ಎನ್ನುವ ವಿಚಾರ ಇಲ್ಲಿದೆ. ಜೊತೆಗೆ ಶರಣರು ದೇವಾಲಯ ಸಂಸ್ಕೃತಿಯನ್ನು ವಿರೋಧಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವೈಚಾರಿಕ ಪ್ರಜ್ಞೆಯನ್ನು ಮೂಡಿಸಲು ಯತ್ನಿಸಿದ್ದನ್ನು ಇಲ್ಲಿ ವಿವೇಚಿಸಲಾಗಿದೆ.

ಜಾತಿಕುಲದ ಜಗಳ ಮಾಡಬೇಡ ಕಾಣಿರೊ ।

ಒಡಕು ತೊಡೆದು ಹಾಕಿರೊ

ಪ್ರೀತಿ ಸ್ನೇಹದಿಂದ ಮುಂದೆ ಮುಂದೆ ಸಾಗಿರೋ

ಕೂಡಿ ಮುಂದೆ ಸಾಗಿರೋ

ಮಾತು ಮನಗಳೊಂದೇಯಾಗಿ ಜಗದಿ ಬಾಳಿರೊ

ದೇವರಾಗಿ ಬಾಳಿರೊ

ಖ್ಯಾತವಾದ ವಿಶ್ವತತ್ತ್ವ ಧ್ವಜವ ಮೆರಿಸಿರೊ

ಧರ್ಮಧ್ವಜವ ಮೆರೆಸಿರೊ ॥

ಈ ಹೊತ್ತಿಗೂ ಪ್ರಸ್ತುತ ಎನ್ನುವಂತಿದೆ ಈ ತತ್ವಪದ, 'ಮಾನವರನ್ನು ದೇವರಾಗಿ' ಎನ್ನುವ ತತ್ವಪದದಲ್ಲಿನ ಈ ಸಾಲುಗಳು ಜಾತಿಕುಲದ ಜಗಳವನ್ನು ಸೂಕ್ಷ್ಮವಾಗಿ ಪ್ರಶ್ನಿಸುವಂತಿವೆ. ಪ್ರೀತಿ ಸ್ನೇಹದಿಂದ ಸಾಗಬೇಕಾದ ಮೌಲಿಕ ಬದುಕಿನ ಬಗೆಗೆ ಒತ್ತಿ ಹೇಳಿದ್ದಾರೆ. ಒಳ್ಳೆಯ ಮಾತು, ಬದುಕಿನಿಂದ ವಿಶ್ವಧ್ವಜವನ್ನು ಮೆರೆಸುವ ಬಗೆಗೆ ತಾಳಕೇರಿಯವರು ಹೇಳಿದ್ದಾರೆ. ವಿಶ್ವದ ಪರಿಕಲ್ಪನೆಯನ್ನಿಟ್ಟುಕೊಂಡ ಈ ತತ್ತ್ವಪದ ಮಾನವೀಯ ಮೌಲ್ಯಗಳನ್ನು; ನಿಸ್ವಾರ್ಥದಿಂದ ಬದುಕಬೇಕಾದ ಅಗತ್ಯತೆಯನ್ನು ಪ್ರತಿಪಾದಿಸುತ್ತದೆ.

“ಇವರೆಂಥ ಶರಣರು' ಎನ್ನುವ ತತ್ತ್ವಪದದಲ್ಲಿ ತಾಳಕೇರಿ ಬಸವರಾಜರವರು ಪ್ರಸ್ತುತ ಸಮಾಜದಲ್ಲಿ ಕಂಡು ಬರುವ ಡಾಂಭಿಕ ವ್ಯಕ್ತಿಗಳನ್ನು ಕುರಿತು ವ್ಯಂಗ್ಯವಾಗಿ ವಿಡಂಬಿಸುವ ರೀತಿ ಇಲ್ಲಿದೆ. ಜೊತೆಗೆ ಅವರ ನೈತಿಕತೆಯನ್ನು ಕೂಡ ಅಲ್ಲಗಳೆದಿದ್ದಾರೆ.

ಇವರೆಂಥ ಶರಣರು, ಇವರೆಂಥಾ ಭಕ್ತರು
ಬಂದವರಿಗೆ "ಬಾ" ಎನದೆ ಬಾಯಿ ಮುಚ್ಚಿಕೊಳ್ವರು

ಮಾತಿನಲ್ಲಿ ಮಧುರವಿಲ್ಲ, ನಡತೆಯಲ್ಲಿ ವಿನಯವಿಲ್ಲ.
ಶಿವಧ್ಯಾನ ನುಡಿಯೊಳಿಲ್ಲ. ಬಕಧ್ಯಾನ ಮಾಡ್ವರಲ್ಲ
ಪ್ರತಿಕ್ಷಣವೂ ಮೋಸತನ, ಹಗಲು ರಾತ್ರಿ ವಂಚಕತನ
ಕಳ್ಳಪೂಜೆ ಸುಳ್ಳಧ್ಯಾನ, ವ್ಯರ್ಥ ಹೊತ್ತುಗಳೆವರಣ್ಣ

ಭಂಡತನದಿ ಬಾಳುವರು ರಂಡೆಯರೊಡನಾಡುವರು ।
ಪುಂಡತನವ ಮಾಡುವರು, ಲಂಡರಾಗಿ ತಿರುಗುವರು
ಸುಳ್ಳ ಮಾತನಾಡುವರು ಕಳ್ಳತನವ ಮಾಡುವರು
ಒಳ್ಳೆತನವ ಬಿಟ್ಟವರು ಮಳ್ಳಮಂಕರಾಗಿಹರು ॥
"ಏನಂತೀರಿ' ಎನ್ನುವ ತತ್ತ್ವಪದದಲ್ಲಿ ತಾಳಕೇರಿಯವರು

ಮಾನವರೆಂದು ಹೇಳತೀರಿ ।
ಮಾನಗೆಟ್ಟು ತಿರಗತೀರಿ ।
ಜ್ಞಾನಿಗಳು ಮಾನಿಗಳು ಕೇಳಿದರೆ ।
ಆಗ ಏನಂತೀರಿ ನೀವು ಏನಂತೀರಿ ॥

ಕದ್ದಿಟ್ಟು ಕಾಳಿನ ಕಣಜಗಳ ತುಂಬತೀರಿ ।
ಇದ್ದರೂ ಬಡವರಿಗೆ ಇಲ್ಲೊಂದು ಹೇಳತೀರಿ
ಸದ್ದಿಲ್ಲದೆ ಕೊಳ್ಳಿ ಲೂಟಿಗರು ಬಂದು
ಕಸಿದೊಯ್ಯುವಾಗ
ಏನಂತೀರಿ ನೀವು ಏನಂತೀರಿ ॥

ಬೆಳ್ಳಿ ಬಂಗಾರ ಬಾಳಕೊಂಡು ಮನೆಯೊಳಗೆ ಇಡುತೀರಿ
ಕಳ್ಳಸಂತಿ ವ್ಯಾಪಾರ ಮಾಡಿ ಬಹಳ ಗಳಸ್ತೀರಿ ॥
ಸುಳ್ಳ ಖೊಟ್ಟಿ ನೋಟ ನಡಿಸಿ ಪೋಲೀಸರ
ಕೈಯಾಗ ಸಿಕ್ಕಾಗ
ಏನಂತೀರಿ ನೀವು ಏನಂತೀರಿ ॥

ಮಾನವತೆಯ ಸೋಗು ಹಾಕಿಕೊಂಡು ದಿನನಿತ್ಯ ನಡೆಸುವ ಮೋಸವಂಚನೆಗಳನ್ನು ಕಂಡ ಕವಿ ನೇರವಾಗಿಯೇ ಛಾಟಿ ಏಟು ನೀಡಿದ್ದಾರೆ. ಮುಗ್ಧ ಜನರ ಮೇಲೆ ಉಳ್ಳವರು ನಡೆಸುವ ಈ ಶೋಷಣೆ, ಮೋಸ ವಂಚನೆಗಳಾಟ ನಿಲ್ಲಬೇಕೆನ್ನುವುದೇ ಕವಿಯ ಪ್ರಧಾನ ಆಶಯವಾಗಿದೆ.

ಮಾತಿಲೊಂದು ಹೇಳತೀರಿ ಕೃತಿಯೊಂದು ಮಾಡ್ತೀರಿ ।
ಜಾತಿ ನೀತಿ ಮರ್ಮ ಮರೆತು ಜಾತಿ ಡಂಬರಾಗತೀರಿ ॥

ಬ್ರಾಹ್ಮಣರೆನ್ನುತ್ತೀರಿ ನೀರಾಗ ಮುಳುಗಿ ಏಳತೀರಿ
ಮೂಗುಬಾಯಿ ಮುಚ್ಚಿಕೊಂಡು ರಾಮಹರಿ ಎನ್ನುತ್ತೀರಿ
ಮಡಿಮೈಲ್ಗಿ ಎನ್ನುತ್ತೀರಿ ಬ್ರಹ್ಮಜ್ಞಾನ ಮರೆಯುತ್ತೀರಿ ।
ಮುಟ್ಟಿ ಮುಟ್ಟಿ ಎಂದು ಮುಂದೆ ಮೂರಮೊಳ ಹಾರತೀರಿ ॥

ಲಿಂಗಾಯತ್ರಂತ ಹೇಳತೀರಿ ಲಿಂಗ ಬಿಟ್ಟು ತಿರಗತೀರಿ
ಲಿಂಗತತ್ವವನ್ನು ಮರೆತು ಮನಸಿಗೆ ಬಂದಾಂಗ ನಡೆಯುತ್ತೀರಿ ॥
ಶೆಟ್ಟಿ ಜಂಗಮರೆನ್ನುತ್ತೀರಿ ಕೆಟ್ಟ ದಾರಿ ಹಿಡಿಯುತ್ತೀರಿ
ಕೆಟ್ಟ ಚಟಗಳನ್ನು ಮಾಡಿ ನಾವೇ ಹೆಚ್ಚು ಎನ್ನುತ್ತೀರಿ ॥

'ಜಾತಿ ಡಂಬರು' ಎನ್ನುವುದು ಈ ತತ್ವಪದದ ಹೆಸರು.

ನುಡಿದಂತೆ ನಡೆದು ತೋರಿಸಿದವರೆಂದರೆ ಶಿವಶರಣರು. ಇಂದಿನ ಆಧುನಿಕ ಯುಗದಲ್ಲಿ ಅಂತಹಜನ ಸಿಗುವುದು ವಿರಳವಾಗಿದೆ. ಹಣ, ಅಧಿಕಾರ, ಅಂತಸ್ತುಗಳ ಕಡೆ ಮುಖ ಮಾಡಿರುವ ಇಂದಿನ ಜಗತ್ತು ನುಡಿದಂತೆ ನಡೆಯುವಲ್ಲಿ ಹಿಂದೇಟು ಹಾಕುತಿದೆ. ನುಡಿದುದರಲ್ಲಿ ಹತ್ತು ಪ್ರತಿಶತಃ ಕೂಡ ಕೆಲಸ ಮಾಡದ ಜನರೇ ಬಹುಪಾಲು ಕಂಡು ಬರುತ್ತಿರುವುದರಿಂದ ಕವಿ ತಾಳಕೇರಿ ಬಸವರಾಜರವರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಜಲ್ದಿತಿಳಕೊ ಮನುಜ ನೀನು ಬಂದುದ್ದೆಲ್ಲಿ?
ನೀ ಹೋಗೋದೆಲ್ಲಿ?
ಬಂದ ಮೇಲೆ ಮಾಡಿದ್ದೇನು ಹೇಳೋ ಇಲ್ಲಿ
ನಾನು ನಂದು ನನ್ನವರೆಂದು ಭ್ರಮೆಯು ತಾಳಿದೆ । ಮತ್ತೆ
ದಾನವನಾಗಿ ಮಾನಗ್ಯಾನ ಮರೆತು ಬಾಳಿದೆ
ಹೀನಗುಣದ ಜಿಪುಣ ಕೇಳೊ ಸಿರಿಯು ನಿನ್ನದೆ
ಪ್ರಾಣ ಹೋಗುವಾಗ ಎಲ್ಲಾ ಬಿಟ್ಟು ನಡೆದೆ ॥

'ಜಲ್ದಿ ತಿಳಿಕೊ ಮನುಜ ನೀನು ಬಂದದ್ದೆಲ್ಲಿ?"

ಎನ್ನುವ ಈ ತತ್ತ್ವಪದದಲ್ಲಿ ಮನುಷ್ಯ ಬದುಕನ್ನು ಸಾರ್ಥಕಪಡಿಸಿಕೊಳ್ಳುವುದರ ಬಗೆಗಿನ ಚಿಂತನೆಯಿದೆ.

ತಾಳಕೇರಿ ಬಸವರಾಜರವರ 'ಅನ್ನವು ನಿನ್ನಲಿ ಇರುತನಕ" ಎನ್ನುವ ತತ್ತ್ವಪದ ಅತ್ಯಂತ ಜನಪ್ರಿಯ ಹಾಡಾಗಿದೆ. ಅವರ ಹೆಸರು ಈ ಗೀತೆಯಿಂದ ಅಜರಾಮರವಾಗಿದೆ ಎಂದರೆ ಅತಿಶಯೋಕ್ತಿ ಎನಿಸದು.

ಅನ್ನವು ನಿನ್ನಲಿ ಇರುತನಕೆಲ್ಲರು !
ನನ್ನವರು ತನ್ನವರು ಎನ್ನುವರು ॥
ಅನ್ನವು ನಿನ್ನಲ್ಲಿ ತೀರಿದ ಮರುದಿನ
ನಿನ್ನವರೆನ್ನುವರು ಯಾರಿಹರು ?

ಮಡದಿ ಮಾಡುವಳು ಕಡು ಪ್ರೇಮವನ್ನು ।
ಉಡುವದುಣುವವನು ನೀ ಕೊಡುವ ತನಕ ।
ಕಡಿಮೆಯಾಗಲು ಗಡ-ಬಡ-ಮಾಡುತ ।
ಬಡನಾಡಿ ಬರುವಳು ಬಾಗಿಲಕ ।

ಊರಿನ ಜನರೆಲ್ಲ ಕಾಂಚಾಣ ಇರೋ ತನಕ ।
ಇಂದ್ರ ಚಂದ್ರನೆಂದು ಕರೆಯುವರು ॥
ಕರದೊಳು ಕಾಂಚಾಣ ತೀರಿದ ಮರುದಿನ
ಹಿಂದಕ್ಕೆ ಬಹುದೂರ ಸರಿಯುವರು ।

ದುಡ್ಡು ಬಹಳಿರುವಾಗ ಹೆಂಡತಿ ಸತ್ತರೆ ।
ಅಡ್ಡಾಡಿ ಮಣ್ಣಿಗೆ ಕರೆಯುವರು ॥
ದುಡ್ಡೆಲ್ಲ ತೀರಿ ತಾನು ಸತ್ತಾಗ ಯಾರ‍್ಯಾರು ।
ಹಿಡಿಮಣ್ಣು ಹಾಕದೆ ಹೋಗುವರು ।

ಇಡೀ ತತ್ತ್ವಪದ ಜನರ ಮನಸ್ಥಿತಿಯನ್ನು ಸಮರ್ಥವಾಗಿ ಬಿಂಬಿಸುವಂತಿದೆ. ಜನ ಮೌಲ್ಯಗಳಿಂದ ದೂರಸರಿದು ನಿಂತದ್ದು; ಎಲ್ಲಕ್ಕಿಂತಲೂ ಹಣವೇ ಮುಖ್ಯವಾಗಿ ಕಾಣುತ್ತಿರುವುದನ್ನು ತಾಳಕೇರಿಯವರು ಸಮರ್ಥವಾಗಿ ತಿಳಿಸಿದ್ದಾರೆ. ಆಧುನಿಕ ಜಗತ್ತು ಇಂದು ಸಂಪೂರ್ಣವಾಗಿ ಜಾಗತೀಕರಣಕ್ಕೆ ಒಳಗಾಗಿ ನಂಬಿಕೆ, ಪ್ರೀತಿಯಂತಹ ಗುಣಗಳನ್ನು ಕಳೆದುಕೊಂಡು ನಲುಗುವುದನ್ನು ಕವಿ ಐದು ದಶಕಗಳ ಹಿಂದೆಯೇ ಚಿಂತಿಸಿದ್ದಾರೆ.

ಹೊತ್ತು ಮೀರಿ ಹೋದ ಮೇಲೆ ।
ಅತ್ತರೇನು ಬರುವುದು
ಮುತ್ತಿಗಿಂತ ಹೊತ್ತು ಮೇಲು

ತಿಳಿಯೆ ಮನುಜ ಬಾಳಿದು

ಸಾವು ನೋವು ನಿನ್ನವಲ್ಲ ಎಂಬ ಅರಿವದು
ಜೀವನೊಂದೆ ಸತ್ಯವೆಂದು ಸಾರುತಿರುವುದು
ಭಾವದಲ್ಲಿ ನಂಬಿಗೆಯಿದು ಸಾಕ್ಷಿಯಾಗ್ವದು
ದೇವನೆಂದು ನಿನಗೆ ದಿವ್ಯ ಹೆಸರನ್ನಿಡುವುದು

ರಕ್ತ ಮಾಂಸ ತುಂಬಿನಿಂತ ರೂಪ ಕಾಣಿದು
ವ್ಯಕ್ತವಾದ ಬರಿಯ ಭ್ರಮೆಯು ನನ್ನದೆಂಬುದು
ಸೂಕ್ತ ಸಲಹೆ ಕೇಳು ಸೂಜ್ಞ ಜನತೆಯಿರುವುದು
ಮುಕ್ತಿ ಸುಲಭ ದೊರೆಯುವುದಲ್ಲಿ ವಚನ ಸುಧೆಯದು

ದೂರದಲ್ಲಿ ಕಂಡ ನೆರಳು ದಿವ್ಯ ಲೋಕದು !
ದಾರಿದೀಪ ಕೈಯೊಳಿಹುದು ಜ್ಞಾನವೆಂಬುದು
ಸಾರುತಿಹುದು ಶರಣತತ್ವ ಮಾನ್ಯವಾದುದು
ಯಾರು ನಾನು? ಎಂಬುದರಿತು ಅಡಿಯ ಮುಂದಿಡು

ಈ ತತ್ತ್ವಪದದಲ್ಲಿ ತಾಳಕೇರಿ ಬಸವರಾಜರವರು ಸಮಯ ಪ್ರಜ್ಞೆಯ ಬಗೆಗೆ ಮಾರ್ಮಿಕವಾಗಿ ಹೇಳಿದ್ದಾರೆ. ಅದರ ಜೊತೆಗೆ ಬದುಕಿನಲ್ಲಿ ಒಳ್ಳೆಯ ಭಕ್ತಿ ಭಾವವನ್ನು ಇಟ್ಟುಕೊಂಡು ದೇವರನ್ನು ಒಲಿಸಿಕೊಳ್ಳುವುದು, ಮೋಹದ ಬಲೆಗೆ ಬಿದ್ದು ಒದ್ದಾಡುವುದಕ್ಕಿಂತ ಮುಂಚೆ ಜ್ಞಾನದ ಕಡೆ, ಮುಖ್ಯವಾಗಿ ಆತ್ಮಜ್ಞಾನದ ಕಡೆ ಮನಸ್ಸನ್ನು ತಿರುಗಿಸಬೇಕೆಂದು ಹೇಳಿದ್ದಾರೆ. ದೇವರು, ಭಕ್ತಿ, ಆಧ್ಯಾತ್ಮದ ಹಿನ್ನೆಲೆಯನ್ನಿಟ್ಟುಕೊಂಡು ರಚನೆಯಾದ ಈ ತತ್ತ್ವಪದ ಜಿಜ್ಞಾಸೆಗೆ ಒಳಪಡಿಸುವಂತಿದೆ.

ತಾಳಕೇರಿ ಬಸವರಾಜರು ಬರೆದ ತತ್ತ್ವಪದಗಳು ಹಣ, ಜ್ಞಾನ, ಬದುಕು, ಆಧ್ಯಾತ್ಮ ಚಿಂತನೆ, ಡಾಂಭಿಕತೆ, ಜಾತಿಯತೆ, ಮಾನವೀಯತೆ, ಹೀಗೆ ಬದುಕಿನ ಎಲ್ಲ ಮಗ್ಗಲುಗಳನ್ನು ಕುರಿತಂತಿವೆ. ಮೇಲ್ನೋಟಕ್ಕೆ ಸರಳ ರಚನೆಗಳು ಎಂದೆನಿಸಿದರೂ ಆಳದಲ್ಲಿ ಅಪಾರವಾದ ಅರ್ಥದ ಹೊಳಹುಗಳನು ಹುದುಗಿಸಿಕೊಂಡಿವೆ. ಒಂದು ಕ್ಷಣ ಮನಸ್ಸನ್ನು ಹಿಡಿದು ನಿಲ್ಲಿಸುವ ಚಿಂತನೆಗೆ ಹಚ್ಚುವ ಕೆಲಸವನ್ನು ಇವರ ತತ್ತ್ವಪದಗಳು ಮಾಡುತ್ತವೆ. ನಮ್ಮ ಬದುಕಿನಲ್ಲಿ ಇಂದು ತಳಮಳ, ಆತಂಕ, ತಲ್ಲಣ, ಹತಾಶೆ ಭಾವನೆಗಳು ಕಂಡು ಬರುತ್ತಿವೆ. ನೆಮ್ಮದಿ ಇಲ್ಲದಂತಾಗಿದೆ. ಇದಕ್ಕೆ ಉತ್ತರವನ್ನು: ಸಾಂತ್ವನವನ್ನು ತಾಳಕೇರಿ ಬಸವರಾಜರ ತತ್ತ್ವಪದಗಳು ಮತ್ತು ಉಳಿದ ತತ್ತ್ವಪದಕಾರರ ಸಾಹಿತ್ಯ ನೀಡಬಲ್ಲದು ಎಂದು ಭಾವಿಸಿರುವೆ.

## ೫. ಸಮಾರೋಪ

ತಾಳಕೇರಿ ಬಸವರಾಜ ಹೂಗಾರರದು ಬಹುಮುಖ ಪ್ರತಿಭೆ; ಬಹುಮುಖ ವ್ಯಕ್ತಿತ್ವವಾಗಿತ್ತು. ಸಾಹಿತ್ಯ, ಸಂಗೀತ, ರಂಗಭೂಮಿ ಹೀಗೆ ಎಲ್ಲದರಲ್ಲೂ ಅವರಿಗೆ ಸಮಾನ ಆಸಕ್ತಿ ಮತ್ತು ಪ್ರೀತಿಯಿತ್ತು. ಕೇವಲ ಎರಡನೆಯ ತರಗತಿಯವರೆಗೆ ಓದಿದ ಹೂಗಾರ ಮನೆತನದ ಹೂ ಮಾರುವ ಹುಡುಗ ನೋಡು ನೋಡುತ್ತಿದ್ದಂತೆಯೇ ಅಗಾಧವಾಗಿ ಬೆಳೆದು ನಿಂತದ್ದು ಆಶ್ಚರ್ಯವೆನಿಸಿದರೂ ಸತ್ಯ, ಜಾನಪದ ಬದುಕನ್ನು ಬದುಕಿ ಜಾನಪದವನ್ನು ಉಸಿರಾಗಿಸಿಕೊಂಡಿದ್ದ ತಾಳಕೇರಿ ಬಸವರಾಜರವರ ಸೇವೆ ಸ್ಮರಣೀಯ.

ಅನಿರೀಕ್ಷಿತವಾಗಿ ಸಿಕ್ಕ ಪಾತ್ರ ಮಾಡುವ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು; ಬಣ್ಣದ ಬದುಕಿಗೆ ಕಾಲಿಟ್ಟು ಯಶಸ್ವಿಯಾದ ತಾಳಕೇರಿಯವರು ಅಪರೂಪದ ಕಲಾವಿದರು. ಸ್ತ್ರೀ ಪಾತ್ರಗಳನ್ನು ಮಾಡಿ ಪ್ರೇಕ್ಷಕರ ಮನವನ್ನು ಸೂರೆಗೊಂಡು ನಾಟಕ ಕಂಪನಿಯನ್ನು ಕಟ್ಟಿ ಕಲಾಸೇವೆ, ಕನ್ನಡದ ಸೇವೆ ಮಾಡಿದುದು ಈಗ ಇತಿಹಾಸ.

ಜಾನಪದ ಗೀತೆ, ತತ್ತ್ವಪದ ಸಾಹಿತ್ಯ, ಜೀವನ ಚರಿತ್ರೆ, ನಾಮಾವಳಿ, ಲಾವಣಿ, ನಾಟಕ, ಹೀಗೆ ಸಾಹಿತ್ಯದ ಬಹುಪಾಲು ಪ್ರಕಾರಗಳಲ್ಲೂ ಕೃಷಿ ಮಾಡಿದ್ದರು. ಸಾಹಿತ್ಯದ ಮೂಲಕ ನೀತಿ, ಕರುಣೆ, ದಯೆ, ಪ್ರೀತಿ, ವಿಶ್ವಾಸ, ಜೀವನ ಮೌಲ್ಯ ರಾಷ್ಟ್ರ ಪ್ರೇಮ, ಕನ್ನಡ ಪ್ರೇಮ, ಸೌಹಾರ್ದತೆ, ಮತೀಯ ಸಹಿಷ್ಣುತೆ ಮುಂತಾದ ಉದಾತ್ತ ಮೌಲ್ಯಗಳನ್ನು ಕಟ್ಟಿಕೊಟ್ಟ ಅವರ ಸಾಹಿತ್ಯ ಸೇವೆ ಅನುಕರಣೀಯವಾದುದು ಮತ್ತು ಗೌರವಕ್ಕೆ ಪಾತ್ರವಾದುದಾಗಿದೆ.

ಅವರ ಸಾಹಿತ್ಯದ ಬಹುಪಾಲು ಅಂಶ ಭಕ್ತಿಯೇ ಆಗಿದೆ. ಆ ಮೂಲಕ ಜೀವನ ಪ್ರೀತಿ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಲು ಯತ್ನಿಸಿದ್ದಾರೆ. ಮಹಿಳೆ ಅದರಲ್ಲೂ ಮಾತೃ ವಾತ್ಸಲ್ಯದ ಬಗೆಗೆ ಬಹಳಷ್ಟು ಬರೆದಿದ್ದಾರೆ. ಮನುಷ್ಯ ಬದುಕಿನ ಸಾರ್ಥಕತೆಯ ಕುರಿತಂತೆ ಅವರ ಸಾಹಿತ್ಯದಲ್ಲಿ ಕಾಣುತ್ತೇವೆ. ನಮ್ಮ ನಾಡಿನ ಹಿರಿಮೆ-ಗರಿಮೆಗಳನ್ನು ಅದರ ಜೊತೆಗೆ ಭಾಷೆಯ ಬಗೆಗೆ ನಮಗಿರಬೇಕಾದ ಕಳಕಳಿ ಮತ್ತು ಅಭಿಮಾನವನ್ನು ಕೂಡ ಸೊಗಸಾಗಿ ಚಿತ್ರಿಸಿದ್ದಾರೆ.

ಬಡತನವನ್ನೇ ಹಾಸಿ ಬಡತನವನ್ನೇ ಹೊದ್ದುಕೊಂಡ ಬದುಕು ಅವರದಾಗಿದ್ದರೂ ಚಿಂತಿಸಲಿಲ್ಲ, ಮಾನವೀಯತೆಯಿಂದ, ಸ್ವಾಭಿಮಾನದಿಂದ ಅವರು ಬದುಕು ನಡೆಸಿದವರು. ಈಗಲೂ ಬಸವರಾಜರವರ ಹೆಸರನ್ನು ಕೇಳಿದಾಗ 'ತಾಳಕೇರಿ'ಯ ಜನ ಸಂತೋಷ - ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ. ಅವರು ತಮ್ಮ ಸಮಕಾಲೀನ ಕವಿಗಳಾಗಿದ್ದ ಶಾಂತರಸ, ಸಿದ್ದಯ್ಯ ಪುರಾಣಿಕ, ದೇವೇಂದ್ರ ಕುಮಾರ ಹಕಾರಿ, ಪಂಚಾಕ್ಷರಿ ಹಿರೇಮಠ, ಮುಂತಾದವರ ಜೊತೆಗೆ ಒಳ್ಳೆಯ ಸ್ನೇಹವನ್ನಿಟ್ಟುಕೊಂಡಿದ್ದರು. ಪುಸ್ತಕಗಳನ್ನು ಪ್ರಕಟವಾದ ತಕ್ಷಣ ಕವಿಮಿತ್ರರು 'ಪುಸ್ತಕ' ವಿನಿಮಯ ಮಾಡಿಕೊಂಡು ಸಂತೋಷವನ್ನು ಹಂಚಿಕೊಳ್ಳುತ್ತಿದ್ದರು. ಒಟ್ಟಾರೆ ಅವರ ಸಾಹಿತ್ಯಸೇವೆಯಿಂದ ಕನ್ನಡ ಸಾರಸ್ವತ ಲೋಕ ಶ್ರೀಮಂತವಾಗಿದೆ.

***